ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

10 ಫೆಬ್ರವರಿ 2016 ಪುಟ 20 ರೂ. 15/-




ಮೈಸೂರು ಬಹುರೂಪಿಯ ವಿರಾಟ ರೂಪ




ಹೆಬ್ಬಾಳದ ಬೇಗುದಿ

ಅಪರಾಧ ಮತ್ತು ಹೊಣೆಗಾರಿಕೆ



ಇದು ಯಾವ ಇಸ್ಲಾಂ?






ಉತ್ತರಕನ್ನಡ

ಕೈ ಪ್ರಬಲ ಕಮಲ ವಿಫಲ



ವಾಘಾ ಗಡಿಯಲ್ಲಿ ಕುಚೇಷ್ಟೆ ಮತ್ತು ದೇಶಪ್ರೇಮ



ಪಂಜಾಬ್ ರಾಜ್ಯಕ್ಕೆ ಸೇರಿದ ಭಾರತ ಮತ್ತು ಪಾಕಿಸ್ತಾನ ಗಡಿಭಾಗವಾದ ವಾಘಾ ಎಂಬಲ್ಲಿ ಪ್ರತಿನಿತ್ಯ ಅಪರೂಪದ ಕಾರ್ಯಕ್ರಮವೊಂದು ನಡೆಯುತ್ತದೆ ಎಂದು ಪತ್ರಿಕೆಗಳಲ್ಲಿ ಓದಿದ್ದೆವು. ಅಲ್ಲಿ ನಡೆಯುವ ಡ್ರಿಲ್ ನೋಡಲು ಪ್ರತೀದಿನ ಎರಡೂ ದೇಶಗಳ ಸಾವಿರಾರು ಜನರು ಸೇರುತ್ತಾರೆಂದೂ, ಇದು ಎರಡು ದೇಶಗಳ ಬಾಂಧವ್ಯವನ್ನು ನೆನಪಿಸುವ ವಿಶಿಷ್ಟ ಕಾರ್ಯಕ್ರಮವೆಂದೂ ನಾನು ಭಾವಿಸಿದ್ದೆ. ಪತ್ರಿಕಾವರದಿಗಳ ವರ್ಣನೆ ಹಾಗಿತ್ತು. ಆದರೆ ಕಣ್ಣಾರೆ ಕಂಡ ವಾಸ್ತವ ಒಂದು ರೀತಿಯ ಜಿಗುಪ್ಸೆಯನ್ನು ಮೂಡಿಸಿತು. ಅಷ್ಟೇ ಅಲ್ಲ, ಗಡಿಯಿಂದ ಬಹುದೂರ ಇರುವ ನಮಗೆ ಸಿಗುವ ಚಿತ್ರಣವು ಯಾವಾಗಲೂ ಒಂದಷ್ಟು ಮಸಾಲೆಯಿಂದ ಕೂಡಿರುತ್ತದೆಂಬುದು ಮನದಟ್ಟಾಯಿತು.

ಅಮೃತಸರದ ಸ್ವರ್ಣಮಂದಿರ ಅಥವಾ ಜಲಿಯನ್‌ವಾಲಾಬಾಗ್‌ಗಳನ್ನು ನೋಡಲು ನೀವು ಹೋದರೆ ಸಾಕು, ಟ್ಯಾಕ್ಸಿಯವರು ನಿಮ್ಮನ್ನು ಸುತ್ತುವರಿಯುತ್ತಾರೆ. 'ವಾಘಾ ಬಾರ್ಡರ್, ವಾಘಾ ಬಾರ್ಡರ್' ಎಂಬುದು ಮಂತ್ರದಂತೆ ಅವರ ಬಾಯಿಯಿಂದ ಬರುತ್ತಿರುತ್ತದೆ. ಆ ಕ್ಷಣಕ್ಕೆ ನಿಮಗೆ ಇವೆರಡೂ ಸ್ಥಳಗಳಿಗಿಂತ ವಾಘಾ ಬಾರ್ಡರ್ರೇ ಅತ್ಯಂತ ಪ್ರೇಕ್ಷಣೀಯ ಸ್ಥಳ ಎಂದು ಭಾಸವಾಗುವಷ್ಟು ಅದರ ಸ್ಮರಣೆ ಇರುತ್ತದೆ. ಅವರಲ್ಲಿ ಯಾರಾದರೂ ಒಬ್ಬರನ್ನು ನೀವು ಮಾತಾಡಿಸಿ, ದರ ಕುದುರಿಸಿ, ವಾಘಾಕ್ಕೆ ಹೋಗುವುದನ್ನು ನಿಗದಿಪಡಿಸಿಕೊಳ್ಳುತ್ತೀರಿ.

ವಾಘಾದಲ್ಲಿನ ಸೈನಿಕ ಕವಾಯಿತನ್ನು ಸರಿಯಾಗಿ ನೋಡಬೇಕೆಂದರೆ, ಸಾಕಷ್ಟು ಮುಂಚೆಯೇ ಹೋಗಿ, ಸರಿಯಾದ ಜಾಗವನ್ನು ಹಿಡಿಯಬೇಕು ಎಂಬ ಸೂಚನೆ ಮೊದಲೇ ಸಿಕ್ಕಿರುತ್ತದೆ. ಹಾಗಾಗಿ ಸ್ವರ್ಣಮಂದಿರವನ್ನು ವಿರಾಮವಾಗಿ ನೋಡುವುದಕ್ಕೂ ಸಾಧ್ಯವಾಗುವುದಿಲ್ಲ, ಅಲ್ಲಿನ ಲಂಗರ್‌ಖಾನಾ(ಊಟದ ಮನೆ)ದಲ್ಲಿ ಭಾರೀ ರುಚಿಯಾದ ಆದರೆ ಸರಳವಾದ ಊಟವನ್ನು ಸವಿಯುವುದೂ ಸಾಧ್ಯವಾಗುವುದಿಲ್ಲ, ಆ ರೀತಿ 'ವಾಘಾ ಬಾರ್ಡರ್, ವಾಘಾ ಬಾರ್ಡರ್' ಎಂಬುದು ಕಿವಿಯಲ್ಲಿ ಗುಂಯ್‌ಗುಡುತ್ತಿರುತ್ತದೆ.

ಸ್ವರ್ಣಮಂದಿರದಿಂದ ಜಲಿಯನ್‌ವಾಲಾಬಾಗ್ ಕಾಲ್ನಡಿಗೆಯ ದೂರದಲ್ಲಿದೆ. 1920ರಲ್ಲೇ ಶುರುವಾದ ಒಂದು ಟ್ರಸ್ಟ್ ಜಲಿಯನ್‌ವಾಲಾಬಾಗ್‌ನ ನಿರ್ವಹಣೆ ಮಾಡುತ್ತಿದೆ. ಸ್ವಾತಂತ್ರ್ಯ ಬಂದನಂತರ ಅಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಇತ್ತೀಚೆಗೆ ಅದನ್ನು ಇನ್ನಷ್ಟು ಅರ್ಥಪೂರ್ಣವಾಗಿಸಿರುವ ಸೂಚನೆ ಇದೆ. ಜನರಲ್ ಡಯರ್ ಗುಂಡು ಹಾರಿಸಲು ಆದೇಶ ನೀಡಿದಾಗ, ಆ ಮೈದಾನಕ್ಕಿದ್ದ ಒಂದೇ ಸಣ್ಣ ಓಣಿಯಲ್ಲಿಯೇ ಈಗಲೂ ಸಾಗಬೇಕು. ನೂರಾರು ಜನರು ಜೀವ ಉಳಿಸಿಕೊಳ್ಳಲೆಂದು ಹಾರಿ ಜೀವ ಕಳೆದುಕೊಂಡ ಬಾವಿ, .303 ರೈಫಲ್‌ನಿಂದ ಹಾರಿದ ಗುಂಡುಗಳಿಂದ ನೂರಾರು ರಂಧ್ರ ಮಾಡಿಕೊಂಡಿರುವ ಗೋಡೆ ಎಲ್ಲವೂ ನಮ್ಮಲ್ಲಿ ಸ್ವಾತಂತ್ರ್ಯ ಹೋರಾಟದ ಚೈತನ್ಯವನ್ನು ಮರಳಿ ತರುತ್ತವೆ. ಈ ಸ್ಮಾರಕವನ್ನು ನೋಡಲು ದುಡ್ಡು ಕೊಟ್ಟು ಟಿಕೆಟ್ ಕೊಳ್ಳುವ ಅಗತ್ಯವಿಲ್ಲ, ಒಂದು ನಿಜಾರ್ಥದ ಸಾರ್ವಜನಿಕ ಜಾಗವನ್ನಾಗಿ ಉಳಿಸಿಕೊಳ್ಳಲು ಇಂಥವು ಮುಖ್ಯ. ವಿಶಾಲವಾದ ಮೈದಾನ, ಪಾರ್ಕ್, ಸ್ಮಾರಕ, ಬಾವಿ, ಗೋಡೆ, ಚಿತ್ರ ಪ್ರದರ್ಶನ ಮತ್ತು ಹತ್ಯಾಕಾಂಡ ನಡೆದ 2 ದಶಕಗಳ ನಂತರ ಅದರ ರೂವಾರಿ ಡಯರ್‌ನನ್ನು ಕೊಂದ ಹುತಾತ್ಮ ಉಧಂಸಿಂಗನ ಬಗ್ಗೆ ಎಲ್ಲವನ್ನೂ ನೋಡಲು ಸಾಕಷ್ಟು ಸಮಯ ಇಟ್ಟುಕೊಂಡು ಹೋಗಬೇಕು.

ಆದರೆ ಅದು ಸಾಧ್ಯವಾಗುವುದಿಲ್ಲ, ಇತಿಹಾಸದ ಘಟನಾವಳಿಗಿಂತ ವರ್ತಮಾನದ ವಾಘಾ ಬಾರ್ಡರ್ ನಮ್ಮನ್ನು ಎಳೆಯುತ್ತಿರುತ್ತದೆ. ಏಕೆಂದರೆ, ಜಲಿಯನ್‌ವಾಲಾಬಾಗ್‌ನ ಗೋಡೆಗಳ ಒಳಗೆ ತಣ್ಣಗಿನ ಸ್ಮಾರಕ ಇರಬಹುದಾದರೂ, ಹೊರಗಡೆ ಅದೊಂದು ಸಂತೆ. ಗೋಡೆಯನ್ನು ದಾಟಿ ಹೊರಗೆ ಬರುವುದಕ್ಕೆ ಮುಂಚೆಯೇ 'ವಾಘಾ ಬಾರ್ಡರ್, ವಾಘಾ ಬಾರ್ಡರ್' ಕೇಳಿಸುತ್ತಿರುತ್ತದೆ. ಟ್ಯಾಕ್ಸಿವಾಲಾಗಳು ಮತ್ತು ಅವರ ಏಜೆಂಟರು ನಿಮ್ಮನ್ನು ಮುತ್ತಿಕೊಳ್ಳುತ್ತಾರೆ. ಮೊದಲೇ ನಿಗದಿಪಡಿಸಿಕೊಂಡ ವಾಹನ ಹತ್ತಿ ವಾಘಾದ ಕಡೆಗೆ ಸಾಗಿದರೆ ಕೆಲವು ಆಶ್ಚರ್ಯಕರ ಸಂಗತಿಗಳು ಕಾದಿರುತ್ತವೆ.

ಪ್ರವಾಸಿಗಳಿಗೆ ದಾರಿತೋರುವ ಫಲಕಗಳೆಲ್ಲದರಲ್ಲಿ ವಾಘಾ ಅಥವಾ ವಾಘಾ ಬಾರ್ಡರ್ ಈ ದಿಕ್ಕಿಗಿದೆ ಎಂದು ತೋರಿಸಲಾಗಿರುತ್ತದೆ. ಆದರೆ, ರಸ್ತೆ ಬದಿಗೆ ನೆಟ್ಟ ಕಲ್ಲುಗಳಲ್ಲಿ ಯಾವುದರ ಮೇಲೂ ವಾಘಾ ಇಲ್ಲ, ಬದಲಿಗೆ ಅಟ್ಟಾರಿ ಅಥವಾ ಅಟ್ಟಾರಿ ಬಾರ್ಡರ್ ಅಂತ ಇರುತ್ತದೆ. ಅದೇಕೆ ಎನ್ನುವುದನ್ನು ಕೇಳಿದರೆ ನಮ್ಮನ್ನು ಕರೆದೊಯ್ಯುವ ವಾಹನದ ಚಾಲಕ ಸರಿಯಾಗಿ ಉತ್ತರ ಕೊಡಲಿಲ್ಲ, ಅಲ್ಲಿಗೆ ತಲುಪಿದ ಮೇಲೆ ಗೊತ್ತಾಗಿದ್ದು ಅಸಲೀ ಸಂಗತಿಯನ್ನು ಬಿಡಿಸಿಟ್ಟಿತು. ವಾಘಾ ಎಂಬುದು ಪಾಕಿಸ್ತಾನದ ಹಳ್ಳಿ. ಅಟ್ಟಾರಿ ಭಾರತದಲ್ಲಿರುವ ಹಳ್ಳಿ. ಇವೆರಡರ ನಡುವೆ ಗಡಿಯಿದೆ.



ಬಹುಶಃ ವಾಘಾ ಬಾರ್ಡರ್ ಎಂದು, ಇಂದು ಪಾಕಿಸ್ತಾನದಲ್ಲಿರುವ ಹಳ್ಳಿಯ ಹೆಸರಿನಲ್ಲಿ ಕರೆಯುವುದು ಯಾರಿಗೋ ಇಷ್ಟವಾಗಿಲ್ಲ. ಹಾಗಾಗಿ ಅಟ್ಟಾರಿ ಬಾರ್ಡರ್ ಎಂದು ಅದನ್ನು ಬದಲಿಸುವ ಪ್ರಯತ್ನ ನಡೆದಿದೆ. ಆದರೆ ಜನರ ಮನಸ್ಸಿನಲ್ಲಿ ಉಳಿದುಕೊಂಡಿರುವ ವಾಘಾ ಬಾರ್ಡರ್‌ಅನ್ನು ಅಳಿಸಲು ಆಗಿಲ್ಲ.

ಈ ಎರಡು ಹಳ್ಳಿಗಳ ನಡುವಿನ ದೂರ ಕೆಲವೇ ಕಿ.ಮೀ.ಗಳು. 6-7 ದಶಕಗಳ ಹಿಂದೆ ಬಹುಶಃ ಈ ಹಳ್ಳಿಗಳ ಜನರು ಪ್ರತಿದಿನ ಭೇಟಿಯಾಗುತ್ತಿದ್ದಿರಬಹುದು ಇತ್ಯಾದಿ ಆಲೋಚನೆಗಳು ನಮ್ಮಲ್ಲಿ ಬರುವುದಕ್ಕೆ ಮುಂಚೆಯೇ ಆಶ್ಚರ್ಯಕರವಾದ ಇನ್ನೊಂದು ಸಂಗತಿ ಗಮನಕ್ಕೆ ಬರುತ್ತದೆ. ಈ ಗಡಿಯಿಂದ ಅಮೃತಸರ ಕೇವಲ 30 ಕಿ.ಮೀ.ಗಳ ದೂರದಲ್ಲಿದೆಯೆಂದು ಫಲಕಗಳು ತೋರುತ್ತಿವೆ. ಇನ್ನೊಂದು ದಿಕ್ಕಿನ ಫಲಕಗಳಲ್ಲಿ ಲಾಹೋರ್ ಸಹ ಕಾಣಿಸುತ್ತಿದೆ. ಪಾಕಿಸ್ತಾನದಲ್ಲಿ ಇಸ್ಲಾಮಾಬಾದ್ ಬಿಟ್ಟರೆ ಅತ್ಯಂತ ಮಹತ್ವದ ನಗರವದು. ನಮ್ಮ ಭಗತ್‌ಸಿಂಗ್ ಅದೇ ಲಾಹೋರಿನ ನ್ಯಾಷನಲ್ ಕಾಲೇಜಿನಲ್ಲಿ ಓದುತ್ತಿದ್ದದ್ದು, ಅದೇ ಲಾಹೋರಿನಲ್ಲಿಯೇ ಸ್ಯಾಂಡರ್ಸ್‌ನನ್ನು ಕೊಂದಿದ್ದು, ಅದೇ ಲಾಹೋರ್ ಜೈಲಿನಲ್ಲಿಯೇ ಭಗತ್‌ಸಿಂಗ್, ಸುಖದೇವ್ ಮತ್ತು ರಾಜಗುರು ಅವರುಗಳನ್ನು ಗಲ್ಲಿಗೇರಿಸಿದ್ದು. ಆ ಲಾಹೋರ್ ವಾಘಾ ಗಡಿಯಿಂದ ಕೇವಲ 25 ಕಿ.ಮೀ. ದೂರದಲ್ಲಿದೆ. ಇನ್ನೂ ಹತ್ತಿರ.

ಅಂದರೆ ನಾವುಗಳು ಇಷ್ಟು ಹತ್ತಿರದಲ್ಲಿದ್ದೇವೆ. ಓಹೋ, ಹಾಗಾದರೆ ಈ ವಾಘಾ ಗಡಿಯೆಂಬುದು ಮತ್ತು ಪ್ರತಿನಿತ್ಯ ಅಲ್ಲಿ ನಡೆಯುವ ಕವಾಯಿತು, ನಿತ್ಯ ಅಲ್ಲಿ ಗೇಟುಗಳನ್ನು ತೆಗೆಯುವುದು ಎಲ್ಲವೂ ಈ ಹತ್ತಿರವನ್ನು ನೆನಪಿಸಲೇ ಇರಬೇಕು; ಇನ್ನಷ್ಟು ಹತ್ತಿರಗೊಳಿಸಲೆಂದೇ ಇರಬೇಕು ಅಲ್ಲವೇ? ಕೆಲವೇ ಕ್ಷಣಗಳಲ್ಲಿ ಅಂತಹ ಒಂದು ಕ್ಷಣವನ್ನು ಕಣ್ಣಾರೆ ನೋಡಲಿದ್ದೇವೆ ಎಂಬ ಭಾವದಲ್ಲಿ ಅಲ್ಲಿಗೆ ಹೋಗುತ್ತಿರುತ್ತೇವೆ. ಆದರೆ, ನಮಗೆ ಕಿರಿಕಿರಿಯನ್ನುಂಟುಮಾಡುವ ಬಾರ್ಡರ್ ಪ್ರವೇಶದ ಪ್ರಕ್ರಿಯೆ ಎದುರಾಗುತ್ತದೆ. ಕಿರಿಕಿರಿಯು ಗಡಿ ಭದ್ರತಾಪಡೆಯ ಸಿಬ್ಬಂದಿಯಿಂದಲ್ಲ, ಪಾಪ ಅವರೇನು ಮಾಡಿಯಾರು? ಎಲ್ಲರನ್ನೂ ಪರೀಕ್ಷಿಸಿಯೇ ಒಳಗೆ ಬಿಡುವುದು ಅವರಿಗೆ ಅನಿವಾರ್ಯ. ಆದರೆ, ನಿಮ್ಮ ಲ್ಯಾಪ್‌ಟಾಪ್ ಅಥವಾ ಇನ್ನಾವುದೇ ಬ್ಯಾಗ್‌ಗಳಿದ್ದಲ್ಲಿ ಅದನ್ನು ಹೊರಗೆ ಇಟ್ಟು ಹೋಗಬೇಕು. ಬಿಎಸ್‌ಎಫ್‌ನವರ ಹತ್ತಿರ ಅಲ್ಲ, ಅದಕ್ಕೊಂದು ಮೇಜುಗಳ ಮುಂದೆ ಕೂತಿರುವ ಖಾಸಗಿ ವ್ಯಕ್ತಿಗಳಿರುತ್ತಾರೆ. ಬ್ಯಾಗ್‌ಗಳನ್ನು ಬಿಸಾಡಿ ಹೋಗಿಬಿಡೋಣ ಎನ್ನಿಸಬೇಕು, ಅಷ್ಟು ದುಬಾರಿ ಶುಲ್ಕಕ್ಕೆ ಅವರು ನಿಮ್ಮ ಬ್ಯಾಗ್ ಕಾಯುತ್ತಾರೆ. ನಿಮಗೆ ವಿಧಿಯಿಲ್ಲ, ಹಣ ಕೊಟ್ಟು ಟೋಕನ್ ಪಡೆದು ವಾಘಾ ಬಾರ್ಡರ್ ಕಡೆಗೆ ಓಡುತ್ತೀರಿ.

ಅಕ್ಷರಶಃ ಓಡುತ್ತೀರಿ. ಏಕೆಂದರೆ, ನಾವು ಸಾಕಷ್ಟು ಮುಂಚೆಯೇ ಅಲ್ಲಿಗೆ ಹೋಗುತ್ತಿದ್ದೀವಿ ಎಂಬ ಕಲ್ಪನೆಯಲ್ಲಿ ಅಮೃತಸರದಿಂದ ಹೊರಟಿರುತ್ತೇವೆ. ಅಲ್ಲಿ ಹೋಗಿ ನೋಡಿದರೆ, ನಮಗಿಂತ ಮುಂಚೆಯೇ ಎಷ್ಟೋ ಜನ ಕ್ಯೂನಲ್ಲಿ ಓಡುತ್ತಿರುತ್ತಾರೆ. ಹಾಗಾಗಿ ಓಟ ನಮಗೂ ಅನಿವಾರ್ಯ. ವಾಹನ ನಿಲ್ಲಿಸಿದ ಜಾಗದಿಂದ ಬಾರ್ಡರ್‌ಗೆ ಒಂದು ಕಿ.ಮೀ. ದೂರ. ಒಂದು ಕಿ.ಮೀ ನಡೆಯುವುದರಲ್ಲಿ ಎರಡು ಬಾರಿ ನಮ್ಮನ್ನು ತಡಕಾಡಿ ಪರೀಕ್ಷಿಸುತ್ತಾರೆ. ಅಲ್ಲಲ್ಲಿ ನಿಂತಿರುವ ಬಿಎಸ್‌ಎಫ್ ಯೋಧರು ನಗುಮುಖದಿಂದಲೇ ಇದ್ದರೂ, ಅವರು ನಮ್ಮಲ್ಲಿ ಯಾರಾದರೂ ಕಿಡಿಗೇಡಿಗಳಿರಬಹುದೇ ಎಂಬುದನ್ನು ಹುಡುಕುತ್ತಿರುತ್ತಾರೆ.

ಬಾರ್ಡರ್ ಹತ್ತಿರ ಬರುತ್ತದೆ. ಒಂದಲ್ಲ ಎರಡು ಗೇಟುಗಳು. ಎರಡು ದೇಶಗಳೂ ತಮ್ಮದೇ ಗೇಟುಗಳನ್ನು ಮಾಡಿಕೊಂಡಿದ್ದಾರೆ. ಅದರಿಂದ ಈ ಕಡೆಗೆ ಮಧ್ಯದಲ್ಲಿ ಒಂದು ಉದ್ದನೆಯ ರಸ್ತೆ, ರಸ್ತೆಯ ಎರಡೂ ಬದಿಗಳಲ್ಲಿ ಜನರು ಕೂರಲು ಮೆಟ್ಟಿಲಿನಂತಹ ರಚನೆ. ವಿಐಪಿಗಳಿಗೆ ಈ ಮೆಟ್ಟಿಲುಗಳ ಮೇಲೆಯೇ ಒಂದು ಕಡೆ ಕುರ್ಚಿಗಳು. ಒಟ್ಟಾರೆ ಸನ್ನಿವೇಶ ಥೇಟ್ ಬಯಲು ರಂಗಮಂದಿರದಂತೆ ಇರುತ್ತದೆ. ಆ ಕಡೆಯೂ ಯಥಾವತ್ ಅದೇ ರೀತಿ. ಆದರೆ, ಇಲ್ಲಿಗಿಂತ ಕಡಿಮೆ ಜನರು ಕೂರುವ ವ್ಯವಸ್ಥೆ. ಅರ್ಧಕ್ಕರ್ಧ. ಚಿಕ್ಕ ದೇಶವಲ್ಲವೇ? ಜನರೂ ಇಲ್ಲಿಗಿಂತ ಅರ್ಧ ಅಷ್ಟೇ. ಎರಡೂ ಕಡೆಯೂ ಜೋರಾದ ಸಂಗೀತ.



ಈ ಕಡೆ ಶಾರುಖ್ ಖಾನ್‌ನ ಚಕ್‌ದೇ ಇಂಡಿ... ಹಾಡು. ಆ ಹಾಡಿಗೆ ಕುಣಿಯಲು ಹುಡುಗಿಯರ ಒ... ದೊಡ್ಡ ಗುಂಪು ರಸ್ತೆಗಿಳಿಯುತ್ತದೆ. ಅವರನ್ನು ಅಲ್ಲಿ ನಿಂ... ಸೈನಿಕರು ತಡೆಯುವುದಿಲ್ಲ, ಈ ಹಾಡಿಗೆಂದೇ ತರಬೇ... ಪಡೆದು ಬಂದಿದ್ದಾರೇನೋ ಎಂಬಂತೆ ಸೊಗ... ನರ್ತಿಸುತ್ತಾರೆ. ಆ ಕಡೆ ಅಂತಹ ಕುಣಿತ ಇಲ್ಲ, ಇಲ್ಲಿ... ಗಂಡಸರು ಮತ್ತು ಹೆಂಗಸರು ಒಟ್ಟಿಗೆ ಕೂತಿದ್ದಂತೆ... ಕಾಣುವುದಿಲ್ಲ.

ಆ ನಂತರ ಸೈನ್ಯದ ಒಂದು ಸಣ್ಣ ಗುಂಪು ಕವಾಯಿ... ಸಿದ್ಧವಾಗಿ ನಿಲ್ಲುತ್ತದೆ. ಇಡೀ ಕಾರ್ಯಕ್ರಮವನ್ನು ಕಾರ್ಡ್... ಮೈಕ್ ಹಿಡಿದ ಒಬ್ಬ ವ್ಯಕ್ತಿ ನಿರ್ವಹಣೆ ಮಾಡು... ಸಾಗುತ್ತಾನೆ. ಒಂದು ಘನ ಗಂಭೀರ ಕವಾಯಿತು ... ಸೌಹಾರ್ದತೆಯ ಕಾರ್ಯಕ್ರಮದ ನಿರೀಕ್ಷೆಯಲ್ಲಿದ್ದ... ಆಘಾತವಾಗುತ್ತದೆ. ಬಿಳಿ ಅಂಗಿ ಮತ್ತು ಬಿಳಿ ಪ್ಯಾಂಟ್... ಧರಿಸಿರುವ ನಿರೂಪಣೆಗಾರ, ನೆರೆದಿರುವವರನ್ನು ಉದ್ದೇ... ಮಾತನ್ನಾಡುತ್ತಾನೆ. ಮೈಕ್ ಬಿಟ್ಟು ಸಂಜ್ಞೆಯ ಮೂ... ಜನರಿಗೆ ಸೂಚನೆ ನೀಡಲಾರಂಭಿಸುತ್ತಾನೆ. ಭಾರತ್ ಮಾತಾ... ಜೈ, ವಂದೇ ಮಾತರಂ, ಹಿಂದೂಸ್ತಾನ್ ಜಿಂದಾಬಾ... ಎಂದು ಮಾತ್ರ ಘೋಷಣೆ ಕೂಗಬೇಕೆಂದು ಮೊದ... ಮೈಕಿನಲ್ಲಿ ಹೇಳಲಾಗಿರುತ್ತದೆ. ಆದರೆ, ಆ ಕಡೆಗೆ ಕೇಳಿಸು... ಜೋರಾಗಿ ಕೂಗಬೇಕೆಂದು ಮೈಕಿಲ್ಲದೇ ಸೂಚಿಸಲಾಗು... ಮೊದಮೊದಲು ಸ್ವಲ್ಪ ಚೇಷ್ಟೆಯಂತೆ ಕಾಣುವ ಆ... ನಡವಳಿಕೆ ಬರಬರುತ್ತಾ ಅತಿರೇಕಕ್ಕೆ ಹೋಗುತ್ತ... ಪಾಕಿಸ್ತಾನದ ವಿರುದ್ಧ ಘೋಷಣೆ ಕೂಗಲೂ ಸಿದ್ಧ... ಬಂದಿರುವವರೂ ಆಶ್ಚರ್ಯ ಪಡುವಷ್ಟು ಮಟ್ಟ... ಕುಚೇಷ್ಟೆಗಳನ್ನು ಆತ ಮಾಡುತ್ತಾನೆ.

ಈ ದೇಶದ ಗಡಿಯಲ್ಲಿ ಪ್ರತ್ಯೇಕಗೊಂಡು ಶತಮಾನ... ಕಳೆದಿರದ ನಮ್ಮ ಸೋದರ ದೇಶದ ಜನರು ಕಣ್ಣೆದು... ಕೂತಿರುವ ಹೊತ್ತಿನಲ್ಲಿ, ಹೀಗಳೆಯುವ ರೀತಿಯ... ವರ್ತಿಸಲಾಗುತ್ತದೆ. ಆ ಕಡೆ ಏನು ನಡೆಯುತ್ತಿದೆಯ... ಸ್ಪಷ್ಟವಾಗಿ ಗೊತ್ತಾಗುವುದಿಲ್ಲ, ಏಕೆಂದರೆ, ಜನರು ಘೋ... ಕೂಗುತ್ತಿದ್ದಾರೆ. ನೃತ್ಯವಾಗಲೀ, ಬೀದಿಯಲ್ಲಿ ಆಂಗಿಕ ಚೇ... ಮಾಡುವ ನಿರೂಪಕನಾಗಲೀ ಇದ್ದಂತಿಲ್ಲ, ಇಲ್ಲಿ ಸ... ಎಷ್ಟು ಜೋರಾಗಿದೆಯೆಂದರೆ, ಆ ಕಡೆ ಏನು ನಡೆಯು... ಎಂಬುದರ ದನಿ ಕೇಳಲು ಸಾಧ್ಯವೇ ಇಲ್ಲ, ಇದ್ಯಾಕೆ... ಸರಿಯಿಲ್ಲ ಎನಿಸುವಷ್ಟರಲ್ಲಿ ಸೈನ್ಯದ ಸಣ್ಣ ಗುಂಪು ಪೂ... ಶಿಸ್ತಿನಲ್ಲಿ ತಯಾರಾಗಿ ನಿಲ್ಲುತ್ತದೆ ಮತ್ತು ಅವರ ಕವಾಯಿ... ಡ್ರಮ್ ಬಾರಿಸಲು ಇನ್ನೊಬ್ಬ ಸೈನಿಕ ನಿಗದಿತ ಜಾ... ಬಂದು ಕೂತಿರುತ್ತಾನೆ. ಆ ಕಡೆಯೂ ಸಹಾ ಅ... ರೀತಿ.

ಇದಾದನಂತರ ಎರಡೂ ಕಡೆಗಳಿಂದ ಕವಾಯಿ... ಮಾಡಿಕೊಂಡು ಹೋಗಿ, ಗೇಟು ತೆಗೆದು ಪರ... ಸೌಹಾರ್ದತೆಯಿಂದ ಅಭಿನಂದಿಸಿ, ಧ್ವಜ ಇಳಿಸಿ, ಬಹು... ಹೂವೇನಾದರೂ ವಿನಿಮಯ ಮಾಡಿಕೊಂಡು .... ರೀತಿ ಕಲ್ಪನೆಯಲ್ಲಿ ನಿರೀಕ್ಷಿಸುತ್ತಿರುತ್ತೇವೆ. ಡ್ರಮ್ ಬಾರಿಸ... ಆರಂಭವಾಗುತ್ತದೆ. ಇಬ್ಬರು ಮಹಿಳಾ ಸೈನಿಕರು ... ಬೀಸಿಕೊಂಡು ಹೋಗಿ ಗೇಟಿನ ಪಕ್ಕದಲ್ಲಿ ಸಾವಧಾನ್... ನಿಲ್ಲುತ್ತಾರೆ. ನಂತರ ಪುರುಷರ ಸರದಿ. ಕೈಕಾಲು ಬೀಸ... ರೀತಿಯಲ್ಲಿ ಆ ಕಡೆಗೆ ಹೋಗಿ ನುಗ್ಗುತ್ತಾರೇನ... ಎನಿಸುವಂತೆ. ಕಾಲನ್ನು ಎತ್ತಿ ತಲೆಯವರೆಗೆ ತಂದು ನೆ... ಬಡಿಯುತ್ತಾರೆ. ಆ ಕಡೆಯೂ ಹಾಗೆಯೇ. ಇ... ಆಕ್ರಮಣಕಾರಿಯಾಗಿ? ಇಲ್ಲಿ? ಏಕಾಗಿ? ನ... ಚಿಂತಿತರಾಗುವಷ್ಟರಲ್ಲಿ, ಆ ಕಡೆಯಿಂದ ಒಬ್ಬ ಸೈ... ಮೈಕಿನಲ್ಲಿ ಓಓಓಓ ಎಂದು ಕೂಗಲು ಶು... ಮಾಡಿರುವುದು ಕೇಳುತ್ತದೆ. ಅದು ಶುರುವಾಗುತ್ತಿದ್ದಂತೆ... ಇಲ್ಲಿಂದ ಇನ್ನೊಬ್ಬ ಸೈನಿಕ ಓಓಓಓಓಓಓ ಎಂದು ಶು... ಮಾಡಿರುತ್ತಾನೆ. ಉಸಿರುಕಟ್ಟಿ ಕೂಗುವ ಈ ಕೂ... ನಿಮಿಷಕ್ಕೂ ಹೆಚ್ಚು ಕಾಲ ಎಳೆಯುತ್ತದೆ: ಆಗಾಗ ಮ... ಮಧ್ಯೆ ಸುಮಾರು 10 ಸಾರಿ ಈ ಓಓಓಓಓ... ನಡೆಯುತ್ತದೆ. ಈ ಕೂಗು ಏತಕ್ಕಾಗಿ, ಅದರಲ್ಲಿ ಸ್ಪ... ಏಕೆ ಗೊತ್ತಾಗುವುದಿಲ್ಲ, ವಿಚಿತ್ರ ಮತ್ತು ಅನಗತ್ಯ ಎಂ... ಮಾತ್ರ ನೋಡುಗರಿಗೆ ಅನಿಸುತ್ತದೆ. ಪ್ರೇಕ್ಷಕರ ಗುಂಪಿನ... ಕುಳಿತಿರುವ ಕೆಲವು ಪಡ್ಡೆಗಳು ಅದನ್ನು ಸಂಭ್ರಮಿಸಲು ಆರಂಭಿಸುತ್ತಾರೆ ಮತ್ತು ಪಾಕಿಸ್ತಾನದ ಕಡೆಗೆ ಅವಹೇಳನಕಾರಿ ಆಂಗಿಕ ಚೇಷ್ಟೆಗಳನ್ನು ಮಾಡುತ್ತಾರೆ.

ಮುಂದುವರೆಯುವ ಪುರುಷರ ಕವಾಯಿತು, ಯುದ್ಧ... ಹೋಗುವ ರೀತಿಯಲ್ಲಿ ನಡೆಯುತ್ತದೆ. ಮೀ... ತಿರುಗಿಸುವುದು, ಸೊಂಟದ ಮೇಲೆ ಕೈ ಇಟ್ಟುಕೊಂಡ... ಎದೆಯುಬ್ಬಿಸುವುದು ಹೀಗೆ ಚಿತ್ರ ವಿಚಿತ್ರ ರೀತಿಯ...

▶▶ 07


ರೋಹಿತನನ್ನು ಬಲಿ ತೆಗೆದುಕೊಂಡಿದ್ದು ಜಾತಿಯ ವಿಷ

ದಲಿತ ವಿದ್ಯಾರ್ಥಿ ರೋಹಿತ್ ವೇಮುಲನ ಸಾವಿಗೆ ರಣ ಜಾತಿ ತಾರತಮ್ಯವಲ್ಲ ಎಂದು ಚೆಡ್ಡಿಗಳು ಬ್ಬಿಹಾಕುತ್ತಿದ್ದಾರೆ. ಜೊತೆಗೆ ಆತನ ವಿರುದ್ಧ ಮಾನವ ಪನ್ಮೂಲ ಸಚಿವೆ ಸ್ಮೃತಿ ಇರಾನಿಗೆ ದೂರು ಕೊಟ್ಟ ಸ್ಸೆಸ್‌ನ ಮಾಜಿ ಪ್ರಚಾರಕ ಮತ್ತು ಹಾಲಿ ಸಚಿವ ಡಾರು ದತ್ತಾತ್ರೇಯ ಸ್ವತಃ ಹಿಂದುಳಿದ ಜಾತಿಗೆ ದವನು ಎಂದೂ ಹೇಳುತ್ತಿದ್ದಾರೆ. ಅದೂ ಸಾಲದೆಂಬಂತೆ, ೇಹಿತನ ತಂದೆಯನ್ನು ಅದೆಲ್ಲಿಂದಲೋ ಎಳೆದು ತಂದು ನಿಂದ "ನಾನು ಒಡ್ಡರ ಜಾತಿಗೆ ಸೇರಿದವನು. ಆದ್ದರಿಂದ ಮಗ ರೋಹಿತ್ ದಲಿತನಲ್ಲ, ಬದಲಾಗಿ ಒಡ್ಡ ಮುದಾಯದವನು" ಎಂದು ಹೇಳಿಸಿದ್ದಾರೆ.

ಆದರೆ ಅದೆಲ್ಲ ಜಾತಿನಿಂದನೆ ಕಾನೂನಿನಿಂದ ಚಾವಾಗಲು ಚೆಡ್ಡಿಗಳು ಮಾಡುತ್ತಿರುವ ಮಸಲತ್ತು. ಾಕೆಂದರೆ ರೋಹಿತ್ ಮರಣ ಹೊಂದಿದ್ದು ಜಾತಿ ರತಮ್ಯದಿಂದಾಗಿ ಎಂಬುದು ಸ್ಪಷ್ಟವಾದರೆ ದತ್ತಾತ್ರೇಯ, ಾನಿ ಮತ್ತು ಹೈದರಾಬಾದ್ ಮುಕ್ತ ವಿಶ್ವವಿದ್ಯಾಲಯದ ುಖ್ಯಸ್ಥರೆಲ್ಲರೂ ಜೈಲು ಕಂಬಿ ಎಣಿಸಬೇಕಾಗುತ್ತೆ. ಈಗ ಾವ ಪುರುಷ ತಾನು ರೋಹಿತ್ ತಂದೆ ಎಂದೂ, ಆ ರಣಕ್ಕೆ ಮೃತ ವಿದ್ಯಾರ್ಥಿ ಒಡ್ಡ ಜಾತಿಗೆ ಸೇರಿದವನು ಂದೂ ಹೇಳುತ್ತಿದ್ದಾನೋ, ಅದೆಲ್ಲ ನಿಜ ಎಂದೇ ಟ್ಟುಕೊಂಡರೂ ಚೆಡ್ಡಿಗಳಿಗೆ ನೆಮ್ಮದಿ ಸಿಗಲ್ಲ. ಯಾಕೆಂದರೆ 994ರಲ್ಲೇ ಸುಪ್ರೀಂಕೋರ್ಟ್ ಕೊಟ್ಟಿರುವ ಒಂದು ರ್ಪಿನ ಪ್ರಕಾರ ಅಂತರಜಾತಿ ದಂಪತಿಗಳಿಗೆ ಹುಟ್ಟಿದ ಕ್ಕಳು ಯಾವ ಪರಿಸರದಲ್ಲಿ ಬೆಳೆಯುತ್ತಾರೋ ಅವರನ್ನು ಜಾತಿಗೆ ಸೇರಿದವರು ಎಂದೇ ಪರಿಗಣಿಸಬೇಕು ಎಂದು ೇಳಿದೆ. ಆ ತರ್ಕವನ್ನು ರೋಹಿತ್ ಜೀವನಕ್ಕೆ ಅನ್ವಯಿಸಿ ೇಳುವುದಾದರೆ ರೋಹಿತನ ತಂದೆ ಒಡ್ಡರ ಜಾತಿಗೆ ೇರಿದ್ದರೂ ಆತ ಆನಂತರ ತನ್ನ ಕುಟುಂಬವನ್ನು ಾರೆದಿದ್ದರಿಂದ ಮತ್ತು ರೋಹಿತ್ ಹಾಗೂ ಆತನ ಡಹುಟ್ಟಿದವರು ಮಾಲಾ ಜಾತಿಗೆ ಸೇರಿದ ತಾಯಿಯ ೋಷಣೆಯಲ್ಲಿ ಬೆಳೆದಿದ್ದರಿಂದ ರೋಹಿತ್ ಕಾನೂನಿನ ಣ್ಣಲ್ಲಿ ದಲಿತನೇ.

ಇರಲಿ, ತನ್ನ ಜಾತಿಯಿಂದಾಗಿ ರೋಹಿತ್ ಎಂತಹ ಳರಿಮೆಯೊಂದಿಗೆ ಬೆಳೆದ ಎಂದು ಕಿರಿಯ ಮಿತ್ರ ದೀಪ್ತೋ ಮಂಡಲ್ ಬರೆದಿದ್ದಾನೆ. ಆದರೆ ಸುದೀಪ್ತೋ ಸ ಮಾಡುವ 'ಹಿಂದೂಸ್ತಾನ್ ಟೈಮ್ಸ್' ಪತ್ರಿಕೆ ನಮ್ಮ ನರಿಗೆ ಲಭ್ಯವಿಲ್ಲದಿರುವುದರಿಂದ ಮತ್ತು ಅದು ಂಗ್ಲಿಷ್‌ನಲ್ಲಿರುವುದರಿಂದ ಆ ವರದಿಯ ಸಾರಾಂಶವನ್ನು ಲ್ಲಿ ನೀಡುತ್ತಿದ್ದೇನೆ.

ಅದು 1971 ರ ಬೇಸಿಗೆಯ ಕಾಲ. ಗುಂಟೂರ್ ತ್ತಿರ ದಿನಗೂಲಿಗಳು ರೈಲ್ವೆ ಹಳಿಯನ್ನು ಹಾಕುತ್ತಿದ್ದರು. ಕೂಲಿಗಳ ಪೈಕಿ ಒಂದು ದಲಿತ ದಂಪತಿಯೂ ಇತ್ತು.



ಅವರಿಗೆ ಒಬ್ಬ ಪುಟ್ಟ ಮಗಳಿದ್ದಳು. ರೈಲ್ವೆ ಹಳಿಯನ್ನು ಹಾಕುತ್ತಿದ್ದ ಹತ್ತಿರದಲ್ಲೇ ಅಂಜನಿ ಎಂಬಾಕೆಯ ಮನೆ ಇತ್ತು. ಅಂಜನಿ ಆಗತಾನೆ ತನಗೆ ಹುಟ್ಟಿದ್ದ ಮಗಳನ್ನು ಕಳೆದುಕೊಂಡಿದ್ದಳು. ಕೂಲಿ ಮಾಡುತ್ತಿದ್ದ ದಲಿತ ದಂಪತಿಗಳ ಹೆಣ್ಣು ಮಗಳು, ಅಂಜನಿಗೆ ತೀರಿಕೊಂಡ ಮಗಳನ್ನು ನೆನಪಿಗೆ ತಂದಿದ್ದಳು. ಆಗ ಆಕೆ ಆ ಬಡವರಿಗೆ "ನಿಮ್ಮ ಮಗುವನ್ನು ನನಗೆ ಕೊಟ್ಟುಬಿಡಿ. ಅವಳನ್ನು ನನ್ನ ಮಗಳಂತೆಯೇ ಬೆಳೆಸುತ್ತೇನೆ" ಎಂದಳು.

ಒಡ್ಡರ ಜಾತಿಗೆ ಸೇರಿದ ಅಂಜನಿ ಎಂಎ, ಎಂಎಡ್ ಓದಿದ್ದಳು. ಆಕೆ ಸರ್ಕಾರಿ ಶಾಲೆಯ ಮುಖ್ಯಸ್ಥೆಯಾಗಿದ್ದಳು. ಆಕೆಯ ಗಂಡ ಸರ್ಕಾರಿ ಇಂಜಿನಿಯರ್ ಆಗಿದ್ದ. ಅವರಿಗೆ ಸ್ವಂತ ಮನೆಯೂ ಇತ್ತು. ಇದನ್ನೆಲ್ಲಾ ಲೆಕ್ಕ ಹಾಕಿದ ಆ ಬಡ ದಂಪತಿಗಳು ತಮಗಿಂತಲೂ ಅಂಜನಿಯೇ ತಮ್ಮ ಮಗಳಿಗೆ ಒಳ್ಳೆಯ ಜೀವನ ಕೊಡಬಹುದೆಂದು ಭಾವಿಸಿದರೋ ಏನೋ. ಅಂಜನಿ ಕೇಳಿದ್ದೇ ತಡ, ತಮ್ಮ ಮಗುವನ್ನು ಆವಳ ಕೈಗಿಟ್ಟರು. ಆ ಹೆಣ್ಣು ಮಗುವೇ ರೋಹಿತನ ತಾಯಿ ರಾಧಿಕಾ.

ಅಂಜನಿ ಹೀಗೆ ದತ್ತು ತೆಗೆದುಕೊಂಡ ರಾಧಿಕಾಳನ್ನು ತನ್ನ ಮಗಳಂತೆಯೇ ಬೆಳೆಸಿದಳಾ? ಅವಳಿಗೂ ಶಿಕ್ಷಣ ಕೊಡಿಸಿದಳಾ? ಉತ್ತಮ ಜೀವನ ಕಲ್ಪಿಸಿದಳಾ? ಇಲ್ಲವೇ ಇಲ್ಲ. ಅಂಜನಿಗೆ ತನ್ನದೇ ಆದ ನಾಲ್ಕು ಮಕ್ಕಳಿದ್ದಾರೆ. ಒಬ್ಬ ಮಗ ಇಂಜಿನಿಯರ್ ಆಗಿದ್ದರೆ ಇನ್ನೊಬ್ಬ ಸಿವಿಲ್ ಕಾಂಟ್ರಾಕ್ಟರ್ ಆಗಿದ್ದಾನೆ. ಆಕೆಯ ಹೆಣ್ಣುಮಕ್ಕಳ ಪೈಕಿ (ಅವರಿಬ್ಬರೂ ಹುಟ್ಟಿದ್ದು ರಾಧಿಕಾಳನ್ನು ದತ್ತು ಪಡೆದ ನಂತರ) ಒಬ್ಬಳು ಬಿಎಸ್ಸಿ-ಬಿಎಡ್ ಓದಿದ್ದರೆ ಇನ್ನೊಬ್ಬಳು ಬಿಕಾಂ-ಬಿಎಡ್ ಓದಿದ್ದಾಳೆ. ಆದರೆ ರಾಧಿಕಾ? ಆಕೆ ಅನಕ್ಷರಸ್ಥೆ ಯಾಕೆ ಗೊತ್ತಾ? ರಾಧಿಕಾಳನ್ನು ಅಂಜನಿ ತನ್ನ ಮನೆ ಕೆಲಸದವಳಾಗಿ ಇಟ್ಟುಕೊಂಡಿದ್ದಳು. "ನಿನ್ನ ಸ್ವಂತ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿದ್ದೀಯ, ಆದರೆ ರಾಧಿಕಾಳನ್ನು ಯಾಕೆ ಶಾಲೆಗೆ ಹಾಕಲಿಲ್ಲ?" ಎಂದು ಕೇಳಿದರೆ ಅಂಜನಿ ಕೊಡುವ ಉತ್ತರ "ಆಕೆಗೆ ಓದುವ ಬಗ್ಗೆ ಆಸಕ್ತಿ ಇರಲಿಲ್ಲ."

ರಾಧಿಕಾಳಿಗೆ 14 ವರ್ಷ ವಯಸ್ಸಾದಾಗ ಆಕೆಯನ್ನು ಮಣಿ ಕುಮಾರ್ ಎಂಬಾತನಿಗೆ ಕೊಟ್ಟು ಅಂಜನಿ ಮದುವೆ ಮಾಡಿದ್ದಳು. ಮದುವೆ ಸಮಯದಲ್ಲಿ ಒಡ್ಡರ ಜಾತಿಯ ಮಣಿಗೆ ರಾಧಿಕಾ ಮಾಲಾ ಜಾತಿಗೆ ಸೇರಿದವಳು ಎಂಬ ಮಾಹಿತಿಯನ್ನು ಅಂಜನಿ ಮುಚ್ಚಿಟ್ಟಿದ್ದಳು. ಅಂಜನಿ ಮನೆಯಲ್ಲಿ ಜೀತ ಮಾಡಿಕೊಂಡಿದ್ದ ರಾಧಿಕಾಳ ಕಷ್ಟಗಳು ಮದುವೆಯಾದ ನಂತರವೇನೂ ಬದಲಾಗಲಿಲ್ಲ. ಕುಡಿತದ ದಾಸನಾಗಿದ್ದ ಮಣಿ ರಾಧಿಕಾಳನ್ನು ದನಕ್ಕೆ ಬಡಿಯುವಂತೆ ಬಡಿಯುತ್ತಿದ್ದ. ಮದುವೆ ಆದ ಐದು ವರ್ಷಗಳಲ್ಲಿ ನಿಲಿಮಾ, ರೋಹಿತ್ ಮತ್ತು ರಾಜ ಎಂಬ ಮೂವರು ಮಕ್ಕಳು ಮಣಿ ಮತ್ತು ರಾಧಿಕಾರಿಗೆ ಜನಿಸಿದವು. ಅದೇ ಹೊತ್ತಿಗೆ ಅದು ಯಾರೋ ಮಣಿಗೆ "ನಿನ್ನ ಹೆಂಡತಿ ದಲಿತಳು" ಎಂದು ಹೇಳಿಬಿಟ್ಟರು. ಅದರಿಂದ ಮತ್ತಷ್ಟು ತಲೆ ಕೆಟ್ಟ ಮಣಿ ರಾಧಿಕಾಳನ್ನು ಇನ್ನಷ್ಟು ಥಳಿಸುತ್ತಿದ್ದ. ಕೊನೆಗೊಂದು ದಿನ ಅವರೆಲ್ಲರನ್ನು ಅವರ ದಾರಿದ್ರ್ಯಕ್ಕೆ ಬಿಟ್ಟು ಹೊರಟುಹೋದ.

ಆಗ ಅಂಜನಿ ಮತ್ತೊಮ್ಮೆ ರಾಧಿಕಾಳನ್ನು ತನ್ನ ಮನೆಗೆ ಕರೆದುಕೊಂಡು ಹೋದಳು. ಈಗ ಆಕೆಗೆ ನಾಲ್ವರು ಬಿಟ್ಟಿ ಗುಲಾಮರು ಸಿಕ್ಕಂತಾಯಿತು. ಅಂಜನಿಯನ್ನು 'ಅಜ್ಜಿ' ಎಂದು ರಾಧಿಕಾಳ ಮಕ್ಕಳು ಕರೆಯುತ್ತಿದ್ದರೂ ಆವರೆಲ್ಲ ಆಕೆಯ ಮನೆಯ ಕೆಲಸಗಳನ್ನು ಮಾಡಬೇಕಿತ್ತು. ಇದೆಲ್ಲ ಸಹಜವಾಗಿಯೇ ಸೂಕ್ಷ್ಮ ಮನಸ್ಸಿನ ರೋಹಿತನಿಗೆ ನೋವುಂಟು ಮಾಡುತ್ತಿತ್ತು. ಆತ ಬೆಳೆದಂತೆ ಸಾಧ್ಯವಾದಷ್ಟು ಕಾಲ ಮನೆಯ ಹೊರಗೆ ಕಳೆಯಲಾರಂಭಿಸಿದ. ಕಾಲೇಜು ಸೇರಿದನಂತರ ಆತ ತನ್ನ ಸ್ನೇಹಿತ ರಿಯಾಜ್‌ನ ಮನೆಯಲ್ಲೇ ತಂಗುತ್ತಿದ್ದ. ಕೈಕಾಸಿಗೆ ಗಾರೆ ಕೆಲಸ, ಮನೆಗಳಿಗೆ ದಿನಪತ್ರಿಕೆಗಳನ್ನು ಹಾಕುವುದು ಇತ್ಯಾದಿಗಳನ್ನು ಮಾಡುತ್ತಿದ್ದ.

ಮಕ್ಕಳು ಬೆಳೆದ ಮೇಲೆ ರಾಧಿಕಾ ಒಂದು ಚಿಕ್ಕಮನೆಯನ್ನು ಬಾಡಿಗೆ ಪಡೆದು ಅಲ್ಲಿ ವಾಸಿಸಲಾರಂಭಿಸಿದಳು. ಅಷ್ಟೇ ಅಲ್ಲ, ಆಕೆಯೂ ತನ್ನ ಮಕ್ಕಳಿಗೆ ಪಾಠ ಹೇಳಿಕೊಡುತ್ತಲೇ ತಾನೂ ಶಿಕ್ಷಣ ಪಡೆದಳು. ಮೊದಲು ರೋಹಿತ್ ಬಿ.ಎಸ್ಸಿ ಪಾಸ್ ಮಾಡಿದ. ಅದರ ಮುಂದಿನ ವರ್ಷ ರಾಧಿಕಾ ಕೂಡ ಡಿಗ್ರಿ ಪಡೆದಳು. ಅದಾದ ಮರುವರ್ಷ ಆಕೆಯ ಎರಡನೆ ಮಗ ರಾಜನೂ ಡಿಗ್ರಿ ಪಡೆದ.

ರಾಧಿಕಾ ಟೈಲರಿಂಗ್ ಕೆಲಸ ಮಾಡುತ್ತಾ ತನ್ನ ಮಕ್ಕಳನ್ನು ಸಾಕಿದಳು. ಅವರೊಂದಿಗೆ ಓದಿದಳು. ಹಿರಿಯ ಮಗ ರೋಹಿತ್‌ಗೆ ಸ್ಕಾಲರ್‌ಶಿಪ್ ಸಿಕ್ಕ ನಂತರ ಆಕೆಯ ಆರ್ಥಿಕ ಸ್ಥಿತಿ ಸ್ವಲ್ಪ ಸುಧಾರಿಸಿತ್ತು.

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಆದರೆ ರೋಹಿತನಿಗೆ ಜಾತಿವ್ಯವಸ್ಥೆಯ ಕ್ರೌರ್ಯದಿಂದ ಬಿಡುಗಡೆಯೇ ಇಲ್ಲ ಎನಿಸಿತು. ತನ್ನನ್ನು ಹುಟ್ಟಿಸಿದ ತಂದೆಯೇ ತಾಯಿಯನ್ನು ಕೀಳು ಜಾತಿಯವಳು ಎಂದು ಜರಿದು ದೂರವಾಗಿದ್ದ ತನ್ನ ಕುಟುಂಬದ ರಕ್ಷಕಿಯಂತೆ ಪೋಜು ಕೊಡುತ್ತಿದ್ದ ಅಂಜನಿ ತನ್ನನ್ನು ಮತ್ತು ತನ್ನವರನ್ನು ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದ್ದಳು. ವಿಶ್ವವಿದ್ಯಾಲಯದಲ್ಲಿ ಅಂಬೇಡ್ಕರ್‌ರ ಅನುಯಾಯಿಯಾದ ದಲಿತ ಎಂಬ ಕಾರಣಕ್ಕೇ ಸುಳ್ಳು ಆರೋಪಗಳನ್ನು ಹೊರಿಸಿ ಸ್ಕಾಲರ್‌ಶಿಪ್ ಹಣ ಸಿಗದಂತೆ ಮಾಡಿದ್ದರು. ಕೊನೆಗೆ ಹಾಸ್ಟಲ್‌ನಿಂದಲೇ ಒದ್ದೋಡಿಸಿದ್ದರು. ಸಾಮಾಜಿಕ ಬಹಿಷ್ಕಾರ ಹಾಕಿದರು. ತಾನೆಷ್ಟೇ ಬುದ್ಧಿವಂತನಾಗಿದ್ದರೂ, ಪ್ರತಿಭಾವಂತನಾಗಿದ್ದರೂ, ಕಷ್ಟಪಟ್ಟು ಮೇಲೆ ಬಂದಿದ್ದರೂ ಈ ಜಾತಿ ಎಂಬ ವಿಷವರ್ತುಲದಿಂದ ಮುಕ್ತಿಯೇ ಇಲ್ಲ ಅಂತ ರೋಹಿತನಿಗೆ ಅನ್ನಿಸಿರಲಿಕ್ಕೂ ಸಾಕು.


ಇದು ರೋಹಿತ್ ಒಬ್ಬನ ಕತೆಯಲ್ಲ, ಇವತ್ತಿಗೂ ನಮ್ಮ ದೇಶದಲ್ಲಿ ಆತನಂತೆ ನೋವು, ಅವಮಾನ ಮತ್ತು ನಿರಾಶೆಯಲ್ಲಿ ಸಾವಿರಾರು ದಲಿತ ಯುವಕರು ನಶಿಸಿಹೋಗುತ್ತಿದ್ದಾರೆ. ಹಾಗಿದ್ದರೂ ಚೆಡ್ಡಿಗಳು ರೋಹಿತನ ಸಾವಿಗೆ ಜಾತಿ ಕಾರಣವಲ್ಲ ಎಂಬ ಅಬ್ಬರಿಸುತ್ತಿದ್ದಾರೆ. ಈ ನೀಚರಿಗೆ ಬುದ್ಧಿ ಕಲಿಸುವವರು ಯಾರು? ■


ಯರ್ ಅಪ್ಪ

ನೀನು ಹೊರಟುಹೋಗಿ ಮೊನ್ನೆಗೆ ಹದಿನಾರು ವರ್ಷ ಾದವು. ನಿನ್ನೆ ನಿನಗೆ ಪ್ರಿಯವಾದ ಒಬ್ಬಟ್ಟು, ಅಕ್ಕಿರೊಟ್ಟಿ ತ್ಯಾದಿಗಳನ್ನು ಅಮ್ಮ ತಯಾರಿಸಿತ್ತು. ಇದು ಮಾವಿನ ಸನ್ ಅಲ್ಲ, ಆದರೂ ಅದೆಲ್ಲಿಂದಲೋ ಅಮ್ಮ ಎರಡು ಾವಿನ ಹಣ್ಣುಗಳನ್ನು ತರಿಸಿತ್ತು. ಜೊತೆಗೆ ಕಲ್ಲಂಗಡಿ, ಲಸು ಇತ್ಯಾದಿ ಹಣ್ಣುಗಳು ಕೂಡ ಇದ್ದವು. ನಿನಗೆ ವರು ದಿಂಡರು ಎಂದೆಲ್ಲ ನಂಬಿಕೆ ಇರಲಿಲ್ಲ, ಅಮ್ಮನಿಗೂ ಲ್ಲ. ಆದರೂ ಪ್ರತಿ ಜನವರಿ 26ರಂದು ನಿನ್ನ ನೆನಪಿನಲ್ಲಿ ಮ್ಮ ಕಳಶ ಇಟ್ಟು, ಅದಕ್ಕೆ ಒಂದು ಟವಲ್ ಪೇಟ ತ್ತಿ, ಅದು ನೀನು ಎಂಬ ಭಾವನೆಯಲ್ಲಿ ಪೂಜೆ ಮಾಡುತ್ತೆ. ವ್ರೂ ನಿನ್ನನ್ನು ಸ್ಮರಿಸಿಕೊಂಡು ಅದಕ್ಕೆ ನಮಸ್ಕಾರ ಮಾಡು ವೆ. ನೀನಿದ್ದಿದ್ದರೆ ಇದನ್ನು ನೋಡಿ ನಗುತ್ತಿದ್ದೆಯೋ ೋ!

ಕಳೆದ ಹದಿನೈದು ವರ್ಷದಿಂದ ಜನವರಿ 26ರಂದು ನು ಈಗಿರುವ ಸ್ಥಳಕ್ಕೆ ಹೋಗುತ್ತೇವೆ. ನಿನ್ನ ಮೂವರು ೊಮ್ಮಕ್ಕಳಿಗೆ ಅದೊಂದು ಪಿಕ್ನಿಕ್ ಇದ್ದಂತೆ. ಅದರಲ್ಲೂ ್ನ ಸಮಾಧಿಗೆ ಹೂಗಳ 'ಡೆಕೋರೇಶನ್' ಮಾಡುವುದೆಂದರೆ ಪುಟಾಣಿಗಳಿಗೆ ಸಂಭ್ರಮ. ಅವರು ತುಂಬಾ ಕ್ಕವರಾಗಿದ್ದಾಗ ಸಮಾಧಿಯ ಮೇಲೆ 'ಸ್ಮೈಲಿ' ರೂಪದಲ್ಲಿ ೂಗಳನ್ನು ಜೋಡಿಸಿದ್ದರು. ಈಗ ಅದೊಂದಿಷ್ಟು ಾತ್ಮಕವಾಗಿರುತ್ತೆ.

ಈಗ ನಿನ್ನ ದೊಡ್ಡ ಮೊಮ್ಮಗ ಸಮರ್‌ಜಿತ್‌ಗೆ ದಿನೈದು ವರ್ಷ ವಯಸ್ಸು. ಆಗಲೇ ನನಗಿಂತ ಎತ್ತರ ೆದಿದ್ದಾನೆ. ಅವನು ನಿನ್ನಂತೆ ಕವಿ ಆಗಬೇಕು ಎಂದು ಸು ಕಾಣುತ್ತಿದ್ದಾನೆ. ಹಲವು ಕವನಗಳನ್ನೂ ಬರೆದಿದ್ದಾನೆ. ದರೆ ಅವು ಇಂಗ್ಲಿಷ್‌ನಲ್ಲಿವೆ! ಹಲವೊಮ್ಮೆ ತತ್ವಜ್ಞಾನಿಯಂತೆ ಾತಾಡಿ ಆತನ ಅಪ್ಪ ಅಜಿತು ಮತ್ತು ಅಮ್ಮ ಅರ್ಚನಾಳ ತ್ರಿ ತಿನ್ನುತ್ತಾನೆ. ನಿನ್ನಂತೆ ಅವನಿಗೂ ಫುಟ್‌ಬಾಲ್ ಅಂದರೆ ಷ್ಟ, ಅವನು ಫುಟ್‌ಬಾಲ್ ಕೋಚಿಂಗ್ ಪಡೆಯುತ್ತಿದ್ದಾನೆ. ೋಡೋದಕ್ಕೆ, ಸಮರ್ ನಿನ್ನಂತೆ ತುಂಬಾ ಹ್ಯಾಂಡ್‌ಸಮ್.





ನಿನ್ನ ಏಕೈಕ ಮೊಮ್ಮಗಳು ಇಶಾಳಿಗೆ ಈಗ ವಯಸ್ಸು ಹನ್ನೊಂದು. ರಬ್ಬರ್ ಬ್ಯಾಂಡ್ ಹಿಡಿದು ಜಗ್ಗಿದರೆ ಅದು ಹೇಗೆ ಉದ್ದವಾಗುತ್ತೋ ಹಾಗೆ ಕೆಳ್ಳಗೆ ಎತ್ತರಕ್ಕೆ ಬೆಳೆಯುತ್ತಿದ್ದಾಳೆ. ಇಶಾ ತುಂಬಾ ಬುದ್ಧಿವಂತೆ. ಆಕೆಗೆ ನಿನ್ನಂತೆ ಲೇಖನಗಳನ್ನು ಬರೆಯಬೇಕು, ಅವಳ ಅಮ್ಮನಂತೆ ಸಿನಿಮಾ ನಿರ್ದೇಶಕಿ ಆಗಬೇಕು ಅಂತ ಆಸೆ. ಮೊನ್ನೆ ಆಕೆ ಬರೆದ ಕಿರುಗತೆ ನನಗೆ ಮತ್ತು ಬೇಬಿಗೆ ತುಂಬಾ ಇಷ್ಟವಾಯಿತು. ಹೋದ ವರ್ಷ ಇಶಾ ತನ್ನ ಗೊಂಬೆಗಳನ್ನಿಟ್ಟು ಒಂದು ಚಿಕ್ಕದಾದ ಸಿನಿಮಾವನ್ನೂ ವಿಡಿಯೋ ಕ್ಯಾಮರಾದಲ್ಲಿ ಮಾಡಿದ್ದಳು. ಅದೂ ಕೂಡ ತುಂಬ ಚೆಂದವಾಗಿತ್ತು. ಇಶಾ ಪಿಟೀಲು ಅಭ್ಯಾಸ ಮಾಡುತ್ತಿದ್ದಾಳೆ. ಆಕೆ ಕೋಮಲ ಮನಸ್ಸಿನ ಸುಂದರಿ.

ನಿನ್ನ ಇನ್ನೊಬ್ಬ ಮೊಮ್ಮಗ ಸಮಯ್‌ಗೆ ಈಗ ಹತ್ತು ವರ್ಷ ವಯಸ್ಸು. ಆತ ತುಂಬಾ ಚೂಟಿ. ನಿನ್ನಲ್ಲಿದ್ದ ಶಿಸ್ತು ಆತನಲ್ಲಿದೆ. ಅವನಿಗೂ ಫುಟ್‌ಬಾಲ್ ಇಷ್ಟ. ಅವನಿನ್ನೂ ತನ್ನ ಭವಿಷ್ಯದ ಬಗ್ಗೆ ಡಿಸೈಡ್ ಮಾಡಿಲ್ಲ, ಅಷ್ಟು ಚಿಕ್ಕವನು ಅವನಿನ್ನು. ಕನ್ನಡ ಎಂದರೆ ಮೂವರಿಗೂ ಅಷ್ಟಕ್ಕಷ್ಟೆ.

ಮೂವರಿಗೂ ಐಪ್ಯಾಡ್ ಅಂದರೆ ಪ್ರಾಣ. ಹೋದ ದಸರಾ ರಜೆಯಲ್ಲಿ ನಾವೆಲ್ಲ ಕೊಪ್ಪಕ್ಕೆ ಹೋಗಿದ್ದಾಗ, ಮೂವರೂ ಸೇರಿಕೊಂಡು ತಮ್ಮ ಐಪ್ಯಾಡ್‌ನಲ್ಲಿ ಒಂದು ಸಿನಿಮಾ ತಯಾರಿಸಿದ್ದರು. ಅದಕ್ಕೆ ಕತೆ ಬರೆದದ್ದು ಸಮರ್. ಸಂಗೀತ ಸಂಯೋಜಿಸಿದ್ದು ಇಶಾ. ತಾಂತ್ರಿಕ ನೆರವು ಕೊಟ್ಟಿದ್ದು ಸಮಯ್. ತಾರಾಗಣದಲ್ಲಿ ಆ ಮೂವರದ್ದೇ ಪ್ರಮುಖ ಪಾತ್ರ. ಬೇಬಿ ಮತ್ತು ಅರ್ಚನಾರದ್ದು ಪೋಷಕ ನಟರ ಪಾತ್ರ. ನನಗೆ ಗೊತ್ತಿಲ್ಲದಂತೆ ನನ್ನ ಫೋಟೋ ತೆಗೆದ ನಿನ್ನ ಮೊಮ್ಮಕ್ಕಳು ನನ್ನನ್ನು 'ದೆವ್ವ' ತರಹ ಆ ಸಿನಿಮಾದಲ್ಲಿ ತೋರಿಸಿದ್ದರು.

ನಿನ್ನೆ ನಿನ್ನ ಸಮಾಧಿಗೆ ಮಕ್ಕಳು ಹೂಗಳ ಅಲಂಕಾರ ಮಾಡಿದನಂತರ ಅಮ್ಮ ದೀಪ ಹಚ್ಚಿಸಿ ಪೂಜೆ ಮಾಡಿತು. ಯೋಚನೆ ಮಾಡಬೇಡ, ಅಮ್ಮ ನಿನಗೆ ಇಟ್ಟಿದ್ದ ಎಡೆಯನ್ನು ನಾವು ಕಾಗೆಗಳಿಗೇನು ಕೊಡಲಿಲ್ಲ. ಬದಲಾಗಿ ಎಲ್ಲರೂ ಹೊಟ್ಟೆತುಂಬ ಊಟ ಮಾಡಿದೆವು. ಅಮ್ಮನ ಒಬ್ಬಟ್ಟು ಮತ್ತು ಮರಳು ಮರಳಾದ ತುಪ್ಪ ಅಂದರೆ ನಿಮ್ಮ ಮೊಮ್ಮಕ್ಕಳಿಗೂ ತುಂಬಾ ಇಷ್ಟ.


ಸಮಾಧಿಯ ಉದ್ದ ನೋಡಿದ ಇಶಾ "ತಾತ ತುಂಬ ಎತ್ತರ ಇತ್ತಾ?" ಎಂದು ಕೇಳಿದಳು. "ಇಲ್ಲ, ಅಜಿತು ಮಾಮನಿಗಿಂತ ಕುಳ್ಳಗಿತ್ತು" ಅಂದೆ. ಆಗ ಆಕೆ ಈಗ ನೀನು ಇದ್ದಿದ್ದರೆ ನಿನಗಿಂತ ತಾನೆಷ್ಟು ಕುಳ್ಳಗಿರುತ್ತಿದ್ದೆ ಎಂದು ಚೆಕ್ ಮಾಡಲು ಸಮಾಧಿಯ ಪಕ್ಕ ಮಲಗಿ ಅಳತೆ ಮಾಡಿಕೊಂಡಳು. ನೀನು ಹೋಗಿ ಸರಿಯಾಗಿ ಒಂಭತ್ತು ತಿಂಗಳಿಗೆ ಸಮರ್ ಹುಟ್ಟಿದ್ದು ಎಂದು ಅಮ್ಮ ನೆನಪಿಸಿ ಕೊಂಡಾಗ ಅವನು "ನಾನೇ ಲಂಕೇಶ್. ಪುನರ್‌ಜನ್ಮ ಪಡೆದು ಬಂದಿದ್ದೇನೆ. ಈ ಮುಖವಾಡ ಬಿಚ್ಚಿದರೆ ನನ್ನ ಅಸಲಿ ಮುಖ ನಿಮಗೆ ಕಾಣುತ್ತೆ" ಎಂದು ತಮಾಷೆ ಮಾಡಿದ.

ಮೂವರೂ ಕೆಲವೊಮ್ಮೆ ತಾತ ಈಗಿದ್ದಿದ್ದರೆ ಎನ್ನುತ್ತಾರೆ. ನಿನ್ನ ಬಗ್ಗೆ ಪ್ರಶ್ನೆಗಳನ್ನು ಕೇಳುತ್ತಾರೆ. ಅವರೆಲ್ಲರೂ ಬರುವ ಮುಂಚೆಯೇ ನೀನು ಹೋಗಿದ್ದರಿಂದ ನಿನ್ನ ಬಗ್ಗೆ ಅವರಿಗೆ ಕುತೂಹಲ ಇದೆ.

ನಾನು ಪ್ರತಿ ವರ್ಷದಂತೆ ನಿನ್ನ ಪತ್ರಿಕೆಯ ಬಗ್ಗೆ ನಿನಗೆ ವರದಿ ಒಪ್ಪಿಸಿದೆ. ನಿನಗೆ ಕೇಳಿಸಿತೋ ಇಲ್ಲವೋ, ನನ್ನ ಮನಸ್ಸಂತೂ ಸ್ವಲ್ಪ ಹಗುರವಾಯಿತು.

ಮಿಸ್ ಯು ಅಪ್ಪ,
ಪ್ರೀತಿಯಿಂದ,
ನಿನ್ನ ಗೌರು

ಉತ್ತರ ಕನ್ನಡ: ಜಿಪಂ ಆಖಾಡದಲ್ಲಿ ಕೈ ಪ್ರಬಲ-ಕಮರಿದ ಕಮಲ



ದೇಶಪಾಂಡೆ

ಉತ್ತರ ಕನ್ನಡದ ಹಳ್ಳಿ-ಹಳ್ಳಿಗಳಲ್ಲೀಗ ನಾಟಿ ರಾಜಕಾರಣದ ಘಾಟಿನ ಗುಂಗೇರಿ ಬಿಟ್ಟಿದೆ! ಜಿಪಂ-ತಾಪಂ ಚುನಾವಣೆಗೆ ಹದಗೊಂಡಿರುವ ಗ್ರಾಮೀಣ ಆಖಾಡಗಳಲ್ಲಿ ಟಿಕೆಟ್ ಆಕಾಂಕ್ಷಿಗಳು ಸ್ವ-ಪಕ್ಷದ ಶತ್ರುಗಳ ಸಂಗಡ ಸೆಮಿ ಫೈನಲ್ ಸೆಣಸಾಟ ನಡೆಸಿದ್ದಾರೆ. ಫೈನಲ್ ಕದನ ಎಂದರೆ ಈ ಬಾರಿ ಅದು ಪಕ್ಕಾ ಹಣದ ಹಣಾಹಣಿಯೇ ಆಗಲಿದೆ. ಹಳೆಯ ಮೆಂಬರ್‌ಗಳ ದೆಸೆ ಅಧಿಕಾರಕ್ಕೆ ಏರಿದ ನಂತರ ಬದಲಾದ ಪರಿಯೇ ಹೊಸ ಉಮೇದುವಾರರ "ಪಂಚಾಯ್ತಿದಾರಿಕೆ" ತೆವಲಿಗೆ ಪ್ರಮುಖ ಆಕರ್ಷಣೆ! ಪಂಚಾಯ್ತಿಗಳಿಗೆ ವರ್ಷಂಪ್ರತಿ ಹರಿದುಬರುವ ಕೋಟ್ಯಂತರ ಅನುದಾನದಲ್ಲಿ ಸದಸ್ಯರಿಗೆ ಸಿಗುವ ಪರ್ಸೆಂಟೇಜು ಮತ್ತು ಇನ್ನು ಮುಂದೆ ಜಿಪಂ ಅಧ್ಯಕ್ಷರಿಗೆ ಮಂತ್ರಿಗಿರಿ ಭೋಗ-ಭಾಗ್ಯ ಬರುವುದು ಈ ಬಾರಿಯ ಪಂಚಾಯ್ತಿ ಫೈಟಿಂಗ್‌ಗೆ ಎಮ್ಮೆಲ್ಲೆ ಎಲೆಕ್ಷನ್ ಖದರು ತಂದಿದೆ!

ಮೂರು ದಶಕದ ಶಾಪ!

ನಜೀರ್‌ಸಾಬರ ಕನಸಿನ ಕೂಸಾಗಿದ್ದ ಪಂಚಾಯತ್ ರಾಜ್ ವ್ಯವಸ್ಥೆ ಜಾರಿಗೆ ಬಂದಾಗ ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಉತ್ತರ ಕನ್ನಡದ 'ವರಪುತ್ರ'ನೆಂಬ ಆರೋಪಿತ ರಾಮಕೃಷ್ಣ ಹೆಗಡೆಜೀ. ದುರಂತವೆಂದರೆ, ಅಧಿಕಾರ ವಿಕೇಂದ್ರೀಕರಣ ಪ್ರಯೋಜನ ಮಾತ್ರ ಈ ನತದೃಷ್ಟ ಜಿಲ್ಲೆಗೆ ಆಗಲೇ ಇಲ್ಲ. ಅಕ್ಕ-ಪಕ್ಕದ ಜಿಲ್ಲೆಗಳಿಗೆ ಹೋಲಿಸಿ ನೋಡಿದರೆ ಉತ್ತರ ಕನ್ನಡ ಎಷ್ಟು ಪ್ರಗತಿ ಆಗಬೇಕಿತ್ತೋ ಅಷ್ಟಾಗಲೇ ಇಲ್ಲ. ಇದಕ್ಕೆ ಕಾರಣ, ಫ್ಯೂಡಲ್ ಪ್ರವೃತ್ತಿಯ ಆರ್.ವಿ. ದೇಶಪಾಂಡೆಯ ಕೈಯಲ್ಲೇ ಈ ಮೂವತ್ತು ವರ್ಷದಿಂದ ಅಷ್ಟೂ ಅಧಿಕಾರ ಕೇಂದ್ರೀಕರಣ ಆಗಿರುವುದು.

ಉತ್ತರ ಕನ್ನಡಕ್ಕೆ 'ಡಾನ್' ದೇಶಪಾಂಡೆಯೇ ನಂಬರ್ ಒನ್ ಶಾಪ! ಆತನ ಎದುರು ಕೈಕಟ್ಟಿ ನಿಂತು ಸ್ವ-ಹಿತಾಸಕ್ತಿ ಸಾಧಿಸಿಕೊಳ್ಳುವ ಪ್ರತಿಪಕ್ಷದ ಸಂಸದ ಅನಂತಕುಮಾರ್ ಹೆಗಡೆ, ಶಾಸಕ ಕಾಗೇರಿ ಹೆಗಡೆ.... ವಗೈರೆಗಳು ಉತ್ತರ ಕನ್ನಡ ಹಿಂದುಳಿದಿರುವಿಕೆಗೆ ಇಟ್ಟ ದೃಷ್ಟಿ ಬೊಟ್ಟಿನಂತಿದ್ದಾರೆ! ಯಾರಿಗೂ ಜಿಲ್ಲೆಯ ಋಣ ತೀರಿಸುವ ಕೃತಜ್ಞತೆ, ಮಾನ, ಮರ್ಯಾದೆ ಎಂಬುದೇ ಇಲ್ಲ. ಎಲ್ಲ ಪಕ್ಷದ ಶಾಸಕ-ಸಂಸದ-ಜಿಪಂ ಸದಸ್ಯರಿಗೆ ತಂತಮ್ಮದೇ ಅಡಚಣೆ-ಅಸ್ತಿತ್ವದ ಚಿಂತೆ!

1987 ರಲ್ಲಿ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದಾಗ ಜಿಲ್ಲೆಯಲ್ಲಿ ಇದ್ದ ಸಮಸ್ಯೆಗಳು ಇವತ್ತಿಗೂ ಹಾಗೆ ಇವೆ. ಜತೆ ಅರಣ್ಯ ಅತಿಕ್ರಮಣ, ಸಿಆರ್‌ಝಡ್, ಕುಡಿಯುವ ನೀರಿನ ಸಮಸ್ಯೆಯಂಥ ಹೊಸ-ಹೊಸ ಸಂಕಷ್ಟ ಸೇರಿಕೊಂಡಿದೆ. ಜೋಯಿಡಾ ತಾಲೂಕಿನ ಹಲವು ಹಳ್ಳಿಗಳು ಮಳೆಗಾಲದಲ್ಲಿ ನಡುಗಡ್ಡೆಗಳಂತಾಗಿ ಜನರು ದಿಗ್ಬಂಧನಕ್ಕೆ ಒಳಗಾಗುತ್ತಾರೆ. ಬಸುರಿ-ಬಾಣಂತಿಯರು, ವೃದ್ಧರು, ಮಕ್ಕಳು ಹಳ್ಳಿಯ ಹೊಳೆ ದಾಟಲಾಗದೆ ಜೀವ ಬಿಡುತ್ತಿದ್ದಾರೆ. ವಿದ್ಯುತ್ ನಾಡಿಗೆಲ್ಲ ಕೊಡುವ ಉತ್ತರ ಕನ್ನಡದ ಹಲವು ಹಳ್ಳಿಗಳಲ್ಲಿ ಇವತ್ತಿಗೂ ಚಿಮಣಿ ಬುಡ್ಡಿಯೇ ಬೆಳಕಿನ ಮೂಲ!! ಹಾಗಂತ ಜಿಲ್ಲೆಗೇನು ಅನುದಾನ ಕಮ್ಮಿ ಬಂದಿಲ್ಲ, 1987ರಲ್ಲಿ 60 ಲಕ್ಷವಿದ್ದ ಜಿಪಂ ಬಜೆಟ್ ಈಗ 260 ಕೋಟಿ ಆಗಿದೆ. ಪ್ರತಿ ವರ್ಷ ಗ್ರಾಮೀಣ ಅಭಿವೃದ್ಧಿ ಮತ್ತು ಗ್ರಾಮೀಣ ಸೇವೆಗೆಂದು 200 ಕೋಟಿಯಷ್ಟು ಹಣ ಬರುತ್ತಿದೆ.

ಇದರ ಪ್ರಯೋಜನ ಮಾತ್ರ ಜಿಲ್ಲೆಗೆ ಸಮರ್ಪಕವಾಗಿ ಆಗಿಲ್ಲ. ಲಾಭ ಆಗಿದ್ದು ಆಳುವವರಿಗೆ ಮತ್ತು ಅಧಿಕಾರಿಗಳೊಂದಿಗೆ ಅಡ್ಜಸ್ಟ್ ಮಾಡಿಕೊಂಡು ಬದುಕುತ್ತಿರುವ ಎದುರು ಪಕ್ಷದ ಹೇತ್ಲಾಂಡಿಗಳಿಗಷ್ಟೇ. ಮಲೆನಾಡು-ಕರಾವಳಿ-ಬಯಲುಸೀಮೆಯಂಥ ವಿಶಿಷ್ಟ ಭೌಗೋಳಿಕತೆಯ ಉತ್ತರ ಕನ್ನಡ ಸಮಗ್ರ ಪ್ರಗತಿಯ ನೀಲನಕ್ಷೆ ಯಾವ ಎಮ್ಮೆಲ್ಲೆ, ಎಂಪಿ, ಮಿನಿಸ್ಟರೂ ಈವರೆಗೆ ತಯಾರಿಸಿಲ್ಲ. ಆ ಬಗ್ಗೆ ಯೋಚಿಸುವ ಯೋಗ್ಯತೆಯೂ ಈ ಖಾಲಿ ಬುರುಡೆ ಭೂಪರಲಿಲ್ಲ. ಇನ್ನು ಜಿಪಂ-ತಾಪಂಗೆ ಆಯ್ಕೆಯಾದವರಂತೂ ಸ್ವ-ಪಕ್ಷದ ಮಂತ್ರಿ-ಶಾಸಕರ ಮರ್ಜಿ ಕಾಯುವುದು ಮತ್ತು ಸಿಕ್ಕಷ್ಟು ಕಿಸೆಗೆ ಇಳಿಸಿಕೊಳ್ಳುವುದಷ್ಟೇ ತಮ್ಮ 'ಡ್ಯೂಟಿ'ಯೆಂದುಕೊಂಡವರು, ಪಾಪ! ಉತ್ತರವಿಲ್ಲದ ಉತ್ತರ ಕನ್ನಡ ಜಿಲ್ಲೆಯ ಸ್ಥಿತಿಗತಿ ಕಳೆದ ಮೂರು ದಶಕದಿಂದ ಜಿಲ್ಲೆಯನ್ನು ಪ್ರತಿನಿಧಿಸಿದ ಮಂತ್ರಿ, ಎಂಪಿ, ಎಮ್ಮೆಲ್ಲೆಗಳ ಹೊಣೆಗೇಡಿತನ-ಅಯೋಗ್ಯತೆಗೆ ಸಾಕ್ಷಿಯಂತಿದೆ....

ದೋಷಪಾಂಡೆ ದರ್ಬಾರು

ಪಂಚಾಯತ್ ರಾಜ್ ವ್ಯವಸ್ಥೆ ಬಂದಂದಿನಿಂದ ಇವತ್ತಿನವರೆಗೂ ಉತ್ತರ ಕನ್ನಡದ ಜಿಲ್ಲಾ ಪಂಚಾಯ್ತಿಯನ್ನು ಅಕ್ಷರಶಃ ದೇಶಪಾಂಡೆ ಒಬ್ಬರೇ ಆಳಿದ್ದಾರೆ. ಜಿಪಂ ಅಧ್ಯಕ್ಷ-ಉಪಾಧ್ಯಕ್ಷ-ಸದಸ್ಯರನ್ನೆಲ್ಲ ರಿಮೋಟ್ ಕಂಟ್ರೋಲ್ ಆಡಿಸಿಯೇ ನಿಯಂತ್ರಿಸುತ್ತ ಬಂದಿದ್ದಾರೆ. ದೋಷಪಾಂಡೆ ಸಾಹೇಬ್ರು



ಉತ್ತರ ಕನ್ನಡ ಜಿಲ್ಲಾ ಪಂಚಾಯತ್ ಕಚೇರಿ


ದಳದಲ್ಲಿರಲಿ, ಕಾಂಗ್ರೆಸ್‌ನಲ್ಲಿರಲಿ ಜಿಪಂನಲ್ಲಿ ಆತನದೇ ಅಂತಿಮ ವಾಣಿ!! ಆತ ಕಿರುಬೆರಳ ಸನ್ನೆಯಿಂದ ತೋರಿಸಿದವರೇ ಜಿಪಂನ ಗೂಟದ ಕಾರಿನ 'ಆಳು'ಗಳಾಗುತ್ತಾರೆ. ಎಲೆಕ್ಷನ್ ಹೊತ್ತಲ್ಲಂತೂ ದೇಶಪಾಂಡೆ ಕೃಪಾಕಟಾಕ್ಷ ಇದ್ದವರಿಗಷ್ಟೆ ಟಿಕೆಟು! ಜಿಪಂ ಅಧಿಕಾರಿಗಳಂತೂ ದೇಶಪಾಂಡೆ ಹಾಕಿದ ಗೆರೆ ದಾಟಿದ ನಿದರ್ಶನ ಇವತ್ತಿಗೂ ಕಾಣಸದು. ಅಷ್ಟು ಖಡಕ್ ಸರ್ವಾಧಿಕಾರಿ ದೇಶಪಾಂಡೆಜೀ!

ದೇಶಪಾಂಡೆ ಅದೆಷ್ಟೇ ಕಡಿವಾಣ ಹಾಕಿದರೂ ಜನಪರವಾಗಿ ಮಾತಾಡುವ, ವಿಷಯ ಮಂಡಿಸುವ, ಕೆಲಸ ಮಾಡುವ ಧೈರ್ಯ ಆಡಳಿತ ಪಕ್ಷದ ಸದಸ್ಯರು ಮಾಡಲು ಅವಕಾಶಗಳಿತ್ತು. ದೇಶಪಾಂಡೆಯ ಮರ್ಜಿ-ಮುಲಾಜಿಲ್ಲದ ಚಿಲ್ಲಿ ಪಕ್ಷದ ಸದಸ್ಯರೂ ಅದ್ಯಾಕೋ ಕುಬ್ಜರಾಗಿ ಹೋಗಿದ್ದರು. 2010ರಲ್ಲಿ ಚುನಾಯಿತವಾದ ಜಿಪಂ ಆಡಳಿತ ಮಂಡಳಿ ಮೂರ್ಮೂರು ಅಧ್ಯಕ್ಷ, ಉಪಾಧ್ಯಕ್ಷರನ್ನು ಕಂಡಿತು. ಇದರಲ್ಲಿ ಯಾರೂ ಸ್ವಂತಿಕೆ, ಜನರಿಗಾಗಿ ತುಡಿತ ತೋರಿಸಲೇ ಇಲ್ಲ. ಪ್ರತಿಬಾರಿ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆ ಹೊತ್ತಲ್ಲೂ ಭರ್ಜರಿ ಪೈಪೋಟಿ ನಡೆಯಿತು. ಅಧ್ಯಕ್ಷ-ಉಪಾಧ್ಯಕ್ಷರಾದರೆ ದೇಶಪಾಂಡೆಯ ಅಡಿಯಾಳಿನಂತಾಗಬೇಕಾಗುತ್ತದೆಂದು ಗೊತ್ತಿದ್ದೂ ಗೂಟದ ಕಾರಿನ ಆಸೆ, ಪರ್ಸೆಂಟೇಜ್, ಕಿಕ್‌ಬ್ಯಾಗ್ ಲಾಲಸೆಗೆ ಬಿದ್ದು ಕಿತ್ತಾಡಿದರು ಕಾಂಗ್ರೆಸ್ ಸದಸ್ಯರು.


ಮೊದಲ ಅವಧಿಯಲ್ಲಿ ಅಧ್ಯಕ್ಷರಾದವರು ಮುಂಡಗೋಡದ 'ಇಂದೂರು' ಕ್ಷೇತ್ರದ ದಲಿತ ಮಹಿಳೆ ಸುಮಾ ಲಮಾಣಿ. ಆಕೆ ಬೊಂಬೆಯಂತೆ ಕುಳಿತೆದ್ದು ಅಧಿಕಾರ ಮುಗಿಸಿದರು. ಆಗ ಉಪಾಧ್ಯಕ್ಷನಾಗಿದ್ದ ಅಂಕೋಲೆಯ ಅವರ್ಸಾ ಕ್ಷೇತ್ರದ ಉದಯನಾಯ್ಕ ಜಿಪಂ 'ಕಾರ್ಯಭಾರ' ನಿಭಾಯಿಸಿ ಮಿಂಚಿದರು. ಆತನೇ ಅಧ್ಯಕ್ಷರ ಕೆಲಸವನ್ನೂ ಮಾಡಿದ್ದರು. ಸುಮಾ ಮಾತಾಡೊ ಬೊಂಬೆಯಾದರೆ, ಉದಯ ತಲೆ ಕುಣಿಸುವ ಬೊಂಬೆಯಂತಾಗಿದ್ದರು. ಎರಡನೇ ಅವಧಿಯ ಆಯ್ಕೆ ಹೊತ್ತಲ್ಲಿ ದೇಶಪಾಂಡೆ ಅಲ್ಪಸಂಖ್ಯಾತರ ವಿರೋಧಿ ಆಟ ಆಡಿದರು. ಮ್ಯಾಗಿ ಮೇಲಿನ ಸಿಟ್ಟಿಂದ ಭಟ್ಕಳದ ಆಲ್ಬರ್ಟ್ ಡಿಕೋಸ್ತಾನಿಗೆ ವಂಚಿಸಿದರು. ತನ್ನ ಹಳಿಯಾಳ ಕ್ಷೇತ್ರದ ಕೃಷ್ಣಾಗೌಡ ಎಂಬ ಪೆದ್ದನಿಗೆ ಪೀಠ ಕೊಡಿಸಿದರು. ದೇಶಪಾಂಡೆಗೆ ಗುಲಾಮನಾಗಿ ಅಧಿಕಾರ ನಡೆಸಿದ ಈತ ಜಿಪಂ ಆಡಳಿತ ನಿಭಾಯಿಸಲು ವಿಫಲನಾಗಿದ್ದ ಆ ಹೊತ್ತಲ್ಲಿ ಉಪಾಧ್ಯಕ್ಷೆಯಾಗಿದ್ದ ಕುಮಟಾದ ಲಲಿತಾ ಪಟಗಾರ ಗೂಟದ ಕಾರಿಗಷ್ಟೇ ಸೀಮಿತನಾಗಿ ಹೋದರು.

ಕೊನೆಯ ಅವಧಿಗೆ ಅಧ್ಯಕ್ಷೆ ಆಗಿದ್ದಾಕೆ ಹಾಲಕ್ಕಿ ಒಕ್ಕಲು ಬುಡಕಟ್ಟು ಸಮುದಾಯದ ಸರಸ್ವತಿ ಗೌಡ. ವಿದ್ಯಾವಂತೆಯಾದ ಈಕೆ ಒಂಚೂರು ಸ್ವಂತಿಕೆ ತೋರಿಸಿದರು. ಇದು ದೇಶಪಾಂಡೆಗಷ್ಟೇ ಅಲ್ಲ ಜಿಪಂ ಸಿಇಓ ರಾಮಪ್ರಸಾದ್ ಮನೋಹರ ಎಂಬ ಆಂಧ್ರವಾಳ್ಳು ಐಎಎಸ್‌ಗೂ ಸರಿ ಅನ್ನಿಸಲಿಲ್ಲ. ಸಿಇಓ ಕಾಲು ಕೆರೆದು ಅಧ್ಯಕ್ಷೆ ಜತೆ ಜಗಳ ಕಾಯತೊಡಗಿದರು. ಆಕೆಯ ಅಧಿಕಾರಕ್ಕೆ ಕೊಕ್ಕೆ ಹಾಕಿ ಕೇಕೆ ಹಾಕಿದರು. ಕುಮಟಾದ ಶಾಸಕಿ ಶಾರದಾ ಶೆಟ್ಟಿಯನ್ನೂ ಎದುರು ಹಾಕಿಕೊಂಡಿದ್ದ ಈ ಅಧಿಕಪ್ರಸಂಗಿ ಗೋಕರ್ಣ ಕ್ಷೇತ್ರದ ಸದಸ್ಯ ಕಳ್ಳ ಚಿಪ್ಪಿ ಉದ್ಯಮಿ ಪ್ರದೀಪ್ ನಾಯಕನ ಮಾತು ಮಾತ್ರ ಕೇಳುತ್ತಿದ್ದ. ಇದಕ್ಕೆ ಪ್ರತಿಯಾಗಿ ಗೋಕರ್ಣದ ರೆಸಾರ್ಟ್‌ಗಳಲ್ಲಿ ಪಾರ್ಟಿ-ಪ್ರಸಾದ ಪಡೆಯುತ್ತಿದ್ದನೆಂಬ ಗುಲ್ಲೂ ಹಬ್ಬಿತ್ತು. ಗೋಕರ್ಣ ನೀರು ಸರಬರಾಜು ಯೋಜನೆಯಲ್ಲಿ ಈ ರಾಮಪ್ರಸಾದ್ ಪ್ರದೀಪನ ಗ್ಯಾಂಗಿನ ಹಿತಕಾಯಲು ಅಡ್ಡದಾರಿ ಹಿಡಿದದ್ದು ದೊಡ್ಡ ಗದ್ದಲಕ್ಕೆ ಕಾರಣವಾಗಿತ್ತು! ಉಪಾಧ್ಯಕ್ಷೆ ಲಕ್ಷ್ಮೀ ಹಣಬರ ಮಗನ ಇಷ್ಟಾನಿಷ್ಟದಂತೆಯೇ ಕಾಲ ಕಳೆದರು.

2010ರಲ್ಲಿ ಆಯ್ಕೆಯಾದ ಸದಸ್ಯರಲ್ಲಿ ಬಹುತೇಕರು ಭತ್ಯೆ-ಬಿಲ್ಲುಗಳಿಗಷ್ಟೇ ಸೀಮಿತ ಆಗಿದ್ದರು. ಒಟ್ಟು 36 ಸದಸ್ಯರಲ್ಲಿ ಸ್ಪರ್ಧೆಗೆ ಬಿದ್ದಂತೆ ಹೆಚ್ಚೆಚ್ಚು ಮಾತಾಡಿದ್ದು ಹೊನ್ನಾವರದ ಪುಷ್ಪಾ ನಾಯ್ಕ ಎಂಬ ಕುಮಾರಿ ಮತ್ತು ಭಟ್ಕಳದ ಮಂಕಾಳ ವೈದ್ಯನೆಂಬ ವಿದುರ. ಇಬ್ಬರು



ಅನಂತಕುಮಾರ್ ಹೆಗ್ಡೆ



ಕಾಗೇರಿ

"ಹೋಮ್‌ವರ್ಕ್" ಮಾಡಿಕೊಂಡು ಬಂದು ಕರ್ಮಗೇಡಿ ಅಧಿಕಾರಿಗಳ ಮೇಲೆ ಬೀಳುತ್ತಿದ್ದರು. 2013ರಲ್ಲಿ ಶಾಸಕನಾಗಿ ಹೋದ ವೈದ್ಯ ಆನಂತರ ಜಿಪಂನತ್ತ ತಲೆಯೇ ಹಾಕಲಿಲ್ಲ. ಎಷ್ಟೇ ಮಾತಾಡಿದರೂ ಕು. ಪುಷ್ಪಾಗೆ ಗೂಟದ ಕಾರು ಮಾತ್ರ ಸಿಗಲಿಲ್ಲ. ಆದರೆ ಆಕೆ ಓಡಾಡುವ ಸ್ವಿಫ್ಟ್ ಕಾರಿನ ಬಗ್ಗೆ ತರತರದ ಸುದ್ದಿಗಳು ಎದ್ದಿದ್ದವು. ವಿಪಕ್ಷ ಬಿಜೆಪಿ ಸದಸ್ಯರು ಮಾತಾಡಿದ್ದೂ ಅಷ್ಟಕ್ಕಷ್ಟೇ. ಶಿರ್ಸಿಯ ರಾಘವೇಂದ್ರ ಭಟ್ಟ ಬಂದು ಅವ್ಯವಹಾರದ ಹಗರಣ ಬಯಲಿಗೆಳೆದರೂ ನಂತರ ನಿಗೂಢ ಮೌನಕ್ಕೆ ಶರಣಾದರು. ಒಟ್ಟಿನಲ್ಲಿ ಬಹುತೇಕರು ಇದ್ದೂ ಇಲ್ಲದಂತಿದ್ದರು ಜಿಪಂ ಸಭೆ-ಆಡಳಿತದಲ್ಲಿ.


ಸಮಸ್ಯೆ ಹಗರಣ


ಸಮಸ್ಯೆ ಮತ್ತು ಹಗರಣ ಜಿಲ್ಲಾ ಪಂಚಾಯ್ತಿಯನ್ನು ಬಿಟ್ಟೂಬಿಡದೆ ಕಾಡಿದೆ. ಕಳೆದೈದು ವರ್ಷದ ಅವಧಿಯಲ್ಲಿ ಹಲವು ಹಗರಣಗಳ ಗಬ್ಬುನಾತ ಹೊರಬಂದಿದೆ. ಅಂಗನವಾಡಿಗಳಿಗೆ 2012ರಲ್ಲಿ ಪೂರೈಸಿದ ಪೀಠೋಪಕರಣದ ಖರೀದಿಯಲ್ಲಿ ಭರ್ಜರಿ ಅವ್ಯವಹಾರ ನಡೆದಿತ್ತು. ಹಗರಣದಲ್ಲಿ ಸಿಕ್ಕಿ ಬಿದ್ದಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕಿ ಪ್ರಭಾವತಿ ಕರ್ನಿಂಗ್ ಅಮಾನಾತ್ತಾಗಿ ಹೋದರು. 2011ರಲ್ಲಿ ಅಂಗನವಾಡಿಗಳಿಗೆ ಪೂರೈಕೆಯಾದ ಪೀಠೋಪಕರಣ ಕಳಪೆ ಎಂಬ ಕೂಗೆದ್ದಿತ್ತು. ಪೀಠೋಪಕರಣ ಖರೀದಿ ಅವ್ಯವಹಾರಕ್ಕೆ ಸಂಬಂಧಿಸಿದ ಎರಡು ಪ್ರಕರಣ ಮತ್ತು ಪೀಠೋಪಕರಣ ಖರೀದಿ ಅವ್ಯವಹಾರದ ತನಿಖೆ ಇನ್ನೂ ನಡೆಯುತ್ತಲೇ ಇದೆ. ಇದು ದಿನದೂಡುವ ತಂತ್ರಗಾರಿಕೆ. ಕಳ್ಳರ ಹಿಂದೆ ದೊಡ್ಡವರಿದ್ದಾರೆಂಬ ಗುಲ್ಲೂ ಹಬ್ಬಿದೆ. ಪ್ರಾಥಮಿಕ ಶಾಲೆಗಳಿಗೆ ಅಗ್ಗದ-ಕಳಪೆ ಏಪ್ರನ್ ಪೂರೈಸಿ ರೂ. 999 ಖರ್ಚು ತೋರಿಸಿದ ಹಗರಣವೂ ಸ್ಫೋಟಿಸಿತ್ತು. ಆ ತನಿಖೆಯೂ ಕುಂಟುತ್ತ ಸಾಗಿದೆ.

ಕುಡಿಯುವ ನೀರಿನ ಯೋಜನೆಗಳಲ್ಲೂ ಬಾರಾ ಭಾನಗಡಿ ನಡೆದಿದೆ. ಆದರೂ ಸದಸ್ಯರು ಇದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಸರಿಸುಮಾರು 200ರಷ್ಟು ಸಣ್ಣ ಕುಡಿಯುವ ನೀರಿನ ಯೋಜನೆಗಳು ನೆನೆಗುದಿಗೆ ಬಿದ್ದಿವೆ. ಕೆಲವು ಅಸಮರ್ಪಕವಾದರೆ, ಇನ್ನಷ್ಟು ಅಪೂರ್ಣವಾಗಿದೆ. ಯೋಜನೆಗಳು ಜನರಿಗೆ ತಲುಪಿಲ್ಲ. ಜನರ ಹಾಹಾಕಾರ ತಪ್ಪಿಲ್ಲ. ಸಮುದ್ರದೊಂದಿಗೆ ನೆಂಟಸ್ತನ ಉಪ್ಪಿಗೆ ಬರ ಎಂಬಂಥ ಸ್ಥಿತಿ ಉತ್ತರ ಕನ್ನಡದ್ದು. ಕರಾವಳಿ ಭಾಗದಲ್ಲಿ ಭರಪೂರ ನೀರಿದೆ. ಆದರೆ ಕುಡಿಯಲು ಯೋಗ್ಯವಲ್ಲದ ಉಪ್ಪು ನೀರು. ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಜಾರಿಗೆ ತರಲು ಪ್ರಯತ್ನ ನಡೆದು ವಿಫಲವಾಗಿದೆ. ಗೋಕರ್ಣದ ಯೋಜನೆ ಜಾರಿಗೆ ಬಂದು ದಶಕ ಕಳೆದರೂ ಜನರಿಗೆ ಮಾತ್ರ ನೀರಿಗೆ ತತ್ವಾರ ತಪ್ಪಿಲ್ಲ. ಇದೇರೀತಿ ರಸ್ತೆ, ವಿದ್ಯುತ್, ಸೇತುವೆ ಇಲ್ಲದ ಹಳ್ಳಿಗಳೆಷ್ಟೋ ಇವೆ. ಪ್ರವಾಸೋದ್ಯಮದ ಹೆಸರಲ್ಲಿ ಬೋಗಸ್ ಕಾಮಗಾರಿ ನಡೆಯುತ್ತಿದೆ. ಲ್ಯಾಂಡ್ ಆರ್ಮಿ, ನಿರ್ಮಿತಿ ಕೇಂದ್ರ ಕಾಮಗಾರಿಗಳು ಬರೀ ಲೂಟಿಗಾಗಿಯೇ ಮಾಡಲಾಗುತ್ತಿದೆ. ಇಂಥ ಅಂದರ್-ಬಾಹರ್ ಯೋಜನೆಗಳಲ್ಲಿ ಇಂಜಿನಿಯರ್‌ಗಳು, ಅಧಿಕಾರಿಗಳು- ಜಿಪಂ ಆಯಕಟ್ಟಿನವರು ಜಿಪಂ-ತಾಪಂ ಸದಸ್ಯರ ಮೊದಲು ಪಳಗಿಸುತ್ತಾರೆ. ಹೀಗಾಗಿ

ಚಿಪ್ಪಿ ಮಾಫಿಯಾ ಡಾನ್!

ಉತ್ತರ ಕನ್ನಡ ಕುತೂಹಲ ಕ್ಷೇತ್ರದಲ್ಲೇ ಕುಮಟಾದ 'ಮಿರ್ಜಾನ್' ಪ್ರಮುಖವಾದದ್ದು. ಇಲ್ಲಿ ಚಿಪ್ಪಿ ಗಣಿ ಮಾಫಿಯಾದ ದೊರೆ ಪ್ರದೀಪ ನಾಯಕ್ ಜೆಡಿಎಸ್ ಹುರಿಯಾಳು. ಇಷ್ಟು ದಿನ ಪಕ್ಕದ ಗೋಕರ್ಣದ ಜಿಪಂ ಸದಸ್ಯನಾಗಿದ್ದ ಈತ ಮೀಸಲಾತಿ ಕಾರಣದಿಂದ


ರವಿಕುಮಾರ್ ಶೆಟ್ಟಿ


ಪ್ರದೀಪ್ ನಾಯ್ಕ್


ಹೊನ್ನಪ್ಪ ನಾಯ್ಕ್

ತವರು ತೊರೆಯಬೇಕಾಗಿದೆ. ಒಂದು ಕಾಲದಲ್ಲಿ ಕುಮಟಾದ ಜೆಡಿಎಸ್ ಲೀಡರ್ ಮಾಜಿ ಶಾಸಕ ದಿನಕರಶೆಟ್ಟಿಯ ಪರಮಾಪ್ತ ಬಂಟನಾಗಿದ್ದ ಈತ ಇವತ್ತು ತಾನೇ ಜೆಡಿಎಸ್ ಎಮ್ಮೆಲ್ಲೆ ಕ್ಯಾಂಡಿಡೇಟ್ ಎನ್ನುವಷ್ಟರಮಟ್ಟಿಗೆ ಬೆಳೆದಿದ್ದಾನೆ. ಈ ಸೊಕ್ಕಿಗೆ ಅಕ್ರಮ ಚಿಪ್ಪಿ ಕಲ್ಲು ಗಣಿಗಾರಿಕೆಯ ಕೊಪ್ಪರಿಗೆ ಕಾಸಿನ ಮಹಿಮೆಯೇ ಕಾರಣ.

ಗೋಕರ್ಣದ ಅಘನಾಶಿನಿ ನದಿಯ ಒಡಲು ಬಗೆದು ಪ್ರತಿನಿತ್ಯ ಸಾವಿರಾರು ಲೋಡ್ ಚಿಪ್ಪಿಕಲ್ಲು ತೆಗೆಯಲಾಗುತ್ತಿದೆ. ಇದು ಪರ್ಮಿಟ್ ಇಲ್ಲದ ಅಥವಾ ನಕಲಿ ಪರ್ಮಿಟ್‌ನ ದಂಧೆ. ಹಲವು ವರ್ಷದಿಂದ ಚಿಪ್ಪಿ ಕಲ್ಲು ತೆಗೆದು ಸಾಗಿಸುವ ಕಪ್ಪು ದಂಧೆ ನಿರಂತರ-ನಿರಾತಂಕವಾಗಿ ನಡೆಸುತ್ತಿರುವ ಪ್ರದೀಪ್ ನಾಯಕ್ ಒಂದು ಕಾಲದಲ್ಲಿ ಅಬ್ಬೇಪಾರಿಯಂತಿದ್ದವ. ಇವತ್ತು ಲೆಕ್ಕವಿಲ್ಲದಷ್ಟು ಕೋಟಿಗೆ ತೂಗುತ್ತಿದ್ದಾನೆ. ಈಚೆಗೆ ಒಂದು ಕೋಟಿಗೂ ಹೆಚ್ಚಿನ ಮೌಲ್ಯದ ಭೂತಬಂಗಲೆ, ಗೇರುಬೀಜ ಫ್ಯಾಕ್ಟರಿ ಕಟ್ಟಿರುವ ಪ್ರದೀಪನ ಒಣ ದೌಲತ್ತಿಗೆ ಇಡೀ ಜಿಲ್ಲೆ ದಂಗಾಗಿದೆ.

ಹಣ ಹರಿಸಿಯೇ ಹೊಸ ಕ್ಷೇತ್ರ- ಮಿರ್ಜಾನಲ್ಲಿ ಗೆಲ್ಲುವ ಲೆಕ್ಕಾಚಾರ ಈತನದು. ಕಳೆದ ಅಸೆಂಬ್ಲಿ ಎಲೆಕ್ಷನ್‌ನಲ್ಲಿ ದಿನಕರ ಶೆಟ್ಟಿಗೆ ದೋಖಾ ಮಾಡಿದ ಈತ ಎಮ್ಮೆಲ್ಲೆ ಕನಸೂ ಕಾಣುತ್ತಿದ್ದಾನೆ. ಈತನ ದುಡ್ಡಿನ ಆರ್ಭಟಕ್ಕೆ ದಿನಕರ ಶೆಟ್ಟಿಯಷ್ಟೇ ಅಲ್ಲ ಶಾಸಕಿ ಶಾರದಮ್ಮನ ಮಗ ರವಿಕುಮಾರನೂ ಕಂಗಾಲಾಗಿದ್ದಾನೆ. ಹೀಗಾಗಿ ರವಿಕುಮಾರ್ ತನ್ನ ವೈರಿಯೂ ದೇಶಪಾಂಡೆ ಬಳಗದ ಭೂಪನೂ ಆದ ಮಾಜಿ ಜಿಪಂ ಸದಸ್ಯ ಹೊನ್ನಪ್ಪ ನಾಯಕರ್‌ಗೇ ಟಿಕೆಟ್ ಕೊಡುವ ಮನಸ್ಸು ಮಾಡಿದ್ದಾನೆ. ಹೊನ್ನಪ್ಪಣ್ಣನೂ ಪಳಗಿದ ಹುರಿಯೇ- ಎರಡು ಬಾರಿ ಜಿಪಂ ಸದಸ್ಯನಾಗಿ ಎರಡು-ಮೂರು ಮನೆ- ಜಲ್ಲಿ ಕ್ರಾಷರ್, ಕಾರು, ಐಷಾರಾಮಿ ಕಂಡಿರುವ ಈತನ ಬಳಿಯೂ ಅಪಾರ ಹಣವಿದೆ.

ಹೀಗಾಗಿ ಮಿರ್ಜಾನಲ್ಲಿ ಹಣದ ಹಣಾಹಣಿಯೇ ಆಗಲಿದೆ. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಉದುರಿಸಲು ರವಿಕುಮಾರ್ ಸ್ಕೆಚ್ ಹಾಕಿದ್ದಾನೆ. ಹಾರಾಡುತ್ತಿರುವ ಪ್ರದೀಪ್ ನಾಯಕ್ ಸೋತರೆ ಆತನ ಇತಿಶ್ರೀ ಆಗಲಿದೆ. ಗೆದ್ದರೆ ಆಜನ್ಮವೈರಿ ದಿನಕರ ಶೆಟ್ಟಿಗೊಂದು ಚೆಕ್‌ಮೇಟ್ ಇದ್ದಂತಾಗುತ್ತದೆ. ಅತ್ತ ಹೊನ್ನಪ್ಪ ನಾಯಕ್ ಸೋತರೂ-ಗೆದ್ದರೂ ತನಗಾತನ ಕಿರಿಕಿರಿ ಇರದು. ಇದು ರವಿ ಗಣಿತ. ಸದ್ಯದ ಸ್ಥಿತಿ ನೋಡಿದರೆ, ಹೊನ್ನಪ್ಪಣ್ಣನಿಗೆ ಕಷ್ಟವಿದೆ; ಪ್ರದೀಪಣ್ಣನ ಕುರುಡು ಕಾಂಚಾಣ ತಾಂಡವ ನೃತ್ಯ ಮಾಡಲಿದೆ ಅನ್ನಿಸುತ್ತದೆ. ಯಾರೇ ಗೆದ್ದರೂ ಅಪಾಯಕಾರಿಗಳೇ!!

...ಾಯ್ತಿ ಸದಸ್ಯರು ಕಂಡೂಕಾಣದಂತಿದ್ದು ಬಿಡುತ್ತಾರೆ. ...ಿ ಉತ್ತರಕನ್ನಡ ಜಿಪಂ ಆಡಳಿತದ ಕರ್ಮ: ಜಿಪಂನ ...ರೆ ದೇಶಪಾಂಡೆ ಮರ್ಮ!


...ಅವ್ಯವಹಾರ-ಅವಾಂತರ-ಅಸಮರ್ಥರ ಅಡ್ಡೆಯಂತಾಗಿ ...ಿ ವರ್ಷ ಕಳೆದಿರುವ ಉತ್ತರ ಕನ್ನಡ ಜಿಪಂನ ಹೊಸ ...ಳಿತಗಾರ ಆಯ್ಕೆಗೆ ಫೆಬ್ರವರಿ 13ರಂದು ಚುನಾವಣೆ ...ಯಲಿದೆ. ಜಿಪಂನ ಸದಸ್ಯರಾಗುವ ಕನಸು ಕಾಂಗ್ರೆಸ್-...ಜೆಪಿ-ಜೆಡಿಎಸ್‌ನ ಮರಿ ಪುಢಾರಿಗಳಿಗೆ ಹಗಲಲ್ಲೂ ...ಕಾಣತೊಡಗಿದೆ. ಕಳೆದ ಬಾರಿ 36 ಸದಸ್ಯರಿದ್ದ ಜಿಪಂ ...ಸ್ಯರ ಬಲ ಈಗ 39ಕ್ಕೆ ಏರಿದೆ. ಇದೇ ಅನುಪಾತದಲ್ಲಿ ...ಂಕ್ಷಿಗಳೂ ಹೆಚ್ಚಾಗಿದ್ದಾರೆ. ಕಳೆದ ಬಾರಿ 22 ಕಾಂಗ್ರೆಸ್, ...ಬಿಜೆಪಿ, 4 ಪಕ್ಷೇತರ ಮತ್ತು ಒಬ್ಬ ಜೆಡಿಎಸ್ ಸದಸ್ಯರು ...ಆಯ್ಕೆಯಾಗಿದ್ದರು. ಈಗ ಬಂದಿರುವ ಹೊಸ ...ಮೀಸಲಾತಿಯಂತೆ 19 ಹಳಬರಿಗೆ ತಂತಮ್ಮ ಕ್ಷೇತ್ರದಲ್ಲಿ ...ಸುವ ಅವಕಾಶ ಇಲ್ಲದಾಗಿದೆ. ಇವರೆಲ್ಲ ತಮ್ಮ ಮಡದಿ, ...ಕ್ಕಳು, ವಿಶ್ವಾಸಿಕ ಸಂಬಂಧಿಗಳನ್ನು ಅಖಾಡಕ್ಕಿಳಿಸಿ ...ೋಕ್ಷವಾಗಿ ಪರ್ಸೆಂಟೇಜ್‌ಗೆ ನಾಲಿಗೆಯೊಡ್ಡಲು ...ಣಿಸುತ್ತಿದ್ದಾರೆ.


ಆರಂಭಿಕ ಟ್ರೆಂಡ್ ಗಮನಿಸಿದರೆ ಜಿಲ್ಲೆಯಲ್ಲಿ ದೇಶಪಾಂಡೆ ...ಂಗ್ರೆಸ್ ಪ್ರಬಲವಾಗಿದೆ. ಆತನಿಗೆ ಮ್ಯಾಗಿ ಗ್ಯಾಂಗಿನ ...ವೂ ಹೆಚ್ಚಿಲ್ಲ. ಎದುರಾಳಿ ಬಿಜೆಪಿ ಮಕಾಡೆ ಮಲಗಿದೆ. ...ಡಿಎಸ್‌ಗೆ ಹಳಿಯಾಳ, ಕುಮಟಾದಂಥ ಕಡೆ ಕಳ್ಳ ಹಣದ ...ರ್‌ಗಳು ಮಾನ ಉಳಿಸಬೇಕಾಗಿದೆ. ಉಳಿದಂತೆ ಜೆಡಿಎಸ್ ...ಪೂರ್ಣ ಸೊರಗಿದೆ. ಜಿಲ್ಲೆಯ ಯಾವ ಮೂಲೆಯಲ್ಲಿ ...ತು ಯಾವ ಲೆಕ್ಕಾಚಾರ ಹಾಕಿ ತಾಳೆ ನೋಡಿದರೂ ...ಂಗ್ರೆಸ್ ಕಸುವು ಕಾಣಿಸುತ್ತದೆ. ಸಾಕ್ಷಾತ್ ದೇಶಪಾಂಡೆ ...ಅಥವಾ ಆತನ ಮಗ ಎಂಪಿಗಿರಿಗೆ ನಿಂತರೆ ಗೆಲ್ಲುವುದು


ಶಾಸಕ ವಿ.ಎಸ್. ಪಾಟೀಲ ಹಾವು-ಮುಂಗುಸಿ. ಹಳಿಯಾಳ ದೇಶಪಾಂಡೆ ಕ್ಷೇತ್ರ. ಮಾಜಿ ಶಾಸಕ ಸುನಿಲ್ ಹೆಗಡೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದರೂ ಮಾನಸಿಕವಾಗಿ ಅಲ್ಲಿ ಹೊಂದಾಣಿಕೆಯಾಗದೆ ಚಡಪಡಿಸುತ್ತಿದ್ದಾರೆ. ಜೆಡಿಎಸ್‌ಗೆ


ಕ್ಷೇತ್ರದಲ್ಲಿ ಮುಂದೆ ತನ್ನ ಹಾದಿಗೆ ಅಡ್ಡ ಬರದ ಕಾಂಗ್ರೆಸಿಗರಿಗೇ ವೈದ್ಯ ಜಿಪಂ ಸದಸ್ಯರಾಗಿಸುವುದು ಗ್ಯಾರಂಟಿ. ಮಾಜಿ ಶಾಸಕ ಜೆ.ಡಿ. ನಾಯ್ಕ್, ಬಿಜೆಪಿಯ ಮಾಜಿ ಮಂತ್ರಿ ಶಿವಾನಂದ ನಾಯ್ಕ. ದೀವರ ಪಡೆ ವೈದ್ಯನ

ಮಂತ್ರಿಯಾಗಿದ್ದಾಗಲೇ ಜಿಲ್ಲಾ ನಾಯಕತ್ವ ಪಡೆಯಲಾಗದ ಪೊಕ್ಕು ಕಾಗೇರಿಗೆ ಆತನ ಕಂತ್ರಿತನವೇ ಇವತ್ತು ಮುಳುವಾಗಿದೆ. ಶಿರಸಿಯಲ್ಲಿ ಗೆಲ್ಲಲಿಕ್ಕೇ ಎದುಸಿರು ಬಿಡುವ ಕಾಗೇರಿ ಜಿಪಂ ಗೆಲ್ಲುವುದು ಸಾಧ್ಯವೇ ಇಲ್ಲವೆಂದು


ಸತೀಶ್ ಸೈಲ್


ಮಂಕಾಳ್ ವೈದ್ಯ


ಶಾರದಾ ಶೆಟ್ಟಿ


ಕೆ.ಆರ್. ರಮೇಶ್

...ದ್ಯವೇ ಇಲ್ಲದಂತಾಗಿದೆ. ಆದರೆ ದೇಶಪಾಂಡೆಯ ದೋಖಾ ...ಂಗಿನ ಅಂತರ್ಜಾಲ ಜಿಲ್ಲೆಯಲ್ಲಿ ವ್ಯಾಪಕವಾಗಿ ಹಬ್ಬಿದೆ. ...ಶಪಾಂಡೆ ಯಾವ ಪಕ್ಷದಲ್ಲಿರುತ್ತಾರೋ ಆ ಪಕ್ಷ ಜಿಪಂ ...ದ್ದುಗೆ ಏರುತ್ತ ಬಂದಿದೆ. ತಮಾಷೆಯ ಒಗಟು ...ಶಪಾಂಡೆಗೂ ಅರ್ಥವಾಗಿಲ್ಲ.

ತಾಲೂಕುಗಳಲ್ಲಿ ಬಲಾಬಲ

ಜಿಲ್ಲೆಯ ಹನ್ನೊಂದು ತಾಲ್ಲೂಕಲ್ಲಿ ಕಾಂಗ್ರೆಸ್ ನಂತರದ ...ನದಲ್ಲಿ ಬಿಜೆಪಿಯಿದೆ. ಆದರೆ ಚಿಡ್ಡಿ ಚತುರ ಕಾಗೇರಿ ...ಣಿಯ ಶಿರಸಿ ತಾಲ್ಲೂಕೊಂದು ಬಿಟ್ಟರೆ ಉಳಿದೆಡೆ ...ಜೆಪಿಗೆ ಸರಿಯಾದ ನೆಲೆಯೇ ಇಲ್ಲ. ಶಿರಸಿಯಲ್ಲಿ ಬಿಜೆಪಿ-...ಂಗ್ರೆಸ್ ಸಮಬಲದಲ್ಲಿವೆ. ಆದರೆ ಕಾಗೇರಿ ಬಾಲ ...ತ್ತರಿಸಲು ಆತನದೇ ಪಕ್ಷದ ಎಂಪಿ ಅನಂತ್ಮಾಣಿ ...ಹೊಂಚುಹಾಕಿ ಕುಂತಿರುವುದರಿಂದ ಇಲ್ಲೂ ಕಾಂಗ್ರೆಸ್ಸೇ ...ಮೇಲುಗೈ ಸಾಧಿಸಿದರೂ ಸಾಧಿಸಬಹುದು. ಇದೇ ಅಸೆಂಬ್ಲಿ ...ಕ್ಷೇತ್ರದ ಸಿದ್ದಾಪುರದಲ್ಲಿ 'ಬಂ' ಪ್ರಭಾವ ವಲಯದ ದೀವರು ...ಟ್ಟಿದ್ದಾರೆ. ಹಾಗೆಯೇ ರಾಮಕೃಷ್ಣ ಹೆಗಡೆಜೀ ಹುಟ್ಟೂರು ...ಮು. ಆತನ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆ ...ಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದಾರೆ. ಹವ್ಯಕರಿಗೆ ಹೆಗಡೆಜೀ ...ಕ್ಕೆ ಒಂಚೂರು ಒಲವು ಇವತ್ತಿಗೂ ಇದೆ. ಶಶಿಭೂಷಣ ...ಡಿಎಸ್‌ನಲ್ಲಿ ಇದ್ದಾರೆ. 'ಬಂ'ರ ಮುದ್ದಿನ ಮಗ ಮಧು ...ಡಿಎಸ್ ಶಾಸಕ. ಹೀಗಾಗಿ ಸಿದ್ದಾಪುರದಲ್ಲಿ ಜೆಡಿಎಸ್ ...ಂಚ ಬಲಶಾಲಿಯಾಗಿದ್ದರೂ ಸಮರ್ಥ, ಹಣವಂತ ...ಸ್ಪರ್ಧಿಗಳ ಕೊರತೆಯಲ್ಲಿದೆ. ಇದು ಕಾಂಗ್ರೆಸ್‌ಗೆ ...ಲಾಭದಾಯಕ.

...ಯಲ್ಲಾಪುರದಲ್ಲಿ ಎರಡು ಜಿಪಂ ಕ್ಷೇತ್ರಗಳಿವೆ. ಇಲ್ಲಿ ...ಂಗ್ರೆಸ್‌ನ ಶಿವರಾಮ ಹೆಬ್ಬಾರ್ ಶಾಸಕ. ಕ್ಷೇತ್ರದ ಮೇಲೆ ...ಡಿತ ಸಾಧಿಸಿರುವ ಹೆಬ್ಬಾರ್ ಪಕ್ಷದ ಮುಂದಗೋಡದ ...ಎರಡು ಕ್ಷೇತ್ರ ಗೆಲ್ಲುವ ಸ್ಕೆಚ್ ಹಾಕಿದ್ದಾರೆ. ಬಿಜೆಪಿ ಇಲ್ಲಿ ...ಬಡ ಮನೆ. ಸಂಸದ ಅನಂತ್ಮಾಣಿ ಮತ್ತು ಮಾಜಿ

ಕೆ.ಆರ್. ರಮೇಶ್ ಎಂಬ ರೊಕ್ಕಸ್ಥ ಜಮೀನ್ದಾರನ ಸಾರಥ್ಯ ಸಿಕ್ಕಿದೆ. ಈತ ಜಿಪಂ ಕ್ಷೇತ್ರದಲ್ಲಿ ಕ್ಯಾಂಡಿಡೇಟ್‌ಗಳ ಹಾಕಿ ತಾಕತ್ತು ನೋಡುವ ತಯಾರಿ ನಡೆಸಿದ್ದಾನೆ. ಇದು ದೇಶಪಾಂಡೆ-ಸುನಿಲ್ ಹೆಗಡೆ ಇಬ್ಬರ ಬಂಡವಾಳವನ್ನು ಬಯಲಾಗಿಸಲಿದೆ. ಹಳಿಯಾಳ ಈ ಬಾರಿ ಕದನ ಕುತೂಹಲದ ಕ್ಷೇತ್ರವಾಗಿದೆ. ಜೋಯಿಡಾದಲ್ಲಿ ದೇಶಪಾಂಡೆ-ಸುನಿಲ್-ರಮೇಶ್ ಕಾಳಗ ನಡೆಯಲಿದೆ. ದೇಶಪಾಂಡೆ-ಘೋಟನೇಕರ್ ಕಾಂಗ್ರೆಸ್ ಈ ಎರಡು ತಾಲ್ಲೂಕಲ್ಲಿ ಗಂಡಾಂತರಕ್ಕೆ ಸಿಲುಕಿದೆ.

ಕರಾವಳಿಯ ಕಾರವಾರ-ಅಂಕೋಲಾದ ಪಕ್ಷೇತರ ಸದಸ್ಯ ಸತೀಶ್ ಸೈಲ್ ಕಾಂಗ್ರೆಸ್‌ನ ಸಹ ಸದಸ್ಯತ್ವ ಅಧಿಕೃತವಾಗೇ ಈಚೆಗೆ ಪಡೆದುಕೊಂಡಿದ್ದಾರೆ. ಜಿಪಂ-ತಾಪಂ ಎಲೆಕ್ಷನ್‌ಗಾಗಿಯೇ ಆತ ಕಾಂಗ್ರೆಸ್ ಸೇರಿದ್ದಾರೆ. ಕಾಂಗ್ರೆಸ್‌ನ ದೇಶಪಾಂಡೆಯೂ ಅನಿವಾರ್ಯವಾಗಿ ಸೈಲ್‌ನ ಸೆಳೆದು ಅಪ್ಪಿದ್ದಾರೆ. ಮಾಜಿ ಮಂತ್ರಿ ಆನಂದ ಅಸ್ನೋಟಿಕರ್ ನಾಪತ್ತೆಯಾಗಿ ಬಹಳ ಕಾಲವಾಗಿದೆ. ಆತನ ಬೆಂಬಲಿಗರು ಕಾಂಗ್ರೆಸ್-ಬಿಜೆಪಿ ನಡುವೆ ಹಂಚಿಹೋಗಿದ್ದಾರೆ. ಬಿಜೆಪಿಗೆ ಇಲ್ಲಿ ನೆಲೆ-ಬೆಲೆಯೇ ಇಲ್ಲ. ಸೈಲ್ ಕಾಂಗ್ರೆಸ್‌ಗೆ ಗೆಲ್ಲುವ ಅವಕಾಶವೇ ಜಾಸ್ತಿ. ಪಕ್ಕದ ಕುಮಟಾ-ಹೊನ್ನಾವರದಲ್ಲಿ ಶಾರದಾ ಶೆಟ್ಟಿ ಶಾಸಕಿ. ಆಕೆಯ ಮಗ ರವಿಕುಮಾರ ಶೆಟ್ಟಿ ಎಲೆಕ್ಷನ್ ತಂತ್ರಗಾರಿಕೆ ಹೆಣೆಯುತ್ತಿದ್ದಾನೆ. ಮುಂದೆ ತನಗೆ ಎಮ್ಮೆಲ್ಲೆಯಾಗಲು ಅನುಕೂಲವಾಗುವಂತೆ ಕ್ಷೇತ್ರ ಹಸನುಗೊಳಿಸುತ್ತಿದ್ದಾನೆ. ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಆರೂ ಕ್ಷೇತ್ರದಲ್ಲಿ ತನಗೆ ನಿಷ್ಠರಾದವರಿಗೇ ಆತ ಮಣೆ ಹಾಕುವುದು ಖಂಡಿತ. ಹೀಗಾಗಿ ದೇಶಪಾಂಡೆ ಶಿಷ್ಯರಾದ ಶಿವಾನಂದ ಹೆಗಡೆ (ಬಾಬೆಗ್ಗೆ) ಹೊನ್ನಪ್ಪ ನಾಯಕ್, ಎಲ್.ವಿ. ಶಾನಭಾಗ ಮುಂತಾದವರು ನಿದ್ದೆಗೆಡುತ್ತಿದ್ದಾರೆ.


ಭಟ್ಕಳದ ಪಕ್ಷೇತರ ಶಾಸಕ ಮಂಕಾಳ ವೈದ್ಯ ಕಾಂಗ್ರೆಸ್‌ನಲ್ಲಿದ್ದಾರೆ. ಹೊನ್ನಾವರ-ಭಟ್ಕಳದ ಒಟ್ಟು 7

ಮೇಲಿನ ಸೇಡು ತೀರಿಕೆಗೆ ಸಜ್ಜಾಗಿದೆ. ಭಟ್ಕಳದಲ್ಲಿ ಜಂಗೀ ನಿಕಾಲಿ ಕುಸ್ತಿ ನಡೆವ ಸೂಚನೆ ಗೋಚರಿಸುತ್ತಿದೆ. ದೀವರೆಲ್ಲ ಬಿಜೆಪಿಯತ್ತ ವಾಲಿದರೆ, ಇತರ ಹಿಂದುಳಿದ ವರ್ಗದವರು ವೈದ್ಯನ ಬೆನ್ನಿಗೆ ನಿಲ್ಲುತ್ತಾರೆ. ಇದು ಭಟ್ಕಳದ ದೀವರು V/s ಇತರರು ರಾಜಕೀಯದ ಒಳಸುಳಿ.

ಒಟ್ಟಿನಲ್ಲಿ ಕಾಂಗ್ರೆಸ್ ಗೆಲ್ಲುವ ಹುಮ್ಮಸ್ಸಿನಲ್ಲಿದ್ದರೆ, ಬಿಜೆಪಿ ಎದುರಾಳಿಗಳ ನೋಡಿಯೇ ಥರಗುಟ್ಟುತ್ತಿದೆ. ಬಿಜೆಪಿಯಲ್ಲಿ ಇಡೀ ಜಿಲ್ಲೆಯನ್ನು ಪ್ರಭಾವಿಸುವ ಒಬ್ಬೇ ಒಬ್ಬ ನಾಯಕನಿಲ್ಲ. ಕಾಗೇರಿ ಬಿಟ್ಟರೆ ಮತ್ತ್ಯಾರೂ ಬಿಜೆಪಿಯಲ್ಲಿ ಕಾಣಿಸುತ್ತಿಲ್ಲ. ಈ ಕಾಗೇರಿ ಶಿರಸಿಗಷ್ಟೇ ಸೀಮಿತವಾಗಿ ಹೋಗಿದ್ದಾರೆ.

ಬಿಜೆಪಿಗರೇ ನಗಾಡುತ್ತಿದ್ದಾರೆ. ಸಂಸದ ಅನಂತ್ಮಾಣಿ ಗೆದ್ದನಂತರ ಎಲ್ಲಿದ್ದಾನೆಂದೇ ಗೊತ್ತಾಗುತ್ತಿಲ್ಲ. ಆತನಿಗೂ ಜಿಲ್ಲಾ ಮಟ್ಟದ ಲೀಡರಿಕೆ ಯೋಗ್ಯತೆಯಿಲ್ಲ. ಕಮ್ಯುನಲ್ ಮಾತುಗಾರಿಕೆ ಬಿಟ್ಟರೆ ಜಿಲ್ಲೆಯ ಕಷ್ಟ-ಸುಖ-ಭೌಗೋಳಿಕ ಉದ್ದಗಲವೇ ಈ ಕರ್ಮಗೇಡಿ ಮಾಣಿಗೆ ಗೊತ್ತಿಲ್ಲ. ಈತನ ಅಧಿಕಪ್ರಸಂಗಕ್ಕೆ ಬಿಜೆಪಿ ಕಾರ್ಯಕರ್ತರೇ ಹೇಸಿ ಹೋಗಿದ್ದಾರೆ. ಒಂದರ್ಥದಲ್ಲಿ ಬಿಜೆಪಿ ಜಿಲ್ಲೆಯಲ್ಲಿ ನಿರ್ನಾಮವಾಗಿದೆ. ಕಾಂಗ್ರೆಸ್‌ನ ದೇಶಪಾಂಡೆ ಪಡೆಯ ಏಕಮುಖ ರಾಜಕಾರಣದ ಅನಾಹುತ ನಡೆಯುತ್ತಿದೆ.

● ನಹುಷ



ಬಾಬರಿ ಮಸೀದಿ ಧ್ವಂಸ: ಅಪರಾಧ ಮತ್ತು ಹೊಣೆಗಾರಿಕೆ
ಪೇಜಾವರ ಶ್ರೀಗಳ ಪ್ರಶ್ನಾರ್ಹ ನಿಲುವು

ಕೇದವಾರ, ಐದನೆಯ ಬಾರಿ ಉಡುಪಿಯ ಕೃಷ್ಣ ಮಠದ ಪರ್ಯಾಯ ಪೀಠವನ್ನೇರುವುದಕ್ಕೆ ಮೊದಲು ನೀಡಿದ ಪತ್ರಿಕಾ ಸಂದರ್ಶನವೊಂದರಲ್ಲಿ ಪೇಜಾವರ ಶ್ರೀಗಳು, ಅಯೋಧ್ಯೆಯ ಬಾಬರಿ ಮಸೀದಿ ವಿವಾದ ಕುರಿತು ಹೇಳುತ್ತ "ಮಸೀದಿಯನ್ನು ಧ್ವಂಸಗೊಳಿಸಿ ರಾಮಮಂದಿರ ಕಟ್ಟುವುದನ್ನು ನಾನು ಕಟ್ಟ ಕಡೆಯವರೆಗೂ ವಿರೋಧಿಸಿದ್ದೆ. ಮಸೀದಿಯ ಪಕ್ಕದಲ್ಲೇ ರಾಮಮಂದಿರ ನಿರ್ಮಾಣ ನನ್ನ ನಿಲುವಾಗಿತ್ತು, ಆದರೆ ನನ್ನ ಯೋಜನೆಯನ್ನು ವಿಫಲಗೊಳಿಸಲಾಯಿತು" ಎಂದಿದ್ದಾರೆ. (ವಾರ್ತಾಭಾರತಿ 18.01.2016 ಪುಟ 1) ಪೇಜಾವರ ಶ್ರೀಗಳು ಈ ಮಾತನ್ನು ಹಿಂದೆಯೂ ಹಲವು ಸಂದರ್ಭಗಳಲ್ಲಿ ಹೇಳಿದ್ದುಂಟು. ಅದು ಏನೇ ಇರಲಿ 1992 ಡಿಸೆಂಬರ್ 6 ರಂದು ಬಾಬರಿ ಮಸೀದಿ ಉರುಳಿ ಬೀಳುತ್ತಿದ್ದಾಗ, ಪೇಜಾವರ ಶ್ರೀಗಳು ವಿಹಿಂಪ ಹಾಗೂ ಇತರ ಸಂಘ ಪರಿವಾರದ ನಾಯಕರುಗಳ ಜೊತೆ ಸ್ಥಳದಲ್ಲಿ ಹಾಜರಿದ್ದರು. ಅವರಲ್ಲದೆ, ದೇಶದ ಮೂಲೆ ಮೂಲೆಗಳಿಂದ ಬಂದ ಸಾವಿರಾರು ಕರಸೇವಕರು ಸಹ ಮಸೀದಿ ಎದುರು ಜಮೆಯಾಗಿದ್ದರು. ಅವರು ಮುಸ್ಲಿಮ್ ಸಮುದಾಯದ ವಿರುದ್ಧ ಘೋಷಣೆಗಳನ್ನು ಕೂಗುತ್ತಿದ್ದರು; ನಾಯಕರುಗಳ ಭಾಷಣದ ಅಬ್ಬರವೂ ಜೋರಾಗಿಯೇ ಇತ್ತು. ಅದೊಂದು ಸಾಮೂಹಿಕ ಉದ್ರೇಕದ ಮೆಗಾ ಶೋ ಆಗಿತ್ತು. "ಬಾಬರಿ ಮಸೀದಿ ಧ್ವಂಸವನ್ನು ತಡೆಯಲು ತಮ್ಮಿಂದ ಆಗಲಿಲ್ಲ. ಯಾರೂ ತಮ್ಮ ಮಾತನ್ನು ಕೇಳುವ ಮನಃಸ್ಥಿತಿಯಲ್ಲಿ ಇರಲಿಲ್ಲ" ಎಂದು ಪೇಜಾವರ ಶ್ರೀಗಳು ಮಸೀದಿ ಉರುಳಿದ ನಂತರ ವ್ಯಥೆ ವ್ಯಕ್ತಪಡಿಸಿದ್ದರು. ಆದರೆ ಬಾಬರಿ ಮಸೀದಿ ಇರುವ ಜಾಗದಲ್ಲಿ ಮಸೀದಿಯನ್ನು ತೆರವು ಮಾಡಿ ರಾಮಮಂದಿರ ಕಟ್ಟುವುದನ್ನೇ ಉದ್ದೇಶವಾಗಿರಿಸಿಕೊಂಡ ಸಂಘ ಪರಿವಾರದ ಜೊತೆ ಪೇಜಾವರ ಶ್ರೀಗಳ ಒಡನಾಟ ಅಬಾಧಿತವಾಗಿ ಮುಂದುವರಿದಿದೆ. ಸಂಘ ಪರಿವಾರದ ಪ್ರಮುಖ ಸಂಘಟನೆಯಾಗಿರುವ ವಿಹಿಂಪದ ಜೊತೆ ಅದರ ಹುಟ್ಟಿನಿಂದಲೂ ಪೇಜಾವರ ಶ್ರೀಗಳಿಗೆ ನಿಕಟ ಬಾಂಧವ್ಯವಿದೆ. ಈಗಲೂ ಅವರು ವಿಹಿಂಪದ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿದ್ದು ಇತ್ತೀಚೆಗೆ ನಡೆದ ಅದರ 50ನೆಯ ವಾರ್ಷಿಕೋತ್ಸವದ ಸಾರಥ್ಯವನ್ನು ಅವರೇ ನಿರ್ವಹಿಸಿದ್ದರು. ಹಾಗಾಗಿ ಬಾಬರಿ ಮಸೀದಿ ಧ್ವಂಸದಲ್ಲಿ ಪೇಜಾವರ ಶ್ರೀಗಳ ಭಾಗೀದಾರಿಕೆಯೂ ಇದ್ದು ಅದನ್ನು ಅವರು ನಿರಾಕರಿಸುವಂತಿಲ್ಲ.

ಬಾಬರಿ ಮಸೀದಿ ಧ್ವಂಸ ಹಠಾತ್ತನೆ ನಡೆದ ಆಕಸ್ಮಿಕ ಘಟನೆ ಅಲ್ಲ. ಅದರ ಹಿಂದೆ ಹಲವು ವರ್ಷಗಳ ಸಂಘಟಿತ ಪ್ರಯತ್ನವಿತ್ತು. 1992ರ ಡಿಸೆಂಬರ್ 6 ರಂದು ಮಸೀದಿಯನ್ನು ಉರುಳಿಸಿದ್ದು ಕೂಡ ಶಿಸ್ತುಬದ್ಧವಾಗಿ ನಡೆದ ಪೂರ್ವಯೋಜಿತ ಕಾರ್ಯಾಚರಣೆಯಾಗಿತ್ತು. ಆ ಸಂದರ್ಭದಲ್ಲಿ ಪೇಜಾವರ ಶ್ರೀಗಳ ಜೊತೆ ಸ್ಥಳದಲ್ಲಿ ಹಾಜರಿದ್ದ ಬಿಜೆಪಿ ನಾಯಕ ಎಲ್.ಕೆ. ಅಡ್ವಾನಿ ಅವರು ಅನಂತರ ಅದು ತನ್ನ ಜೀವಮಾನದಲ್ಲಿ ಅತ್ಯಂತ ಕರಾಳದಿನ ಎಂದು ಉದ್ಗರಿಸಿದರು. ಆದರೆ ಆ ದುರ್ಘಟನೆಗೆ ಕಾರಣವಾದ ರಾಮ ಜನ್ಮಭೂಮಿ ಚಳವಳಿಯ ನೇತಾರರಲ್ಲಿ ಅಡ್ವಾನಿ ಪ್ರಮುಖ ಸ್ಥಾನದಲ್ಲಿದ್ದರು. ಆ ಚಳವಳಿಯ ಅಂಗವಾಗಿ ನಡೆದ 'ರಥಯಾತ್ರೆ' ಎಂಬ ಧರ್ಮದ ಫ್ಯಾನ್ಸಿ ಡ್ರೆಸ್ ತೊಡಿಸಿದ ರಾಜಕೀಯ ಕಾರ್ಯಕ್ರಮವನ್ನು ಅವರೇ ಮುನ್ನಡೆಸಿದ್ದರು. ದೇಶಾದ್ಯಂತ ರಥಯಾತ್ರೆ ಸಾಗಿದ ಹೆಚ್ಚಿನ ಊರುಗಳಲ್ಲಿ ಮುಸ್ಲಿಮ್ ಸಮುದಾಯದ ಮೇಲೆ ಭಾರೀ ಪ್ರಮಾಣದ ಹಿಂಸಾಚಾರ ನಡೆಯಿತು. ಬಾಬರಿ ಮಸೀದಿ ಧ್ವಂಸಗೊಂಡ ದಿನ, ಸಂಜೆಯ ಹೊತ್ತಿಗೆ ಮುಂಬಯಿಯಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಹಿಂಸೆ ಪ್ರಾರಂಭವಾಯಿತು. ಬಿಜೆಪಿ ಹಾಗೂ ಶಿವಸೇನಾ ಪಕ್ಷಗಳವರು ಸಕ್ರಿಯವಾಗಿ ಪಾಲ್ಗೊಂಡಿದ್ದ ಈ ಹಿಂಸೆಯ ಸರಣಿ 1993ರ ಜನವರಿ ತಿಂಗಳಲ್ಲೂ ಮುಂದುವರಿದು ಹತ್ತಿರ ಹತ್ತಿರ 800 ಜನ ಮುಸ್ಲಿಮರು ಪ್ರಾಣ ಕಳೆದುಕೊಂಡರು. 1992-1993ರ ಮುಂಬಯಿ ಹಿಂಸಾಕಾಂಡದ ಹಾಗೆ ಗುಜರಾತ್ 2002ರ ನರಮೇಧ ಕೂಡ ರಾಮ ಜನ್ಮಭೂಮಿಯ ಚಳವಳಿಯದ್ದೇ ಕೊಡುಗೆಯಾಗಿದೆ.

2002ರ ಮಾರ್ಚ್ ತಿಂಗಳ ಕೊನೆಯ ವಾರ ಗೋದ್ರಾ ಸಿಲ್ದಾಣದಲ್ಲಿ ಬೆಂಕಿ ಹಿಡಿದ ಸಾಬರ್‌ಮತಿ ಎಕ್ಸ್‌ಪ್ರೆಸ್ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದವರು ಅಯೋಧ್ಯೆಯಲ್ಲಿ ಒಂದು ಧಾರ್ಮಿಕ ಆಚರಣೆ ಮುಗಿಸಿ ತಮ್ಮ ಮನೆಗಳಿಗೆ ವಾಪಾಸಾಗುತ್ತಿದ್ದ ಕರಸೇವಕರು. ಬಾಬರಿ ಮಸೀದಿ ಧ್ವಂಸಕ್ಕೆ ಕಾರಣವಾದ ರಾಮ ಜನ್ಮಭೂಮಿ ಚಳವಳಿ ದೇಶದಲ್ಲಿ ಮುಸ್ಲಿಮ್ ಸಮುದಾಯದ ವಿರುದ್ಧ ಅಪಪ್ರಚಾರ, ದ್ವೇಷ ಮತ್ತು ಹಿಂಸೆಗಳ ಒಂದು ಹೊಸ ಅಧ್ಯಾಯವನ್ನೇ ತೆರೆಯಿತು. ಮೊದಲ ಬಾರಿಗೆ ಕೋಮುವಾದ, ಜಾತಿ, ವರ್ಗಗಳನ್ನು ಮೀರಿ, ಹಳ್ಳಿ ಪಟ್ಟಣವೆಂಬ ಬೇಧವೆಣಿಸದೆ ಎಲ್ಲೆಡೆ ವ್ಯಾಪಿಸಿತು.

ಬಾಬರಿ ಮಸೀದಿ ಧ್ವಂಸ ಮುಸ್ಲಿಮರನ್ನು ಬಹುಸಂಖ್ಯಾತರಿಂದ ಪ್ರತ್ಯೇಕಿಸುವ ಕೋಮುವಾದಿ ರಾಜಕೀಯ ಪ್ರಕ್ರಿಯೆಯ ಭಾಗವಾಗಿ ಸಂಭವಿಸಿದ ಘಟನೆಯೇ ಹೊರತು ಅದರಷ್ಟಕ್ಕೆ ಅದು ಆಕಸ್ಮಿಕವಾಗಿ ಸಂಭವಿಸಿದ ಬಿಡಿ ಘಟನೆ ಅಲ್ಲ. ಪೇಜಾವರ ಶ್ರೀಗಳು ಅಥವಾ ಎಲ್.ಕೆ. ಅಡ್ವಾನಿ, ಮಸೀದಿಯನ್ನು ಉರುಳಿಸುವ ಕಾರ್ಯಾಚರಣೆಯಲ್ಲಿ ನೇರವಾಗಿ ಪಾಲುಗೊಂಡಿದ್ದರು ಎಂಬುದು ಯಾರ ಆಪಾದನೆಯೂ ಅಲ್ಲ. ಘಟನೆಗೆ ಅವರು ಕಾರಣರು ಎಂಬುದನ್ನು ಸಹ ಕಾನೂನು ರೀತ್ಯ ನ್ಯಾಯಾಲಯದಲ್ಲಿ ಸಾಬೀತುಪಡಿಸಲು ಸಾಧ್ಯವಿಲ್ಲ. ಈ



ಪ್ರಕರಣದ ನ್ಯಾಯಾಂಗ ತನಿಖೆ ನಡೆಸಲೆಂದೇ ನೇಮಕವಾಗಿದ್ದ ನ್ಯಾಯಮೂರ್ತಿ ಲಿಬರ್‌ಹಾನ್ಸ್ ನೇತೃತ್ವದ ವಿಚಾರಣಾ ಸಮಿತಿ 20 ವರ್ಷಗಳಷ್ಟು ಸುದೀರ್ಘ ಕಾಲ ಈ ಕುರಿತು ವಿಚಾರಣೆ ನಡೆಸಿದ ನಂತರವೂ ಘಟನೆಗೆ ಕಾರಣರಾದ ಯಾರನ್ನೂ ಹೆಸರಿಸಲಿಲ್ಲ. ಸಾವಿರಾರು ಜನರ ಎದುರು ಹಾಡು ಹಗಲು ಬಾಬರಿ ಮಸೀದಿಯನ್ನು ಕೆಡವಲಾಗಿದ್ದರೂ ಕಾನೂನುರೀತ್ಯ ಯಾರೂ ಅದಕ್ಕೆ ವೈಯಕ್ತಿಕವಾಗಿ ಕಾರಣರಲ್ಲ ಎಂದು ಪ್ರಭುತ್ವವೇ ಅಧಿಕೃತವಾಗಿ ಸಾರಿ ಪ್ರಕರಣವನ್ನು ಕ್ಲೋಸ್ ಮಾಡಿಬಿಟ್ಟಿದೆ. ಹಾಗಾಗಿ ಈ ವಿಷಯದಲ್ಲಿ ಪೇಜಾವರ ಶ್ರೀಗಳು ಮತ್ತು ಎಲ್.ಕೆ. ಅಡ್ವಾನಿಯವರನ್ನು ಒಳಗೊಂಡಂತೆ ಯಾರ ವೈಯಕ್ತಿಕ ಹೊಣೆಗಾರಿಕೆಯ ಬಗ್ಗೆಯೂ ಆಪಾದಿಸುವಂತಿಲ್ಲ. ಆದರೆ 1992 ಡಿಸೆಂಬರ್ 6ರ ದುರ್ಘಟನೆ ಮತ್ತು ಅದು ಹುಟ್ಟುಹಾಕಿದ ಕೋಮು ಹಿಂಸೆಗಳಿಗೆ ಪೇಜಾವರ ಶ್ರೀಗಳು, ಎಲ್.ಕೆ. ಅಡ್ವಾನಿ, ಹಾಗೂ ಸಂಘಪರಿವಾರದ ಸಮಸ್ತರೂ ನೈತಿಕವಾಗಿ ಖಂಡಿತ ಉತ್ತರದಾಯಿಗಳು.

ತಮ್ಮ ಪತ್ರಿಕಾ ಸಂದರ್ಶನದಲ್ಲಿ ಮಠ ದೇವಸ್ಥಾನಗಳ ಪಂಕ್ತಿಭೇದದ ಕುರಿತು ಹೇಳುತ್ತ..."ಕಟ್ಟಾ ವೈದಿಕರಾಗಿರುವವರು ಸಹಪಂಕ್ತಿಯನ್ನು ಇಷ್ಟ ಪಡುವುದಿಲ್ಲ, ಮದ್ಯಮಾಂಸ ತಿನ್ನುವವರೊಂದಿಗೆ ಕುಳಿತು ಊಟ ಮಾಡುವುದನ್ನು ಅವರು ಇಷ್ಟ ಪಡುವುದಿಲ್ಲ. ಪಂಕ್ತಿ ಭೇದ ನಿಲ್ಲಿಸಿದರೆ ಅವರು ಊಟ ಮಾಡದೇ ತೆರಳುತ್ತಾರೆ. ಅದರಿಂದ ಏನೂ ಸಾಧನೆ ಮಾಡಿದಂತಾಗುವುದಿಲ್ಲ. ಆದುದರಿಂದ ಸಾಂಪ್ರದಾಯಿಕ ಪಂಕ್ತಿ ಹಾಗೂ ಸಾರ್ವಜನಿಕ ಪಂಕ್ತಿ ಎರಡನ್ನೂ ನಮ್ಮ ಪರ್ಯಾಯ ಅವಧಿಯಲ್ಲಿ ಮುಂದುವರಿಸುತ್ತೇವೆ. ಕೃಷ್ಣ ಮಠದಲ್ಲಿ ಹಿಂದೆ ಸಾರ್ವಜನಿಕ ಪಂಕ್ತಿ ಇರಲಿಲ್ಲ, ಈಗ ಇದೆ" ಎಂದು ಪೇಜಾವರ ಶ್ರೀಗಳು ತಿಳಿಸಿದ್ದಾರೆ. ಅವರ ಮಾತಿನಲ್ಲಿ "ಅಕ್ಕಿ ಮೇಲಾಸೆ, ನೆಂಟರ ಮೇಲೆ ಪ್ರೀತಿ" ಎಂಬ ತರಹದ ವಿರೋಧಾಭಾಸವಿದೆ. ಊಟದಲ್ಲಿ ಪಂಕ್ತಿಭೇದ ಸಂಕೇತಿಸುವ ಜಾತಿ ತಾರತಮ್ಯವನ್ನು ಅವರು ಬಿಟ್ಟು ಕೊಡಲಾರರು. ಹಾಗೆಂದು ಅದರ ಬಗ್ಗೆ ಅವರಿಗೆ ಒಪ್ಪಿಗೆಯೂ ಇಲ್ಲ.

ಕಟ್ಟಾ ವೈದಿಕರು ಮದ್ಯಮಾಂಸ ತಿನ್ನುವವರೊಂದಿಗೆ ಕುಳಿತು ಊಟ ಮಾಡುವುದನ್ನು ಇಷ್ಟಪಡುವುದಿಲ್ಲ ಎಂಬ ಶ್ರೀಗಳ ವಿವರಣೆ ಕೂಡ ಪ್ರಶ್ನಾರ್ಹವಾಗಿದೆ. ವಾಸ್ತವವಾಗಿ ಕಟ್ಟಾ ವೈದಿಕರು ಮದ್ಯಮಾಂಸ ತಿನ್ನುವವರು ಮಾತ್ರವಲ್ಲ ನೀರುಳ್ಳಿ, ಬೆಳ್ಳುಳ್ಳಿ ತಿನ್ನುವವರನ್ನು ಕೂಡ ಸಹಿಸುವುದಿಲ್ಲ. ಮನೆಯಲ್ಲಿ ಮದ್ಯಮಾಂಸ ತಿನ್ನುವ ಯಾರೂ ಭಕ್ತರಾಗಿ ಕೃಷ್ಣಮಠಕ್ಕೆ ಬಂದು ನಮಗೆ ಅವನ್ನೇ ಪ್ರಸಾದವಾಗಿ ಬಡಿಸಿ ಎಂದು ಒತ್ತಾಯಿಸುವುದಿಲ್ಲ. ಕಟ್ಟಾ ವೈದಿಕರ ಅಸಹಿಷ್ಣುತೆಯ ಮೆಳ್ಳೆಗಣ್ಣಿಗೆ, ಮದ್ಯ ಸೇವನೆ ಭಾರತದ ಹಲವು ಶೂದ್ರ ಸಮುದಾಯಗಳ ಧಾರ್ಮಿಕ ಆಚರಣೆಯ ಭಾಗವಾಗಿದೆ ಎಂಬುದು ಸಹ ಕಾಣಿಸುವುದಿಲ್ಲ. ಈ ಕಟ್ಟಾ ವೈದಿಕರು ಸಸ್ಯಾಹಾರ ಸಾತ್ವಿಕ, ಮಾಂಸಾಹಾರ ತಾಮಸ ಎಂಬ ಹಸಿ ಸುಳ್ಳನ್ನು ಪರಮ ಸತ್ಯ ಎಂದೇ ನಂಬಿರುವ ಮೂರ್ಖರು. ಪೇಜಾವರ ಶ್ರೀಗಳು ಕಟ್ಟಾ ವೈದಿಕರಿಗಾಗಿ ಒಂದು ಪಂಕ್ತಿ ಸಾರ್ವಜನಿಕರಿಗೆ ಇನ್ನೊಂದು ಪಂಕ್ತಿ ಎಂದು ಪಂಕ್ತಿಭೇದವನ್ನು ಸಮರ್ಥಿಸುತ್ತಾರೆ. ಅವರ ಮಾತು ಶ್ರೀ ಕೃಷ್ಣ ಮಠದಲ್ಲಿ ಊಟದ ಪಂಕ್ತಿಯ ಮಟ್ಟಿಗೆ 'ಎಲ್ಲರೂ ಸಮಾನರು, ಆದರೆ ಕೆಲವರು ಹೆಚ್ಚು ಸಮಾನರು'! ಎಂದ ಹಾಗಿದೆ. ಈ ತಾರತಮ್ಯ ಸಂವಿಧಾನ ವಿರೋಧಿಯಾಗಿದ್ದು ಶಾಲೆ, ಆಸ್ಪತ್ರೆ, ಪೋಸ್ಟ್ ಆಫೀಸು ಮತ್ತು ಕಚೇರಿಗಳಲ್ಲಿ ಸಲ್ಲದ ಭೇದ ದೇವಾಲಯಗಳಲ್ಲಿ ಮುಂದುವರಿಯುವುದು ಯುಕ್ತವೇ? ದೇವಾಲಯ ಕೂಡ ಒಂದು ಸಾರ್ವಜನಿಕ ಸ್ಥಳವಲ್ಲವೇ?

ಪೇಜಾವರ ಶ್ರೀಗಳ 5ನೆಯ ಪರ್ಯಾಯ ಸಮಾರಂಭ ಇದೇ ಜನವರಿ 18ರಂದು ವಿಜೃಂಭಣೆಯಿಂದ ನಡೆಯಿತು. ಕರ್ನಾಟಕದ ಹಲವು ಮಾಧ್ವ ಮಠಗಳ ವಿಭಿನ್ನ ಸಂಪ್ರದಾಯಗಳಲ್ಲಿ ಉಡುಪಿಯ ಎಂಟು ಮಠಗಳದ್ದೂ ಒಂದು ಸಂಪ್ರದಾಯ. ಉಡುಪಿಯ ಮಾಧ್ವ ಮಠಗಳು ಸರದಿಯಲ್ಲಿ ಕೃಷ್ಣ ಮಠದ ಪೂಜೆಯನ್ನು ಎರಡು ವರ್ಷದ ಅವಧಿಗೆ ವಿದ್ಯುಕ್ತವಾಗಿ ವಹಿಸಿಕೊಳ್ಳುವುದೇ ಪರ್ಯಾಯ. ಅದನ್ನು ಜನಸಾಮಾನ್ಯರು ಪಾಲ್ಗೊಳ್ಳುವ ಹಬ್ಬದ ಮಟ್ಟಕ್ಕೆ ಏರಿಸಿದವರು ಪೇಜಾವರ ಶ್ರೀಗಳು. ಈ ಬಾರಿಯ ಪರ್ಯಾಯದಲ್ಲಿ ಊರಿನ ಕ್ರೈಸ್ತರು ಮತ್ತು ಮುಸ್ಲಿಮರು ಸಹ ಪ್ರಾತಿನಿಧಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಪರ್ಯಾಯ ಸಮಾರಂಭ ನಡೆದ ಸಭಾಂಗಣದ ಹಿತಮಿತವಾದ ಬೆಳಕಿನ ವ್ಯವಸ್ಥೆ ಅಬ್ಬರವಿಲ್ಲದ ಅಲಂಕಾರ, ಸದಭಿರುಚಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಅವುಗಳಲ್ಲಿ ಸಾರ್ವಜನಿಕರು ಭಾರೀ ಸಂಖ್ಯೆಯಲ್ಲಿ ಪಾಲುಗೊಂಡದ್ದು- ಇವು ಈ ಬಾರಿಯ ಪರ್ಯಾಯವನ್ನು ಸಾರ್ವತ್ರಿಕ ಸಂಭ್ರಮವನ್ನಾಗಿಸಿದವು.

ಆದರೆ ಉಡುಪಿಯ ಜನ ಸಂಸ್ಕೃತಿಗೆ ಇರುವುದು ಇದೊಂದೇ ಮುಖವಲ್ಲ. ಇದೇ ಜನವರಿ 3 ರಂದು ಉಡುಪಿಗೆ ಸಮೀಪದ ಹಿರಿಯಡ್ಕದಲ್ಲಿ ನಡೆದ ಹಿಂದು ಸಮಾಜೋತ್ಸವ ಉಡುಪಿಯ ಸಂಸ್ಕೃತಿಯ ಇನ್ನೊಂದು ಮುಖವನ್ನು ಅನಾವರಣಗೊಳಿಸಿತು. ಹಿಂದೂ ಸಮಾಜೋತ್ಸವ ಆಚರಣೆ ರಾಮ ಜನ್ಮಭೂಮಿ ಚಳವಳಿಯ ನಂತರದ ಒಂದು ಬೆಳವಣಿಗೆ. ಬಹುಸಂಖ್ಯಾತ ಪ್ರಜೆಗಳನ್ನು ಹಿಂದೂ ಎಂಬ ನೆಲೆಯಲ್ಲಿ ಒಂದುಗೂಡಿಸುವ ಹಿಂದೂ ಸಮಾಜೋತ್ಸವ ಕರಾವಳಿಯ ನಗರಗಳು ಮಾತ್ರವಲ್ಲ ಸಣ್ಣ ಸಣ್ಣ ಊರುಗಳಲ್ಲೂ ನಡೆದಿದೆ. ಪ್ರವೀಣ್ ತೊಗಾಡಿಯಾರಂತಹ ಹಿಂದುತ್ವ ಚಳವಳಿ ನಾಯಕರ ಜೊತೆ ಮಠಾಧಿಪತಿಗಳು, ಸಾಧ್ವಿಗಳು, ಸ್ಥಳೀಯ ದೇವಾಲಯಗಳ ಮುಖ್ಯಸ್ಥರು, ಸಾಮಾಜಿಕ ಶೈಕ್ಷಣಿಕ ಮುಂದಾಳುಗಳು ಮುಂತಾದವರೆಲ್ಲ ಭಾಗವಹಿಸುವ ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಹಿಂದೂಯೇತರರನ್ನು ಅನ್ಯಮತೀಯ ಎಂದು ಗುರುತಿಸಿ ಅವರ ಬಗ್ಗೆ ಅಪನಂಬಿಕೆ ಬೆಳೆಸುವುದು.

ವಿಹಿಂಪ ಮತ್ತು ಸಂಘ ಪರಿವಾರದ ಇತರ ಸಂಘಟನೆಗಳ ಉಸ್ತುವಾರಿಯಲ್ಲಿ ಜರುಗುವ ಈ ಕಾರ್ಯಕ್ರಮಕ್ಕೆ ಪೇಜಾವರ ಶ್ರೀಗಳ ಸಂಪೂರ್ಣ ಬೆಂಬಲವಿದೆ. ಕೆಲವೆಡೆ ಸ್ವತಃ ಅವರೇ ಅದರಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದಾರೆ. ಮೊನ್ನೆ ಉಡುಪಿ ಪರ್ಯಾಯಕ್ಕೆ ಹದಿನೈದು ದಿನಗಳ ಮೊದಲು ಹಿರಿಯಡ್ಕದಲ್ಲಿ ನಡೆದ ಹಿಂದೂ ಸಮಾಜೋತ್ಸವ ಈ ಸರಣಿಯಲ್ಲಿ ಇತ್ತೀಚೆಗಿನದ್ದು. ಉಡುಪಿ ಕಾರ್ಕಳ ಹೆದ್ದಾರಿಯಲ್ಲಿ ಮಣಿಪಾಲದ ನಂತರ ಸಿಗುವ ಹಿರಿಯಡ್ಕ ಉಡುಪಿಯದ್ದೇ ಒಂದು ಬಡಾವಣೆ ಎಂಬಂತಿದೆ. ಅಲ್ಲಿನ ವೀರಭದ್ರ ದೇವಾಲಯ ಪ್ರಾಚೀನವಾದದ್ದು. ಆ ದೇವಾಲಯಕ್ಕೆ ಭಕ್ತಿಯಿಂದ ನಡೆದುಕೊಳ್ಳುವವರಲ್ಲಿ ಹೆಚ್ಚಿನವರು ಈ ಪರಿಸರದ ಅವೈದಿಕ ಸಮುದಾಯಗಳವರು. ಪ್ರತಿವರ್ಷ ಚೈತ್ರ ಮಾಸದ ಹುಣ್ಣಿಮೆಯಂದು ಕ್ಷೇತ್ರದಲ್ಲಿ ನಡೆಯುವ ಸಿರಿಜಾತ್ರೆ ಎಂಬ ಜಾನಪದೀಯ ಧಾರ್ಮಿಕ ಆಚರಣೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುತ್ತಾರೆ. ಬಹುತೇಕ ಅವರೆಲ್ಲರೂ ಕೆಳಜಾತಿ ವರ್ಗಗಳವರು. ಸಿರಿ ಹುಣ್ಣಿಮೆಯ ರಾತ್ರಿ ಅವರಲ್ಲಿ ಕೆಲವರು ದೈವ ಮೈಮೇಲೆ ಬಂದು ಆವೇಶದಲ್ಲಿ ಮನಬಂದಂತೆ ವರ್ತಿಸುವುದುಂಟು.

ಇದೇ ಜನವರಿ 3ರಂದು ಹಿರಿಯಡ್ಕದಲ್ಲಿ ನಡೆದ ಹಿಂದೂ ಸಮಾಜೋತ್ಸವದಲ್ಲಿ ಭಾರೀ ಸಂಖ್ಯೆಯಲ್ಲಿ ಜನ ಭಾಗವಹಿಸಿದ್ದರೂ, ಆ ಕಾರ್ಯಕ್ರಮಕ್ಕೆ ಸಿರಿಜಾತ್ರೆಯ ಯಾವ ಜಾನಪದೀಯ ಗುಣವೂ ಇರಲಿಲ್ಲ; ಸಿರಿಜಾತ್ರೆ ಸಂಕೇತಿಸುವ ವಿಮೋಚನೆಯ ಒಂದು ಕಿರು ಸಾಧ್ಯತೆಯೂ ಅದರಲ್ಲಿ ಇರಲಿಲ್ಲ. ಸಮಾಜೋತ್ಸವದಲ್ಲಿ ಭಾಗವಹಿಸಿದ್ದ ನಾಲ್ಕು ಸಾವಿರಕ್ಕೂ ಜಾಸ್ತಿ ಜನರಲ್ಲಿ ಮಹಿಳೆಯರು ಗಣನೀಯ ಸಂಖ್ಯೆಯಲ್ಲಿದ್ದರು. ಸಭೆಯನ್ನು ಉದ್ದೇಶಿಸಿ ಮೊದಲು ಮಾತನಾಡಿದ ಉಡುಪಿಯ ವಕೀಲ ಮತ್ತು ವಿಹಿಂಪದ ಉಡುಪಿ ಜಿಲ್ಲಾಧ್ಯಕ್ಷ ಬೈಕಾಡಿ ಸುಪ್ರಸಾದ ಶೆಟ್ಟಿ, ಸೆಕ್ಯುಲರ್ ಬುದ್ಧಿಜೀವಿಗಳನ್ನು ನಿಂದಿಸುತ್ತ "ಅನಂತಮೂರ್ತಿ ದೇವರಮೂರ್ತಿಗೆ ಉಚ್ಚೆ ಹೊಯ್ದದ್ದಕ್ಕೆ ದೇವರು ಅವರಿಗೆ ಸರಿಯಾದ ಶಿಕ್ಷೆಯನ್ನೇ ಕೊಟ್ಟರು. ಮೂತ್ರಪಿಂಡದ ವೈಫಲ್ಯದಿಂದ ಅವರು ಸತ್ತರು" ಎಂದು ಹೇಳಿದರು. ನೆರೆದಿದ್ದ ಜನ ಚಪ್ಪಾಳೆ ಹೊಡೆದು ಆ ಮಾತನ್ನು ಅನುಮೋದಿಸಿದರು. ಆ ನಂತರ ಅವರು ತನ್ನ ಮಾತಿನಲ್ಲಿ ಎರಗಿದ್ದು ಗಿರೀಶ ಕಾರ್ನಾಡರ ಮೇಲೆ. ಅವರನ್ನು ಒಂದಷ್ಟು ಬೈದಾದ ನಂತರ ಸುಪ್ರಸಾದ ಶೆಟ್ಟಿ "ಕಾರ್ನಾಡರ ನಾಟಕವನ್ನು ಉಡುಪಿಯಲ್ಲಿ ಆಡಲು ನಾವು ಹಿಂದೆಯೂ ಬಿಟ್ಟಿರಲಿಲ್ಲ, ಇನ್ನೂ ಮುಂದೆಯೂ ಬಿಡುವುದಿಲ್ಲ" ಎಂದು ಧಮಕಿ ಹಾಕಿದರು. (ಕಳೆದ ವರ್ಷ ಕಾರ್ನಾಡರ 'ನಾಗಮಂಡಲ'ದ ತುಳು ಆವೃತ್ತಿಯ ಪ್ರದರ್ಶನವನ್ನು ಕೊನೆಯ ಕ್ಷಣದಲ್ಲಿ ಬಲಾತ್ಕಾರದಿಂದ ರದ್ದುಪಡಿಸಲಾಗಿತ್ತು). ಸುಪ್ರಸಾದ ಶೆಟ್ಟಿಯವರ ಪೌರುಷದ ಈ ಮಾತಿಗೂ ಜನ ಚಪ್ಪಾಳೆ ತಟ್ಟಿ ಬೆಂಬಲ ಸೂಚಿಸಿದರು.


ಅನಂತರ ಮಾತನಾಡಿದವರು ದಕ್ಷಿಣ ಕನ್ನಡ ಜಿಲ್ಲಾ ಬಜರಂಗದಳ ಸಂಚಾಲಕ ಶರಣ್ ಪಂಪ್‌ವೆಲ್. ಇವರದ್ದು ಸುಪ್ರಸಾದ ಶೆಟ್ಟಿಯವರಗಿಂತ ಹೆಚ್ಚು ನೇರ ಮತ್ತು ಖಡಕ್ ಮಾತು. ಶರಣ್ ಪಂಪ್‌ವೆಲ್ ತನ್ನ ಕಿರು ಭಾಷಣದಲ್ಲಿ ಕೆಲವು ತಿಂಗಳ ಕೆಳಗೆ ಮಂಗಳೂರಿನಲ್ಲಿ ನಡೆದ ಒಂದು ಘಟನೆಯನ್ನು ಸೂಚ್ಯವಾಗಿ ಪ್ರಸ್ತಾಪಿಸಿದರು. ಕಳೆದ ವರ್ಷ ಆಗಸ್ಟ್ 24ರ ಸಂಜೆ, ಮಂಗಳೂರಿನ ಜನ ನಿಬಿಡ ರಸ್ತೆಯೊಂದರಲ್ಲಿ ಲೈಟು ಕಂಬಕ್ಕೆ ಶಕೀರ್ ಎಂಬವರನ್ನು ಕಟ್ಟಿ ಅವರನ್ನು ಖಾಲಿ ಒಳಚಡ್ಡಿಯಲ್ಲಿ ನಿಲ್ಲಿಸಿ ಸುಮಾರು 20 ಜನ ಯುವಕರು ಸಮಾ ಹೊಡೆದಿದ್ದರು. ಸಿನಿಮಾ ನೋಡುವ ಹಾಗೆ ಆ ದೃಶ್ಯವನ್ನು ದಾರಿಹೋಕರು ನಿಂತು ನೋಡಿದರು. ಕೆಲವರು ತಮ್ಮ ಮೊಬೈಲುಗಳಲ್ಲಿ ಅದನ್ನು ಚಿತ್ರೀಕರಿಸಿಕೊಂಡರು. ಪೆಟ್ಟು ತಿಂದ ಶಕೀರ್ ನೆರವಿಗೆ ಯಾರೂ ಬರಲಿಲ್ಲ. ಶಕೀರ್ ಅಲ್ಲೇ ಸಮೀಪವಿರುವ ಒಂದು ಮಾಲ್‌ನಲ್ಲಿ ಉದ್ಯೋಗ ಮಾಡಿಕೊಂಡಿದ್ದು ಆವತ್ತು ಸಂಜೆ, ತನ್ನ ಸಹೋದ್ಯೋಗಿಯಾಗಿದ್ದ ಹಿಂದೂ ಯುವತಿ ಒಬ್ಬರ ಜೊತೆ ಮಾತಾಡುತ್ತಿದ್ದರು. ಮಂಗಳೂರಿನಲ್ಲಿ ಹೀಗೆ ಮಾಡುವುದು ಘೋರ ಅಪರಾಧ! ಶಕೀರ್ ಹಿಂದೂ ಯುವತಿಯ ಜೊತೆ ರಸ್ತೆಯಲ್ಲಿ ನಿಂತು ಮಾತಾಡಿದ್ದು ಯಾವ ಆ್ಯಂಗಲ್‌ನಿಂದ ನೋಡಿದರೂ ಲವ್‌ಜಿಹಾದ್‌ನಂತೆ ಕಾಣುತ್ತದೆ! ಶರಣ್ ಪಂಪ್‌ವೆಲ್ ತನ್ನ ಭಾಷಣದಲ್ಲಿ "ಹಿಂದೂ ಹುಡುಗಿಯರ ತಂಟೆಗೆ ಬಂದರೆ ಮುಂದೆಯೂ ಮುಸ್ಲಿಮರನ್ನು ಕಂಬಕ್ಕೆ ಕಟ್ಟಿ ಹೊಡೆಯುತ್ತೇವೆ" ಎಂದು ಥ್ರೆಟ್ ಕೊಟ್ಟರು! ಇದಕ್ಕೂ ಸಭಿಕರು ಸಿಳ್ಳು

⏭ 07

...ದ್ದು ಪತ್ನಿಗೆ ಸೀರೆ ಕೊಡಿಸಿದರೆ ಚೆಡ್ಡಿಗಳಿಗೇನು?

ಥೂತ್ತೇರಿ

ಯಾಹೂ



ಐಎಸ್, ಅಲ್‌ಕೈದಾ ಇತ್ಯಾದಿ ಸಂಘಟನೆಗಳೊಂದಿಗೆ ...ವಾದ ನಡೆಸುತ್ತಿದ್ದ ಶಂಕಿತ ಉಗ್ರರು ಎನ್‌ಐಎ ಬಲೆಗೆ ...ಬಿದ್ದಿದ್ದಾರೆ. ಸಾಮಾನ್ಯವಾಗಿ ಶಂಕಿತ ಉಗ್ರರಿಗೆ ಬಲೆ ...ದ್ದಿಕೊಂಡ ಬೇಹುಗಾರಿಕೆ ಪಡೆ ಸೂಕ್ತ ಸಂದರ್ಭದಲ್ಲಿ ...ಂಧಿಸಲು ಕಾಯುತ್ತೆ, ಕಡೆಗೆ ಬಂಧಿಸುತ್ತೆ. ಆದರೆ ಭಾರತ ...ಲ್ಲಿ ಬಂಧನವಾಗಿರುವುದು ಬಿಜೆಪಿಗಳ ಮನೋವ್ಯಾಪಾರ ...ನ್ನರಿತವರಿಗೆ ಶ್ಯಾನೆ ಅನುಮಾನ ಮೂಡಿಸಿದೆ. ಏಕೆಂದರೆ ...ದರಾಬಾದ್‌ನ ಕೇಂದ್ರೀಯ ವಿವಿಯಲ್ಲಿ ಚೆಡ್ಡಿಗಳ ...ರೂರಿಗೆ ಬಲಿಬಿದ್ದು ಆತ್ಮಹತ್ಯೆ ಮಾಡಿಕೊಂಡ ರೋಹಿತ್‌ನ ...ಟನೆ ದೇಶವ್ಯಾಪಿ ಪ್ರತಿಭಟನೆಯುಂಟುಮಾಡಿ, ಎಬಿವಿಪಿ ...ರುದ್ಧ ವಿದ್ಯಾರ್ಥಿಗಳು ಭುಗಿಲೇಳುತ್ತಿರುವ ಸಮಯಕ್ಕೆ ...ರಿಯಾಗಿ ನಡೆದಿದೆಯಲ್ಲ. ದೇಶವಾಸಿಗಳ ಗಮನ ಬೇರೆಡೆ ...ಸೆಯಲು ಎನ್‌ಐಎ ಕಾರ್ಯಾಚರಣೆಯನ್ನ ಮೋದಿ ...ಕಾಲಂ ಏಕೆ ತುರ್ತಾಗಿ ನಡೆಸಿರಬಾರದು ಎಂಬ ...ನುಮಾನವೊಂದು ಸಭ್ಯ ನಾಗರಿಕರ ಮನಸ್ಸಿನಲ್ಲಿ ಹರಿದಾಡು...ದೆಯಂತಲ್ಲಾ. ಏಕೆಂದರೆ ಈ ದೇಶದಲ್ಲಿ ಏನೇ ಸಂಭವಿಸಿ...ರೂ ಕೂಡ ಆ ಕಾರ್ಯಾಚರಣೆಯ ಸಂದೇಶ ಚೆಡ್ಡಿಗಳ ...ರಾಸ್ಥಾನದಿಂದಲೇ ಹೊರಡುತ್ತಿರುವುದರಿಂದ ಮತ್ತು ...ಜೆಪಿಗಳು ಯಾವತ್ತಿಗೂ ನಂಬಲು ಯೋಗ್ಯರಲ್ಲದ ರಾಜಕಾ...ರಣಿಗಳಾದ್ದರಿಂದ ಉಗ್ರರ ಕೃತ್ಯಗಳು ಸುಳ್ಳಾಗಿ, ಬಂಧನದ ...ತ್ಯಂತ್ರವೂ ಸುಳ್ಳಾಗಿ ಹೊರಹೊಮ್ಮಿದರೆ ಅದಕ್ಕಿಂತ ...ಮಾಧಾನದ ಸಂಗತಿ ಇನ್ನಾವುದಿದೆಯಲ್ಲವೇ, ಥೂತ್ತೇರಿ!

* * *

ಸದ್ಯದ ಭಾರತದಲ್ಲಿ ಇಡೀ ದೇಶವನ್ನು ನಿಧಾನಕ್ಕೆ ...ಂಗಿ, ಅದಕ್ಕೊಂದು ಕೊಳೆತ ಜನಿವಾರ ತೊಡಿಸುವ ...ನ್ನಾರ ಪುರೋಹಿತಶಾಹಿಗಳ ಪಡಖಾನೆಯಲ್ಲಿ ...ತೆಯುತ್ತಿದೆ. ಇಂತಹ ಆಲೋಚನೆಯನ್ನೇ ಉಡಾಯಿಸಲು ...ಮುಸ್ಲಿಂ ಭಯೋತ್ಪಾದಕರ ಸಂಘಟನೆಯೂ ತಯಾರಿ ...ಡೆಸಿದೆ. ಈ ತರದ ಸಂಘಟನೆಯ ಆಕ್ರಮಣವನ್ನು ...ಡೆಯಲು ಬಿಜೆಪಿಯಲ್ಲೂ ತರಬೇತಿ ನಡೆಯುತ್ತಲಿದೆ. ...ತರಬೇತಿಗೆ ಅರಿಶಿಣಕುಂಕುಮ ಶೋಭಿತೆಯರಾದ ...ಜೆಪಿ ಮಹಿಳೆಯರು ಮುಂದೆ ನಿಂತು ಮಕ್ಕಳಿಗೆ ...ಲ್ಲುಬಾಣ ಪ್ರಯೋಗ, ಕತ್ತಿವರಸೆ, ಲಾಠಿವರಸೆ, ದೃಷ್ಟಿಯುದ್ಧ ...ಡಿ ಮರ ಏರುವುದು, ನೀರಲ್ಲಿ ಮುಳುಗುವ ...ನಾದಿಕಾಲದ ಯುದ್ಧ ಕಲೆಯನ್ನ ಕಲಿಸುತ್ತಿದ್ದಾರಂತಲ್ಲಾ. ...ದರಿ ವೀರವನಿತೆಯರ ಆ ಮಕ್ಕಳು ಪಡೆಯುತ್ತಿರುವ ...ರಬೇತಿಗೂ, ಮೈಗೆ ಬಾಂಬ್ ಕಟ್ಟಿಕೊಂಡು ಜನನಿಬಿಡ ...ಾಗದಲ್ಲಿ ಸ್ಫೋಟಿಸಿಕೊಳ್ಳುವ ಸಾಬರ ಸಾಹಸಕ್ಕೂ ...ನಾದರೂ ಸಂಬಂಧವಿದೆಯೇ ಎಂದು ಯೋಚಿಸಿ, ...ಡ್ಡಿಗಳನ್ನು ಕೇಳಿದರೆ, ಅದಕ್ಕೆ ಚೆಡ್ಡಿಗಳು "ಅದು ನಮಗೂ ...ತ್ತು. ಆದರೆ ನಮ್ಮ ನಡುವಿನ ಸಾಬರು ಅಪಾಯಕಾರಿ ...ಳು ಎಂಬ ಭಾವನೆಯನ್ನು ಎಲ್ಲ ಹಿಂದೂ ಮತಸ್ಥರಿಗೂ ...ಳಿಸಲು ಸಾರ್ವಜನಿಕವಾಗಿ ನಾವಿಂತಹ ತರಬೇತಿ ಕೊಡಿಸುತ್ತಿದ್ದೇವೆ" ಎಂದು ತಣ್ಣಗೆ ಹೇಳಿದರಂತಲ್ಲಾ, ಥೂತ್ತೇರಿ!!

* * *

ನೇತಾಜಿ ಸುಭಾಷ್ ಚಂದ್ರಬೋಸ್‌ರ ಬಗ್ಗೆ ಹಳ್ಳಿಗಳಲ್ಲಿ ಒಂದು ಕತೆಯಿದೆ. ಅವರನ್ನು ಹಿಡಿಯಲು ಬ್ರಿಟಿಷರು ಮನೆಗೆ ಮುತ್ತಿಗೆ ಹಾಕಿದರಂತೆ. ಆಗ ಬೋಸರು ಸೀರೆ ರವಿಕೆ ತೊಟ್ಟು ಮಾರ್ವಾಡಿ ಹೆಂಗಸಂತೆ ಮೇಲೊಂದು ಶಾಲು ಹೊದ್ದು ಆದರಿಂದಲೇ ಮುಖಮುಚ್ಚಿಕೊಂಡು ಚೊಂಬು ಹಿಡಿದುಹೊರಗೋದರಂತೆ. ಇಂಗ್ಲಿಷರು ಕೋತಿಗಳಂತೆ ಬಾಗಿಲಲ್ಲೇ ಕುಳಿತಿದ್ದರಂತೆ. ಹಾಗೆ ಹೋದ ಬೋಸರು ಇನ್ನೂ ಪತ್ತೆಯಿಲ್ಲವಂತೆ.

ಈ ಮುಗ್ಧ ಕತೆಗೆ ದನಿಗೂಡಿಸಿರುವ ಪುರಾಣಪ್ರಿಯರು "ಅವರಿನ್ನೂ ಬದುಕಿದ್ದಾರೆ. ಗಾಂಧಿ ಹತ್ಯೆಯಾದಾಗಲೂ ಇದ್ದರು. ನೆಹರು ತೀರಿಕೊಂಡಾಗಲೂ ಇದ್ದರು. ವಾಜಪೇಯಿ ಪ್ರಧಾನಿಯಾದುದನ್ನು ಕಣ್ತುಂಬ ನೋಡಿ ಹಿಮಾಲಯಕ್ಕೆ ಹೋದರು" ಎಂದು ಹೇಳುತ್ತಲೇ ಇವೆ. ಗಾಂಧಿ ಮಾರ್ಗದಿಂದ ಬೇಸತ್ತು ಹೋಗಿ ವಿಮಾನಾಪಘಾತದಲ್ಲಿ ತೀರಿಕೊಂಡ ಸುಭಾಷ್‌ಚಂದ್ರಬೋಸ್‌ರ ಸಾವಿನ ಪ್ರಕರಣದಲ್ಲಾದರೂ ಗಾಂಧಿ, ನೆಹರು ಕಟ್ಟಿದ ಕಾಂಗ್ರೆಸ್ಸಿನ ಮಾನ ಹರಾಜಾಕಲು ಕಾದಿದ್ದ ಬಿಜೆಪಿಗಳಿಗೆ ನಿರಾಶೆಯಾಗುವ ಸತ್ಯಸಂಗತಿ ಹೊರಬಿದ್ದಿದೆಯಲ್ಲ, ಥೂತ್ತೇರಿ!!

* * *

ಎಂದಿನಂತೆ ನಮ್ಮ ಚೆಡ್ಡಿ ಭೈರಣ್ಣ ಮತ್ತೊಂದು ಸುಳ್ಳನ್ನು ಬಿತ್ತರಿಸಿದ್ದಾನಲ್ಲಾ, ಈ ಲದ್ದಿಡಿದ ಲಾಠಿಯ ಹಳೆ ಚೆಡ್ಡಿಯ ಪ್ರಕಾರ ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು ಗಾಂಧೀಜಿಯ ಅಹಿಂಸೆಯಿಂದಲ್ಲವಂತೆ. ಹಾಗಾದರೆ ಯಾವುದರಿಂದ ಸಿಕ್ಕಿತು ಎಂದರೆ ಅದಕ್ಕಾಗಿ ಹೊಸ ಕತೆಗಳನ್ನೇ ಹೊಸೆಯುತ್ತಾರಂತಲ್ಲಾ, ಭೈರಣ್ಣನ ಪ್ರಕಾರ ಸುಭಾಷ್‌ಚಂದ್ರ ಬೋಸರ ಜೊತೆ ಬೇಕಾದಷ್ಟು ಜನರು ಹೋರಾಡಿದರಂತೆ. ಕಿಡಿಗೇಡಿತನದಿಂದ ಹೇಳುವುದಾದರೆ, ಅಂದು ಭಾರತದಾದ್ಯಂತ ಬಿದುರು ಮೆಳೆ ಸವರಿ, ಲಕ್ಷಾಂತರ ಲಾಠಿ ತಯಾರಿಸಿ, ಅವನ್ನೆಲ್ಲಾ ಲಾಠಿವೀರರಿಗೆ ಕೊಟ್ಟು, ಎಲ್ಲೆಂದರಲ್ಲಿ ಕವಾಯತು ಮಾಡುವಾಗ, ಹಿಂಸಾ ಪ್ರಚೋದನೆಯ ಆ ರುದ್ರಾವತಾರ ನೋಡಿದ ಬ್ರಿಟಿಷರು ಭಾರತ ಬಿಟ್ಟು ಓಡಿಹೋಗಿರಬೇಕು ಅಲ್ಲವೆ. ಸಾವಿರಾರು ಪುಟದ ತನ್ನ ರಾಷ್ಟ್ರೋತ್ಥಾನ ಸಾಹಿತ್ಯದಲ್ಲಿ ಗಾಂಧಿ ಬಗ್ಗೆ ಒಂದು ವಾಕ್ಯವನ್ನು ಬರೆಯದ ಭೈರಪ್ಪ ಸ್ವಾತಂತ್ರ ಬಂದ ಎಪ್ಪತ್ತು ವರ್ಷಗಳಾಗುತ್ತಿರುವಾಗ ಗಾಂಧಿ ಮಾರ್ಗವನ್ನೇ ಅಲ್ಲಗಳೆಯಲು, ಗಾಂಧಿಯ ಅಹಿಂಸಾಮಾರ್ಗವನ್ನೇ ಅಡಿಕೊಳ್ಳಲು ಹೊರಟಿರುವುದು ಅರಳುಮರುಳಲ್ಲವೆ, ಥೂತ್ತೇರಿ!!

* * *

ಇದ್ದಕ್ಕಿದ್ದಂತೆ ತಮ್ಮ ಹೆಂಡತಿಗೆ ಒಂದು ಲಕ್ಷ ರೂ ಬೆಲೆಯ ರೇಷ್ಮೆ ಸೀರೆ ಕೊಡಿಸಿದ ಸಿದ್ದರಾಮಯ್ಯನವರನ್ನು ಮಾತನಾಡಿಸಿ, ಇಂತಹ ದುಬಾರಿ ಉಡುಗೊರೆಗೆ ಏನಾದರೂ ಕಾರಣವಿದೆಯೇ ಎಂದು ಕೇಳಬೇಕೆನಿಸಿತಲ್ಲಾ. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಉಡುಗೊರೆಯೊಂದ ತಂದ ಯೆನ್ನೆಯಮನದಾನಂದ ಉಡುಗೊರೆ."

"ಹಲೋ?"

"ನಾನು ಯಾಹು ಸಾರ್."

"ಏನ್ರಿ ಯಾಹೂ?"

"ಚನ್ನಾಗಿದ್ದೀರ ಸಾ?"

"ಊ."

"ನಿಮ್ಮ ಮಿಸಸ್ಸಿಗೆ ರೇಷ್ಮೆ ಸೀರೆ ಕೊಡಿಸಿದ್ದೀರಿ?"

"ಹೆಂಡ್ತಿಗೆ ಕೊಡುಸ್ದೆ ಬೇರೋರಿಗೆ ಕೊಡಸಕ್ಯಾತ್ತೇನ್ರಿ?"

"ಅದೂ ಸರಿ ಸಾರ್. ಆದ್ರೂ ಒಂದು ಲಕ್ಷ ರೂಪಾಯಿ ಸೀರೆ ಕೊಡಿಸಿದ್ರಲ್ಲಾ ಹೇಳಿ..."

"ಅದೂ ಡಿಸ್ಕೌಂಟ್ ಹೋಯ್ತಾ ಎಂಬತ್ತೆರಡು ಸಾವ್ರರೂಪಾಯ್ತಾ, ನಲವತ್ತೊರಸದಿಂದ ಕೊಡಿಸಿರಲಿಲ್ಲ ಅವ್ರುಳಿಗೆ, ಅದ್ಕೆ ಕೊಡಿಸ್ದೆ."

"ನಲವತ್ತೊರಸದಿಂದ ಕೊಡಿಸಿರಲಿಲ್ವೆ?"

"ಇಲ್ಲ ಕಂಡ್ರಿ. ಅವ್ರುಳೊಂತರಾ ಶೈ ನೇಚರ್ರು. ನನ್ನ ಜೊತೆ ಎಲ್ಲಿಗೂ ಬಂದೋಳಲ್ಲ, ನನಿಗೆ ಯಾವತ್ತೂ ತೊಂದ್ರೆ ಕೊಟ್ಕೊಳಲ್ಲ. ನನ್ನನ್ನ ಚೆನ್ನಾಗಿ ಅರ್ಥಮಾಡಿಕೊಂಡವ್ರುಳೆ. ಅದ್ಕೆ ಪಾಪ ಕೊಡಿಸ್ದೆ ಅತ್ಗೆ."

"ಹೊಸ ಸಂಬಂಧನೊ? ಹಳೆ ಸಂಬಂಧನೊ?"

"ಹಳೆದೆ ಕಂಡ್ರಿ. ಸ್ವಜಾತೀಲಿ ಮದುವೆ ಆದ್ರೆ ಅವ್ವಲ್ಲಿ ಹಳೆ ಸಂಬಂಧನೆ. ಹೊಸ ಸಂಬಂಧ ಬೇಕು ಅಂದ್ರೆ ಬ್ಯಾರೆ ಜಾತೀಲಿ ಮದುವೆ ಆಗಬೇಕು."

"ನೀವು ಓದ್ತಾ ಇದ್ದಾಗ ಲವ್ ಮಾಡಿದೋರ್ನ ಮದುವೆ ಆಗಬೇಕಿತ್ತು ಸಾರ್!"

"ಆಗಬೇಕಿತ್ತು, ಆಗಲಿಲ್ಲ, ಬುಡಿ ಆ ಸುದ್ದಿ ಯಾಕೆ? ಪಾಪ ಎಲ್ಲೊ ಸುಖವಾಗ್ಯವ್ರೆ"

"ನೀವು ಫೋನ್ ಗೀನು ಮಾಡಿದ್ರ, ಅಥವಾ ಅವ್ರೆ ಏನಾರ ಮಾಡ್ತರಾ?"

"ಅಂಗ್ಯಲ್ಲ ಮಾಡಕ್ಕೋಗಬಾರ್ದು."

"ನಿಜ ಸಾರ್. ಕುಮಾರಣ್ಣನ ಜೊತೆಗೆ ಚೆಡ್ಡಿಗಳು ವಾಚ್ ಮಾಡ್ತಾ ಇರ್ತರೆ."

"ಊ, ಅವ್ರುಕೆ ಅದೇ ಕ್ಯಲಸ."

"ಚೆಡ್ಡಿಗಳು ಇನ್ನೊಂದು ತಕರಾರ ಎತ್ತವೆ ಸಾರ್..."

"ಏನು..."

"ಮೋದಿ ಕೊಂಡಕೊಂಡ ಕೋಟಿನ ಬೆಲೆ ಬಗ್ಗೆ ಮಾತಾಡಿದೋರು ಸಿದ್ದು ಪತ್ನಿಗೆ ಲಕ್ಷದ ಹತ್ತು ಸಾವುರೂಪಾಯಿ ಸೀರೆ ಕೊಡಿಸಿದ್ಕೆ ಏನೇಳ್ತರೆ ಅಂತ..."

"ಚೈಲ್ಡಿಶಾಗಿ ಮಾತಾಡೋರಿಗೆ ಉತ್ತರ ಕೊಡಕ್ಕೋಗಬಾರ್ದು. ನಾನು ರೇಷ್ಮೆ ಸೀರೆ ಮಾರಾಟದ ಮಳಿಗೆ ಉದ್ಘಾಟನೆಗೆ ಹೋಗಿದ್ದೆ. ಏನಾರ ತಕ್ಕಳನಾ ಅನ್ನುಸ್ತು, ಇಲ್ಲೀವರಿಗೂ ನನ್ನೆಡ್ತಿಗೆ ಏನೂ ಕೊಡಿಸಿಲ್ಲ ಅನ್ನಕಂಡು ನನ್ನ ಸ್ವಂತ ದುಡ್ಡಲ್ಲಿ ನನ್ನೆಡ್ತಿಗೆ ಸೀರೆ ತಕ್ಕಂಡೆ. ಮೋದಿಯಂಗೆ ಆಡ್ರು ಕೊಟ್ಟು ಕೋಟಿನ ಮ್ಯಾಲೆ ಮೋದಿ ಮೋದಿ ಅಂತ ಅಕ್ಷರ ನೇಯ್ಸಿದ್ನೆ?"

"ಇಲ್ಲ ಸಾರ್...."

"ಒಂದು ಒಳ್ಳೆ ಸೀರೆ ಕೊಡಿಸ್ದೆ. ಅವ್ರುಳೇನು ಕೇಳಿರಲಿಲ್ಲ, ಹುಟ್ಟುಗೊ ಅಂತ ಕೂಡ ಹೇಳಿಲ್ಲ. ಹೋಗ್ಲಿ ಮೋದಿ ಏನಾರ ಹೇಡ್ತಿಗೆ ಸೀರೆ ಕೊಡಿಸಿದ್ದನಾ?"

"ಅವ್ನಲ್ಲ ಹೆಡ್ತಿಗೆ ಸೀರೆ ಕೊಡಸೊ ಅಂತವಲ್ಲ ಸಾರ್. ಹೆಂಗಸರೇ ಕಾಸ ಗಂಟಿಕ್ಕಿ ಕೊಂಡಕಬೇಕು. ಚೆಡ್ಡಿಗಳ್ಯಾವತ್ತು ಸೀರೆ ಅಂಗಡಿಗೆ ಹೋದವಲ್ಲ. ಅವೇನಿದ್ರು ಖಾಕಿ ಚೆಡ್ಡಿ ಬಿಳಿ ಅಂಗಿ ಮಾರೋ ಅಂಗಡಿಗೊಯ್ತವೆ."

"ಊ...."

"ನಿಮ್ಮ ಮಿಸಸ್ಸಾಕೆ ಸಾರ್ ನಿಮ್ಮ ಜೊತೆ ಎಲ್ಲೂ ಕಾಣಿಸಿಗಳಲ್ಲ?"

"ಅವ್ರುಳಿಗೇನೋ ಸಂಕೋಚ. ನಾನು ಹೋಗಿ ಯಳಕಂಡು ಬರಕ್ಯಾತ್ತೇನ್ರಿ?"

"ಥೂತ್ತೇರಿ!!!" ■

---

06 ◄◄ ಹೊಡೆದು ಚಪ್ಪಾಳೆ ತಟ್ಟಿ ತಮ್ಮ ಬೆಂಬಲ ಸೂಚಿಸಿದರು.


ಶರಣ್ ಪಂಪ್‌ವೆಲ್‌ರ ನಂತರ ಮಾತನಾಡಿದ ಸಂಘ ...ರಿವಾರದ ಹಿರಿಯ ನಾಯಕ ಕಲ್ಲಡ್ಕ ಪ್ರಭಾಕರ ಭಟ್ಟ ತನ್ನ ಭಾಷಣದಲ್ಲಿ ...ೊದಲು ಹೇಳಿದ್ದು ಮುಸ್ಲಿಮರ ಏರುತ್ತಿರುವ ಜನಸಂಖ್ಯೆ ಕುರಿತು ಸಂಘ ...ರಿವಾರ ಹಲವು ವರ್ಷಗಳಿಂದ ಪ್ರಚಾರ ಮಾಡುತ್ತಿರುವ ಹಸಿ ಸುಳ್ಳನ್ನು. ...ವರ ಮಾತಿನಲ್ಲಿಯೇ ಅದನ್ನು ಹೇಳುವುದಾದರೆ, "ನಾವು ಹಿಂದೂಗಳು ...ೊದಲು 'ನಾವಿಬ್ಬರು, ನಮಗಿಬ್ಬರು' ಎನ್ನುತ್ತಿದ್ದೆವು. ನಂತರ ಅದು 'ಎರಡು ...ೇಕು; ಮೂರು ಸಾಕು' ಎಂದಾಯಿತು. ಈಗ 'ಒಂದೇ ಸಾಕು; ಅದೂ ...ಾಸ್ತಿಯೇ' ಎನ್ನುತ್ತಿದ್ದೇವೆ. ಇನ್ನು ಮುಂದೆ ಹಿಂದೂಗಳು 'ನಾವಿಬ್ಬರು, ನಾವಿಬ್ಬರೇ' ...ಂದು ಹೇಳುತ್ತಾರೆ. ಆದರೆ ಮುಸ್ಲಿಮರು ಮಾತ್ರ ನಾಲ್ಕು ನಾಲ್ಕು ಮದುವೆಯಾಗಿ ...0 ಮಕ್ಕಳನ್ನು ಹುಟ್ಟಿಸಿ ಹಾಕುತ್ತಾರೆ." ಪ್ರಭಾಕರ ಭಟ್ಟರ ಪ್ರಕಾರ ಮುಸ್ಲಿಮರಿಂದ ...ಂದೂಗಳಿಗೆ ಈಗ ಬಂದಿರುವ ಅತಿದೊಡ್ಡ ಕುತ್ತು ಲವ್ ಜೆಹಾದ್‌ನದ್ದು. ...ಂದೂ ಹುಡುಗಿಯರೂ ಅಷ್ಟೇ; ಅವಕ್ಕೆ ಮಂಡೆ ಶುದ್ಧ ಇಲ್ಲ, ಅವನ್ನು ...ಳೆಸುವ ಅಪ್ಪಅಮ್ಮಂದಿರಿಗೆ ಅದಕ್ಕಿಂತ ಮೊದಲೇ ಮಂಡೆ ಶುದ್ಧ ಇಲ್ಲ, ...ಾರೊಟ್ಟಿಗೆ ಮಾತಾಡಬೇಕು, ಯಾರೊಟ್ಟಿಗೆ ಮಾತಾಡಬಾರದು ಎಂದು ...ಮ್ಮ ಹೆಣ್ಣು ಮಕ್ಕಳಿಗೆ ಅವರು ಬುದ್ಧಿ ಹೇಳುವುದಿಲ್ಲ" ಎಂದು ಮುಂತಾಗಿ ...ವರು ಹಿಂದೂ ತರುಣಿಯರನ್ನೂ ಅವರ ಹೆತ್ತವರನ್ನೂ ತರಾಟೆಗೆ ...ಗೆದುಕೊಂಡರು. ಪ್ರಭಾಕರ ಭಟ್ಟರ ಮಾತಿಗೂ ಸಭೆಯಲ್ಲಿದ್ದ ಮಹಿಳೆಯರೂ ...ರಿದಂತೆ ಹೆಚ್ಚಿನವರು ಬೆಂಬಲ ಸೂಚಿಸಿದರು. 'ಗೋವು ಮೂಕ ಪ್ರಾಣಿ, ...ಣ್ಣು ಕೂಡ ಮೂಕ ಪ್ರಾಣಿ. ಅವಳ ದೇಹ ಮನಸ್ಸು ಹೃದಯ ಯಾವುದೂ ...ವಳದ್ದಲ್ಲ, ಮುಸ್ಲಿಮರು ಗೋವಿನ ಹಾಗೆ ಹಿಂದೂ ಹುಡುಗಿಯರನ್ನೂ ...ದ್ದು ಸಾಗಿಸುತ್ತಾರೆ. ಆದರೆ ಈ ಹುಡುಗಿಯರಿಗೆ ತಮ್ಮನ್ನು ರಕ್ಷಿಸಿಕೊಳ್ಳಲು ...ೇಕಾದ ಸಂಸ್ಕಾರ ಇಲ್ಲ' - ಇದು ಪ್ರಭಾಕರ ಭಟ್ಟರ ಮಾತಿನ ತಾತ್ಪರ್ಯವಾಗಿತ್ತು.

ಹೀಗೆ, ಹಿರಿಯಡ್ಕದ ಹಿಂದೂ ಸಮಾಜೋತ್ಸವಕ್ಕೆ ಜನ ಸಾಮಾನ್ಯರಿಂದ ...ೊರೆತ ಭಾರೀ ಬೆಂಬಲ, ಸಮಾರಂಭದಲ್ಲಿ ಭಾಷಣ ಮಾಡಿದವರು ತಮ್ಮ ...ಾತಿನಲ್ಲಿ ಕಾರಿಕೊಂಡ ನಂಜು, ಅಲ್ಲಿ ಮೊಳಗಿದ ಘೋಷಣೆಗಳು - ...ೆಲ್ಲದರಿಂದ ಒಂದು ಸಂಗತಿ ಸ್ಪಷ್ಟವಾಗುತ್ತದೆ. 1992ರ ಡಿಸೆಂಬರ್ 6 ...ದು ಅಯೋಧ್ಯೆಯಲ್ಲಿ ನಾಶವಾದದ್ದು ಮಸೀದಿ ಮಾತ್ರವಲ್ಲ,

● ಜೆ. ರಾಜಶೇಖರ

ವಾಘಾ ಗಡಿಯಲ್ಲಿ

02 ◄◄ ಕಾಲುಕೆರೆಯುವ ರೀತಿಯಲ್ಲಿ ನಡೆಯುತ್ತದೆ. ಆ ಕಡೆಯಿಂದಲೂ. ಒಟ್ಟಾರೆ ಒಂದು ಗಂಟೆ ಕಾಲ ನಡೆಯುವ ಇಡೀ ಕವಾಯಿತಿನ ಕೊನೆಯಲ್ಲಿ ಒಮ್ಮೆ ಎರಡೂ ಗೇಟುಗಳನ್ನು ಒಟ್ಟಿಗೆ ತೆರೆಯಲಾಗುತ್ತದೆ. ಬಹುಶಃ ಒಂದು ಅಥವಾ ಎರಡು ಸೆಕೆಂಡುಗಳ ಕಾಲ!! ಯಾವ ಗುಲಾಬಿಯೂ ವಿನಿಮಯವಾಗುವುದಿಲ್ಲ.




ದುರುಗುಟ್ಟುವ ನೋಟ ಮತ್ತು ಪ್ರೇಕ್ಷಕರ ಉನ್ಮಾದ ಮಾತ್ರ ಕಂಗೆಡಿಸುತ್ತದೆ. ದಢಾರನೇ ಗೇಟನ್ನು ತಳ್ಳಿ ಮುಚ್ಚಲಾಗುತ್ತದೆ. ಪಾಕಿಸ್ತಾನದ ಗೇಟನ್ನು ಅಷ್ಟು ಕೆಟ್ಟದಾಗಿ ಹಾಕುವುದಿಲ್ಲ, ಅದಕ್ಕೆ ಪಾಕಿಸ್ತಾನದ ಮೃದು ಧೋರಣೆಯ ಕಾರಣಕ್ಕಿಂತ ಜಾರುವ (sliding) ಗೇಟು ಇರುವುದು ಕಾರಣವಿರಬಹುದು. ನಂತರ ಎರಡೂ ಕಡೆಯವರು ಧ್ವಜಗಳನ್ನು ಇಳಿಸಿ, ಮಡಿಸಿ ಒಳಗೆ ತಂದಿಡುತ್ತಾರೆ.

ಒಂದು ರೀತಿಯ ನಿರಾಶೆಯಲ್ಲಿ ಪ್ರೇಕ್ಷಕ ಸಮೂಹ ಹೊರಡುತ್ತದೆ. ಆದರೆ ಇಷ್ಟು ದೂರ ಬಂದಿದ್ದು ನಿಷ್ಪ್ರಯೋಜಕ ಎಂದಾಗಿಬಿಟ್ಟರೆ, ಖರ್ಚು ಮಾಡಿದ ಕಾಸಿಗೆ ಬೆಲೆಯಿಲ್ಲದಂತಾಗಬಾರದು ಎಂದು, ಏನೋ ವಿಶೇಷವಾದದ್ದು ನೋಡಿದೆವು ಎಂಬ ಮುಖವಾಡವನ್ನು ಹಾಕಿಕೊಳ್ಳುವ ಪ್ರಯತ್ನ ಅಲ್ಲಿರುತ್ತದೆ. ಎಂತಹ ಉನ್ಮಾದೀ 'ದೇಶಪ್ರೇಮಿ'ಗಳು ಬಂದಿದ್ದರೂ, ಈ ವಿಚಿತ್ರ ಕುಚೇಷ್ಟೆಗಳು ಅವರಿಗೆ ಖುಷಿಯನ್ನು ಉಂಟುಮಾಡುವ ಸಾಧ್ಯತೆ ಕಡಿಮೆ. ಅಷ್ಟು ಸಣ್ಣ ರೀತಿಯಲ್ಲಿ ಒಟ್ಟಾರೆ ಕಾರ್ಯಕ್ರಮ ನಡೆಯುತ್ತದೆ.

ಇದೇಕೆ ಹೀಗೆ? ಇದು ಮೋದಿ ಸರ್ಕಾರ ಬಂದಮೇಲೆ ಶುರುವಾಗಿರುವುದಲ್ಲ, ಆ ನಂತರವೇ ಇದು ಆಕ್ರಮಣಕಾರಿ ಸ್ವರೂಪ ತೆಗೆದುಕೊಂಡಿದೆ ಎಂತಲೂ ಅಲ್ಲ, ಕಾಂಗ್ರೆಸ್ ಸರ್ಕಾರವೇ ಇದನ್ನು ಆರಂಭಿಸಿದಂತಿದೆ. ಪಾಕಿಸ್ತಾನದ ಜೊತೆಗೆ ಎರಡು ಯುದ್ಧಗಳನ್ನು ಮಾಡಿದ್ದು ಕಾಂಗ್ರೆಸ್ ಸರ್ಕಾರವೇ ಆಗಿತ್ತು. ಯುದ್ಧ ಮಾಡಿಕೊಂಡು ಹಾಳಾಗಿಹೋಗಲಿ. ಪ್ರತಿನಿತ್ಯ ಗಡಿಯಲ್ಲಿ ಇಂತಹ ಕುಚೇಷ್ಟೆಯನ್ನು ಒಂದು ಕಾರ್ಯಕ್ರಮವನ್ನಾಗಿಸುವ ಅಗತ್ಯವೇನಿದೆ? ಪ್ರವಾಸೋದ್ಯಮವನ್ನು ಬೆಳೆಸಲು ಈ ವಿಚಿತ್ರ ಡ್ರಿಲ್ ಸಹ ಸಹಾಯ ಮಾಡುತ್ತಿದೆಯಾ? ಟಿಆರ್‌ಪಿಗಾಗಿ ಕಪಿಚೇಷ್ಟೆ ಮಾಡುವ ಟಿವಿ ಕಾರ್ಯಕ್ರಮಗಳಂತೆ?

ಅದೇನೇ ಇರಲಿ, ಇದು ಬದಲಾಗಬೇಕು. **Give a rose in Wagha border everyday** ಎಂಬ ಅಭಿಯಾನ ನಡೆಸಬೇಕು ಎನಿಸಿಬಿಟ್ಟಿತು. ಬೇಕಾದರೆ, ಅದನ್ನು ವಾಘಾ-ಅಟ್ಟಾರಿ ಬಾರ್ಡರ್ ಎಂದೂ ಕರೆಯಲಿ. ಏಕೆಂದರೆ, ಅದೂ ಸಹ ಎರಡು ದೇಶಗಳಿಗೆ ಸೇರಿದ, ಆದರೆ ಅತ್ಯಂತ ಸಮೀಪದಲ್ಲಿರುವ ಎರಡು ಗ್ರಾಮಗಳ ಹೆಸರನ್ನು ಸೂಚಿಸುತ್ತದೆ. ವಾಘಾ-ಅಟ್ಟಾರಿ ಬಾರ್ಡರ್‌ನಲ್ಲಿ ನಡೆಯುವ ಕವಾಯಿತು, ನಾವು ಒಂದೇ ಆಗಿದ್ದ ದೇಶದವರು, 'ಛೆ! ಅನ್ಯಾಯವಾಗಿ ಬೇರೆ ಆಗಿಬಿಟ್ಟೆವಲ್ಲಾ' ಎಂಬ ಭಾವವನ್ನು ಮೂಡಿಸುವಂತಾಗಬೇಕು. ಅಮೃತಸರದ ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡದ ಮರುದಿನ ಅಲ್ಲಿನ ಮಣ್ಣನ್ನು ಬಾಟಲ್‌ನಲ್ಲಿ ತುಂಬಿಸಿಕೊಂಡು ಹೋಗಿ, ಸ್ವಾತಂತ್ರ್ಯ ಹೋರಾಟದ ಪ್ರತಿಜ್ಞೆ ಮಾಡಿದ್ದ ಭಗತ್‌ಸಿಂಗ್ ಕ್ರಾಂತಿಕಾರಿಯಾಗಿ ಹೊರಹೊಮ್ಮಿದ್ದು ಮತ್ತು ಅಂತಿಮವಾಗಿ ನೇಣಿಗೇರಿದ್ದು ಗಡಿಯ ಆ ಭಾಗದ ಲಾಹೋರ್‌ನಲ್ಲಿ ಎಂಬುದನ್ನು ಅದು ನೆನಪಿಸಬೇಕು. ಇಲ್ಲದಿದ್ದಲ್ಲಿ ಇಂತಹ ಕುಚೇಷ್ಟೆಯನ್ನು ನಿಲ್ಲಿಸಬೇಕು ಎಂಬ ಭಾವದಲ್ಲಿ ನಾವು ಹೊರಬಂದೆವು. ■

ನೀತಿ ಆಯೋಗ: ನಿರಂಕುಶಾಧಿಕಾರದ ಹೊಸ ಅಸ್ತ್ರ



ದೇಶದ ಆಡಳಿತದ ಚುಕ್ಕಾಣಿ ಹಿಡಿದವರು ತಳಮಟ್ಟದಿಂದ ಮೇಲ್ಮಟ್ಟದವರೆಗೆ ಸಮಿತಿ, ಆಯೋಗಗಳನ್ನು ರಚಿಸುವುದರಲ್ಲಿ ನಿಸ್ಸೀಮರು. ಹಾಗೆ ರಚನೆಯಾದ ಸಂಸ್ಥೆಗಳ ಕಾರ್ಯವೈಖರಿ ಪ್ರಶ್ನಾರ್ಹ. ಯಾರ ಉದ್ಧಾರಕ್ಕೆ ಇಂತಹ ಸಂಸ್ಥೆಗಳನ್ನು ರಚಿಸಲಾಗುವುದೋ? 1950ರಲ್ಲಿ ಸಂವಿಧಾನಬದ್ಧವಾಗಿ ಒಪ್ಪಿ ಜಾರಿಗೆ ತರಲಾದ 'ಯೋಜನಾ ಆಯೋಗ'ವನ್ನು ಇಂದಿನ ಪ್ರಧಾನಿಗಳು ಕಿತ್ತೊಗೆದು ಅಲ್ಲಿ 'ನೀತಿ' ಆಯೋಗವನ್ನು ಪ್ರತಿಷ್ಠಾಪಿಸಿದ್ದಾರೆ. ಭಾರತ ರಾಷ್ಟ್ರೀಯ ಪರಿವರ್ತನಾ ಸಂಸ್ಥೆ ಎಂಬುದು ಅದರ ಪೂರ್ಣ ಹೆಸರು. ಈ ನೀತಿ ಆಯೋಗದಲ್ಲಿ ಅತಿ ಬುದ್ಧಿವಂತರ ಸಮೂಹವೊಂದಿದೆ. ಅದು ಪ್ರಧಾನಿಯ ತಾಳಕ್ಕೆ ತಕ್ಕಂತೆ ಕುಣಿಯಬೇಕು. ಹಿಂದಿನ ಯೋಜನಾ ಆಯೋಗದಲ್ಲಿ ಅಭಿವೃದ್ಧಿ ಕಾರ್ಯಗಳು ಮೇಲ್ಮಟ್ಟದಿಂದ ತಳಮಟ್ಟಕ್ಕೆ ಸಮರ್ಪಕವಾಗಿ ಹರಿದು ಬರುತ್ತಿರಲಿಲ್ಲವೆಂದು ಪ್ರಧಾನಿ ಆರೋಪ. ಆದ್ದರಿಂದಲೇ ನೀತಿ ಆಯೋಗದಡಿಯಲ್ಲಿ ಅಭಿವೃದ್ಧಿಯನ್ನು ತಳಮಟ್ಟದಿಂದ ಮೇಲ್ಮಟ್ಟಕ್ಕೆ ಕೊಂಡೊಯ್ಯಲು ತವಕಿಸುತ್ತಿದ್ದಾರೆ. ಆದರೆ ಮುಂದಿನ ದಿನಗಳಲ್ಲಿ ಅದು ತಳಕೆಳಗಾಗುವುದರಲ್ಲಿ ಅನುಮಾನವಿಲ್ಲ.


ನವದೆಹಲಿಯಲ್ಲಿರುವ ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಅಧ್ಯಕ್ಷರಾದ ಡಾ. ಪ್ರನೋಬ್ ಸೇನ್ ಅವರು ಯೋಜನಾ ಆಯೋಗವನ್ನು ರದ್ದುಪಡಿಸಿ ಅಲ್ಲಿ ನೀತಿ ಆಯೋಗವನ್ನು ರಚಿಸಿರುವುದರ ಬಗೆಗೆ ಪ್ರಧಾನಿಯ ನಿಲುವನ್ನು ಖಂಡಿಸುತ್ತ ಹೀಗೆ ಹೇಳಿದ್ದಾರೆ: "ಯೋಜನಾ ಆಯೋಗದ ಮೂಲ ಕಾರ್ಯವು ಭಾರತದಂತಹ ವಿಶಾಲ ಆರ್ಥಿಕಾಭಿವೃದ್ಧಿಯ ಪ್ರಕ್ರಿಯೆಯಲ್ಲಿ ಸರ್ಕಾರ ಮತ್ತು ಅದರ ವಿವಿಧ ಮಂತ್ರಾಲಯಗಳು ನಿರೂಪಿಸುವ ಕಾರ್ಯಕ್ರಮ, ಅದಕ್ಕೆ ಅವಶ್ಯವಿರುವ ಹಣಕಾಸು ನಿಧಿ ಮತ್ತು ಅದರ ವಿತರಣಾ ಕೆಲಸಗಳಲ್ಲಿ ಅರ್ಥಪೂರ್ಣ ಮಧ್ಯಪ್ರವೇಶದೊಂದಿಗೆ ರೂಪುರೇಶೆಗಳನ್ನು ಸಿದ್ಧಪಡಿಸುವುದೇ ಆಗಿದೆ. ಜೊತೆಗೆ ಯೋಜನಾ ಆಯೋಗದ ಮತ್ತೊಂದು ಪ್ರಮುಖ ಕೆಲಸವೆಂದರೆ ಹಣಕಾಸಿನ ಹಂಚಿಕೆಯಲ್ಲ, ಆದರೆ ಅದಕ್ಕೊಂದು ದಿಕ್ಕನ್ನು ಸೂಚಿಸುವುದು." ಸೇನ್ ವ್ಯಕ್ತಪಡಿಸಿರುವ ಇನ್ನೊಂದು ಅನಿಸಿಕೆಯಲ್ಲಿ ಹುರುಳಿದೆ, ಅದೆಂದರೆ ಯೋಜನಾ ಆಯೋಗವನ್ನು ರದ್ದುಪಡಿಸಿರುವುದರಿಂದ ಇಂದು ನಾವು ಮಾತನಾಡುವ ಸ್ವಾತಂತ್ರ್ಯವನ್ನು ಸಂಪೂರ್ಣವಾಗಿ ಕಳೆದುಕೊಂಡಿದ್ದೇವೆ ಎಂದಿದ್ದಾರೆ. ಈಗ ಅಲ್ಲಿ ಮಾತನಾಡುವವರು ಕೇವಲ ಪ್ರಧಾನಿ ಮತ್ತವರ ಆಶಯಗಳು ಮಾತ್ರ. ಇನ್ನು ಅಲ್ಲಿರುವ ನೂರಾರು ಕಿವಿಗಳು ಆಶಯಗಳನ್ನು ಕೇಳಿಸಿಕೊಂಡು ಅದರ ಅಣತಿಯಂತೆ ಕೆಲಸ ಮಾಡುವುದಷ್ಟೇ. ಕೇಂದ್ರ ಸರ್ಕಾರವು ನೀತಿಆಯೋಗಕ್ಕೆ ಬುದ್ಧಿವಂತ ಮಹಾಶಯರನ್ನೆಲ್ಲ ಜರಡಿ ಹಿಡಿದು ಅದರಲ್ಲಿ ಅತಿ ಬುದ್ಧಿಜೀವಿಗಳನ್ನು ಆಯ್ದು ನಿಯೋಜಿಸಿದೆ. ಅವರನ್ನು ಕೇಳುಜೀವಿಗಳು ಎನ್ನುವುದೇ ಹೆಚ್ಚು ಅರ್ಥಪೂರ್ಣ-'ರಂಗನ ಮುಂದೆ ಸಿಂಗನೆ' ಎಂದು ಕೂರುವುದು ಇವರ ಕೆಲಸ. ಎಂತಹ ಅವಕಾಶ! ಎಂತಹ ಪುಣ್ಯ!

ಪ್ರಧಾನಿಯವರಿಗೆ ಈ ನೀತಿ ಆಯೋಗವನ್ನು ಸ್ಥಾಪಿಸಲು ಚೀನಾದ 'ರಾಷ್ಟ್ರೀಯ ಅಭಿವೃದ್ಧಿ ಹಾಗೂ ಆಯೋಗ ಸುಧಾರಣೆ'ಯು ಪ್ರೇರಣೆಯಂತೆ. ಆ ದೇಶಕ್ಕೆ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಎಂತಹ ಗಹನವಾದ ಪಾಠ ಕಲಿತ ಬಂದಿದ್ದಾರಲ್ಲವೇ! ಅವರು ಕೋಶ ಓದಿದ್ದು ಕಡಿಮೆ. ದೇಶ ವಿದೇಶ ಅಲೆದದ್ದು ಹೆಚ್ಚು, ಆದರೆ ಹಿಂದಿದ್ದ ಪ್ರಧಾನಿ ಓದಿದ್ದು ಹೆಚ್ಚು, ಅಲೆದದ್ದು ಕಡಿಮೆ.

ನಮ್ಮ ಸಂವಿಧಾನವು ಕೇಂದ್ರ ಹಾಗೂ ರಾಜ್ಯಗಳಿಗೆ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳಡಿಯಲ್ಲಿ ದೊರಕಲೇಬೇಕಾದ ಸ್ವಾತಂತ್ರ್ಯವನ್ನು ವಿವರವಾಗಿ ಬರೆದಿಟ್ಟಿದೆ. ಅದರ ಪ್ರಕಾರ ನಡೆದುಕೊಳ್ಳುವುದು ಪ್ರಜಾಪ್ರಭುತ್ವಕ್ಕೆ ಕ್ಷೇಮ. ರಾಜ್ಯಗಳು ತಮ್ಮ ಜವಾಬ್ದಾರಿಯನ್ನು ಅರಿತು ಅಭಿವೃದ್ಧಿ ಕೆಲಸಗಳನ್ನು ಸ್ವತಂತ್ರವಾಗಿ ಆಯೋಜಿಸಿಕೊಳ್ಳಬಹುದು. ಅಭಿವೃದ್ಧಿಯ ಭರಾಟೆಯಲ್ಲಿ ವೈವಿಧ್ಯಮಯವಾದ ಸಂಪನ್ಮೂಲ ಸಂಪತ್ತು; ಉತ್ಪಾದನೆ ಇತ್ಯಾದಿಗಳನ್ನು ಹೊಂದಿರುವ ರಾಜ್ಯಗಳು ಕೇಂದ್ರ ಸರ್ಕಾರ ನಿರೂಪಿಸುವ ನೀತಿಗಳ ಮುಂದೆ ಮಂಡಿಯೂರಿ ಕೂರಲಿ ಎಂದು ಪ್ರಧಾನಿ ಆಶಿಸುವುದು ಎಷ್ಟು ಸರಿ? ಇದು ಪ್ರಜಾಪ್ರಭುತ್ವವನ್ನು ವ್ಯಕ್ತಿಪ್ರಭುತ್ವವನ್ನಾಗಿ ಬದಲಿಸಿಕೊಳ್ಳುವ ನಯವಾದ ಹುನ್ನಾರವೆಂದರೆ ತಪ್ಪಾಗಲಾರದು. ಜರ್ಮನಿಯಲ್ಲಿ ಹಿಟ್ಲರ್ ಇದನ್ನು ಒತ್ತಾಯಪೂರ್ವಕವಾಗಿ ಅಮಾನುಷವಾಗಿ ಮಾಡಿದ್ದು ಇತಿಹಾಸ. ಆದರೆ ಚಾರಿತ್ರಿಕ ಸಂಗತಿಗಳು ಪುನರಾವರ್ತನೆಯಾಗುವ ಸಾಧ್ಯತೆಗಳು ಇಲ್ಲದಿಲ್ಲ, ಇಂದು ಹಿಂದಿನ ವಿರೋಧಿಗಳು ಅವಿರೋಧವಾಗಿ ಒಗ್ಗೂಡಿ ಸಿಕ್ಕಟ್ಟು ಬಾಚಿಕೊಳ್ಳುವ ತವಕದಲ್ಲಿದ್ದಾರೆ. ನೀತಿಗಳಡಿಯಲ್ಲಿ ಬುದ್ಧಿವಂತರನ್ನು ಅತಿಬುದ್ಧಿವಂತರನ್ನಾಗಿಸುವ ಒಳಗೊಳ್ಳುವ ಬೆಳವಣಿಗೆಯ (ಇನ್ಕ್ಲೂಸಿವ್ ಗ್ರೋತ್) ಪ್ರಕ್ರಿಯೆ ವಿಧಾನವಿದು. ನೀತಿ ಆಯೋಗದ ಬಗೆಗಿನ ಬಣ್ಣ ಬಣ್ಣದ ಮಾತುಗಳು ಹೀಗಿವೆ:

* ಸರ್ಕಾರವು ಅನುಕೂಲದ ಆಧಾರದ ಮೇಲೆ ಕಾರ್ಯ ಪ್ರವೃತ್ತವಾಗುತ್ತ ದೇಶವನ್ನು ಅಭಿವೃದ್ಧಿ ಪಡಿಸುವುದು
* ಆಹಾರ ಭದ್ರತೆಯೊಂದಿಗೆ ಮಿಶ್ರಕೃಷಿ ಉತ್ಪಾದನೆಗೆ ಉತ್ತೇಜನ
* ಜಾಗತಿಕ ಮಟ್ಟದಲ್ಲಿ ಭಾರತವನ್ನು ಪ್ರಗತಿಪರ ದೇಶವನ್ನಾಗಿಸುವುದು
* ಮಧ್ಯಮ ವರ್ಗದ ಕುಟುಂಬಗಳನ್ನು ಹೆಚ್ಚು ಸಮರ್ಥರನ್ನಾಗಿಸುವುದು
* ಸಂಘಟನಾತ್ಮಕ ಹಾಗೂ ಮಾನವ ಬುದ್ಧಿಮತ್ತೆಯನ್ನು ಬಂಡವಾಳವನ್ನಾಗಿ ಪೋಷಿಸುವುದು
* ಅನಿವಾಸಿ ಭಾರತೀಯರನ್ನು ಜಾಗತಿಕ ಆರ್ಥಿಕ ಹಾಗೂ ಜಾಗತಿಕ ರಾಜಕೀಯರಂಗದಲ್ಲಿ ಬಲಗೊಳಿಸುವುದು

ಇನ್ನು ಬಡತನ ನಿವಾರಣೆ, ಉದ್ಯೋಗ ಸೃಷ್ಟಿ, ಲಿಂಗಸಮಾನತೆ, ಮಹಿಳಾ ಸಬಲೀಕರಣ, ಹಳ್ಳಿಗಳ ಸಮಗ್ರ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ಇತ್ಯಾದಿ ಎಂದು ಘೋಷಿಸಿಕೊಂಡಿದೆ. ಆದರೆ ಅವುಗಳನ್ನು ಸಾಧಿಸುವ ಬಗೆ ಅಳವಡಿಸಿಕೊಳ್ಳಬಹುದಾದ ವಿಧಾನಗಳ ಬಗೆಗೆ ಮಾತ್ರ ಮೌನ ವಹಿಸಲಾಗಿದೆ. ನೀತಿ ಆಯೋಗದಲ್ಲಿರುವ ಸದಸ್ಯ ಬಿಬೇಕ್ ಡೆಬ್ರಾಯ್ ಅವರು ಈ ಅಂಶಗಳನ್ನು ಪ್ರಶ್ನಿಸಿದ್ದಾರೆ. ಪ್ರಧಾನಿಯವರು ರಾಯ್ ಅವರನ್ನು ಮುಕ್ತವಾಗಿ ಮಾಧ್ಯಮಗಳಲ್ಲಿ ಅಂತಹ ಪ್ರಶ್ನೆಗಳನ್ನು ಕೇಳಬಾರದೆಂದು ತಾಕೀತು ಮಾಡಿದ್ದಾರೆ. ಅದಕ್ಕೆ ಹೇಳುವುದು: ಪೀಪಲ್ ಹೂ ಹ್ಯಾ[...] ಸೆನ್ಸ್ ಆರ್ ಪವರ್‌ಲೆಸ್, ಅಂಡ್ ಪವರ್‌ಫುಲ್ ಪೀಪ[...] ಆರ್ ಸೆನ್ಸ್‌ಲೆಸ್ ಎಂದು!



ಕೇಂದ್ರದಲ್ಲಾಗಲಿ ರಾಜ್ಯಗಳಲ್ಲಾಗಲಿ ಇತ್ತೀಚಿ[...] ವರ್ಷಗಳಲ್ಲಿ ಅಧಿಕಾರ ಮಾಡುವವರು ಒಂದು ತೆರನಾ[...] ಅಸಹ್ಯ ಚಾಳಿಗೆ ಬಿದ್ದಂತಿದೆ. ಅದೆಂದರೆ ತಮ್ಮ ಇಚ್ಛೆ[...] ತಕ್ಕಂತೆ ಸಂವಿಧಾನಬದ್ಧವಾದ ಸಂಸ್ಥೆಗಳನ್ನು ತಮ[...] ಮನಬಂದಂತೆ ಮರುಸಂಘಟಿಸುವುದು ಇಲ್ಲವೆ ಅವುಗಳ[...] ಕಿತ್ತೊಗೆಯುವುದು. ಇಂದಿನ ಪ್ರಧಾನಿ ಮಾಡಿರುವುದ[...] ಅದನ್ನೇ. ಸಂವಿಧಾನ ಮತ್ತದರ ಮೂಲ ಆಶಯಗಳೊಂದಿ[...] ವಿರುದ್ಧವಾಗಿ ವರ್ತಿಸುವುದೆಂದರೆ ಇದೇ ಅಲ್ಲವ[...] ಅಸ್ತಿತ್ವದಲ್ಲಿರುವ ಒಂದು ಸಾಂಸ್ಥಿಕ ಸಂಸ್ಥೆಯನ್ನು ಅನೇ[...] ಮಗ್ಗಲುಗಳಿಂದ ಜರಿದು ಅದರ ಸ್ಥಾನದಲ್ಲಿ ಮತ್ತೊಂದನ[...] ನಿರ್ಮಿಸುವುದು. ಈ ರೀತಿಯ ನಿಲುವು ಖಂಡನಾರ್ಹ[...]

ಇರುವ ವ್ಯವಸ್ಥೆಯನ್ನು ಸೂಕ್ತವಾದ ಮಧ್ಯಪ್ರವೇಶದಿಂ[...] ಹೆಚ್ಚು ಸಶಕ್ತವನ್ನಾಗಿ ಮಾಡುವುದನ್ನು ಬಿಟ್ಟು ಇನ್ನೇನೋ[...] ಮಾಡಲು ಹೋಗಿ ಅದರ ಮಹತ್ತರವಾದ ಆಶಯವನ್ನ[...] ಬಲಿಕೊಡುವುದು ಹುಂಬತನದ ಹಾಗೂ ಅಶಕ್ತಿಯ ಸಂಕೇ[...] ಈ ಅಂಶವಿರುವುದು ಪ್ರಧಾನಿಯವರ ಮನಸ್ಸಿನಲ್ಲಿ[...] ಆದ್ದರಿಂದಲೇ ಯಾವಾಗಲೂ ಅವರು 'ಮನಸ್ಸಿನ ಮಾತು[...] (ಮನ್ ಕಿ ಬಾತ್) ಮಾಡುವುದು. ಮನಸ್ಸಿಗೆ ಬಂದಂ[...] ಮಾತು ಮತ್ತು ಆಲೋಚನೆ ಇಲ್ಲದ (ಮಸ್ತಿಷ್ಕ ರಹಿತ್ ಬಾತ್) ಕೆಲಸ ಎಂದು ಹೇಳುವುದು ಉಚಿತವಾದ[...] ದೇನೋ?

ಧಾರವಾಡ: ಸಮೃದ್ಧ ಜೀವನ ಮತ್ತು ಬೋಗಸ್ ನ್ಯೂಸ್

SAMRUDDHA JEEVAN™

ಉತ್ತರ ಕರ್ನಾಟಕದಲ್ಲಿ ಸಹಸ್ರಾರು ಗ್ರಾಹಕರು ಕೋಟ್ಯಂತರ ರೂಪಾಯಿ ಹೂಡಿಕೆ ಮಾಡಿರುವ 'ಸಮೃದ್ಧ ಜೀವನ' ಕೋ-ಆಪರೇಟಿವ್ ಸೊಸೈಟಿಯ ಮೇಲೆ ಅನುಮಾನದ ಕಾರ್ಮೋಡಗಳು ಕವಿದುಕೊಂಡಿವೆ. ಹಣ ಹೂಡಿದ ಮಂದಿ ತಮ್ಮ ರೊಕ್ಕ ಎಲ್ಲಿ ಗೋತಾ ಹೊಡೆಯುತ್ತೋ ಅನ್ನೋ ಆತಂಕದಲ್ಲಿ ಸಮೃದ್ಧ ಜೀವನ ಕಚೇರಿಗಳ ಮುಂದೆ ಜಮಾಯಿಸುತ್ತಿದ್ದಾರೆ. ಹೇಳಿಕೇಳಿ ಇದು ಬೋಗಸ್ ಬ್ಲೇಡ್ ಕಂಪನಿಗಳ ಜಮಾನ; ವಿನಿವಿಂಕ್ ಶಾಸ್ತ್ರಿಯಂತಹ ಆಸಾಮಿ ತೀಡಿದ ಪಂಗನಾಮವನ್ನು ಕಣ್ಣಾರೆ ಕಂಡ ಜನ ಇನ್ನೂ ಸುಧಾರಿಸಿಕೊಂಡಿಲ್ಲ, ಆದಾದ ಮೇಲೂ ಇಂತಹ ನೂರಾರು ಬೋಗಸ್ ಕಂಪನಿಗಳು ಜನರಿಗೆ ಮಾಡಿದ ವಂಚನೆ ಒಂದಾ.. ಎರಡಾ...! ಶಾರದಾ ಚಿಟ್‌ಫಂಡ್ ಹಗರಣದಲ್ಲಿ ಘಟಾನುಘಟಿ ರಾಜಕಾರಣಿಗಳೇ ಶಾಮೀಲಾಗಿ ಜೈಲು ಸೇರುವಂತಾದ ಮೇಲಂತೂ ಜನ ತಾವು ಹೂಡಿದ ಹಣದ ಬಗ್ಗೆ ಬಹಳಷ್ಟು ಆತಂಕಕ್ಕೆ ಒಳಗಾಗುತ್ತಲೇ ಇದ್ದಾರೆ. ಅಂತದ್ದರಲ್ಲಿ ಟೀವಿ ಚಾನೆಲ್ ವೊಂದರಲ್ಲಿ 'ಸಮೃದ್ಧ ಜೀವನ' ಸಹಕಾರಿ ಸೊಸೈಟಿಯ ಬಗ್ಗೆ ನೆಗೆಟಿವ್ ನ್ಯೂಸ್ ಬಿತ್ತರಗೊಂಡರೆ ಹೂಡಿಕೆ ಮಾಡಿದ ಜನರ ಪರಿಸ್ಥಿತಿ ಹೇಗಾಗಬೇಡ?

ಟಿವಿ 9 ನ್ಯೂಸ್ ಅವಾಂತರ

ಇತ್ತೀಚೆಗೆ ಒಡಿಯಾ ಮತ್ತು ಮರಾಠಿ ಸೇರಿದಂತೆ ಹಲವು ಭಾಷೆಯ ಟಿವಿ9 ನ್ಯೂಸ್ ಚಾನೆಲ್‌ಗಳಲ್ಲಿ ಸಮೃದ್ಧ ಜೀವನ ಕೋ-ಆಪರೇಟಿವ್ ಸೊಸೈಟಿಯ ಕುರಿತು ಕಾರ್ಯಕ್ರಮವೊಂದು ಬಿತ್ತರವಾಗಿತ್ತು, ಸದರಿ ಸೊಸೈಟಿಯು ಬೋಗಸ್ ಕಂಪನಿ ಎಂಬರ್ಥವೇ ಇಡೀ ಕಾರ್ಯಕ್ರಮದ ಸಾರಾಂಶವಾಗಿತ್ತು, ಅದು ಪ್ರಸಾರಗೊಂಡ ಮೇಲೆ ಸೊಸೈಟಿಯಲ್ಲಿ ಹಣ ಹೂಡಿಕೆ ಮಾಡಿದ ಲಕ್ಷಾಂತರ ಜನರು ತಮ್ಮ ಹಣ ವಾಪಸ್‌ಗೆ ಶಾಖಾ ಕಚೇರಿ ಎದುರು ಜಮಾಯಿಸಿದ್ದರು. ಅಲ್ಲದೇ ಆ ಸುದ್ದಿಯಿಂದಾಗಿ ಗ್ರಾಹಕರಿಂದ ಹಣ ಸಂಗ್ರಹಿಸಿ ಕಟ್ಟಿದ್ದ ಏಜೆಂಟರೂ ಕಂಗಾಲಾಗಿ ಹೋಗಿದ್ದಾರೆ. ಆಕಾಶವೇ ತಲೆ ಮೇಲೆ ಬಿದ್ದವರ ಹಾಗೇ ಕೈಕಟ್ಟಿ ಕುಳಿತಿದ್ದಾರೆ. ರಾಜ್ಯದಲ್ಲಿರುವ ಹಲವು ಶಾಖೆಗಳು ಒಂದೆರಡು ದಿನ ಬಾಗಿಲು ತೆರೆಯುವುದೇ ದುಸ್ತರವಾಗುವಂತಹ ವಾತಾವರಣ ನಿರ್ಮಾಣಗೊಂಡಿತ್ತು, ಕಡೆಗೆ ಸೊಸೈಟಿಯ ಅಧಿಕಾರಿಗಳು ತಾವು ನಡೆಸುತ್ತಿರುವ ಸಂಸ್ಥೆಯ ಪ್ರಾಮಾಣಿಕತೆ ಕುರಿತು ಸ್ಥಳಿಯ ಪೊಲೀಸ್ ಠಾಣೆಗೆ ಭೇಟಿ ಕೊಟ್ಟು ನೋಂದಣಿ ಪತ್ರ, ಕಾನೂನು ಬದ್ಧತೆ ಕುರಿತು ವಿವರಿಸಬೇಕಾಗಿ ಬಂದಿತು. ಅಷ್ಟೇ ಅಲ್ಲ, ಸ್ಥಳೀಯ ದಿನ ಪತ್ರಿಕೆಗಳಲ್ಲಿ ಜಾಹಿರಾತೂ ನೀಡಬೇಕಾಯಿತು. ಅದೊಂದು ನ್ಯೂಸ್‌ನಿಂದಾಗಿ ಪೊಲೀಸ್ ರಕ್ಷಣೆಯಲ್ಲಿ ಶಾಖೆಗಳನ್ನು ಪುನರ್ ಪ್ರಾರಂಭಿಸಬೇಕಾಯಿತು!


ಅಸಲಿಗೆ ಸೊಸೈಟಿಯ ವಿರುದ್ಧ ಅಂತಹದ್ದೊಂದು ಸುದ್ದಿ ಟಿವಿ9 ವಾಹಿನಿಯಲ್ಲಿ ಬಿತ್ತರವಾದದ್ದೇ ಇದೇ ಸೊಸೈಟಿಯಲ್ಲಿ ಈ ಹಿಂದೆ ಜಬರ್‌ದಸ್ತ್ ಹುದ್ದೆಯಲ್ಲಿ ಕೂತು, ಕಂಡಾಪಟ್ಟೆ ಕಾಸು ತಿಂದು, ಕೊನೆಗೆ ಸಿಕ್ಕಿಕೊಂಡು ಸಸ್ಪೆಂಡ್ ಆಗಿದ್ದ ವ್ಯಕ್ತಿಯೊಬ್ಬನ ಹುನ್ನಾರದಿಂದ. ತನ್ನನ್ನು ವಾಪಾಸ್ ಕೆಲಸಕ್ಕೆ ತೆಗೆದುಕೊಳ್ಳುವಂತೆ ಆತ ಮಾಡಿದ ಬ್ಲಾಕ್‌ಮೇಲ್ ತಂತ್ರಕ್ಕೆ ಸೊಸೈಟಿ ಕ್ಯಾರೇ ಅನ್ನದಿದ್ದಾಗ ಆತ ನ್ಯೂಸ್ ಚಾನೆಲ್ ಮೂಲಕ ಇಂತಹ ನೆಗೆಟಿವ್ ಸುದ್ದಿ ಬಿತ್ತರವಾಗುವಂತೆ ನೋಡಿಕೊಂಡಿದ್ದ, ಆದರೆ ಈ ಕಿರಾತಕನ ಹೆಸರನ್ನು ಬಹಿರಂಗಪಡಿಸಲು ಸಂಸ್ಥೆಯವರು ಈಗಲೂ ತಯಾರಿಲ್ಲ.

ಮಹಿಳೆ ಸಾರಥ್ಯದ 'ಜೀವನ'

'ಸಮೃದ್ಧ ಜೀವನ' ಎಂಬ ಹೆಸರಿನಲ್ಲಿ ಚಾಲ್ತಿಯಲ್ಲಿರುವ ಸಂಸ್ಥೆ ಮೂಲತಃ ಪುಣೆ (ಮಹಾರಾಷ್ಟ್ರ) ಮೂಲದ್ದು. ಇದರ ಸಂಪೂರ್ಣ ಹೆಸರು 'ಸಮೃದ್ಧ ಜೀವನ ಮಲ್ಟಿ ಸ್ಟೇಟ್ ಮಲ್ಟಿ ಪರ್ಪಸ್ ಕೋ-ಆಪರೇಟಿವ್ ಸೊಸೈಟಿ'. ಇದನ್ನು ಕೇಂದ್ರ ಸರ್ಕಾರದ ಕೃಷಿ ಮಂತ್ರಾಲಯ ಮತ್ತು ಕೃಷಿ ಮತ್ತು ಸಹಕಾರ ಇಲಾಖೆ ಅಡಿಯ ಸೆಂಟ್ರಲ್ ಕೋ ಆಪರೇಟಿವ್ ಸೊಸೈಟಿ ಅಡಿಯಲ್ಲಿ 2012ರಲ್ಲಿ (ಎಂಎಸ್‌ಸಿಎಸ್/ಸಿಆರ್/549/2012) ನೋಂದಾಯಿಸಲಾಗಿದೆ. ಕೃಷಿಗೆ ಹೆಚ್ಚಿನ ಒತ್ತು ಕೊಟ್ಟು ಸಹಕಾರಿ ತಳಹದಿಯಲ್ಲಿ ಗ್ರಾಹಕರ ಬದುಕನ್ನು ಸುಧಾರಿಸುವ ಉದ್ದೇಶದ ಈ ಸೊಸೈಟಿ ದೇಶದ 17 ರಾಜ್ಯಗಳಲ್ಲಿ 600 ಶಾಖೆಗಳನ್ನು ಹೊಂದಿದೆ. ಕರ್ನಾಟಕವೊಂದರಲ್ಲೇ 63 ಶಾಖೆಗಳು ಕಾರ್ಯನಿರ್ವಹಿಸುತ್ತಿವೆ. ಸುಮಾರು 3 ಲಕ್ಷ ಜನ ತಮ್ಮ ಹಣವನ್ನು ಇದರಲ್ಲಿ ಹೂಡಿಕೆ ಮಾಡಿದ್ದಾರೆ.


ದೇಶದಲ್ಲಿ ಸಹಕಾರಿ ರಂಗದಲ್ಲಿ ಮೊದಲನೇ ಸ್ಥಾನ ಮಹಾರಾಷ್ಟ್ರಕ್ಕೆ ಸಲ್ಲುತ್ತದೆ. ಮಹಾರಾಷ್ಟ್ರದಲ್ಲಿ ಸರಕಾರಿ ಬ್ಯಾಂಕ್‌ಗಳು ಮಾಡದ ಕೆಲಸವನ್ನು ಸಹಕಾರಿ ಬ್ಯಾಂಕ್‌ಗಳು, ಸೊಸೈಟಿಗಳು ಮಾಡಿವೆ. ಕೃಷಿಕರಲ್ಲಿ ಸಹಕಾರಿ ಬೀಜ ಬಿತ್ತಿ ಅದನ್ನು ಸೊಸೈಟಿ ರೂಪಕ್ಕೆ ತಂದು ಬ್ಯಾಂಕ್‌ಗಳಾಗಿ ಪರಿವರ್ತಿಸಿ, ಅವುಗಳ ಮೂಲಕವೇ ರೈತರಿಗೆ ಸಾಲ ಒದಗಿಸಿ ಕೃಷಿಗೆ ಉತ್ತೇಜನ ನೀಡುವುದೇ ಒಂದು ಚಳವಳಿಯಾಗಿ ರೂಪುಗೊಂಡ ನೆಲ ಅದು. ಅದು ಮಹಾರಾಷ್ಟ್ರದ ರಾಜಕೀಯ ಸೂತ್ರವೂ ಹೌದು. ಮಹಾರಾಷ್ಟ್ರ ರಾಜಕೀಯವನ್ನು ಸಂಪೂರ್ಣವಾಗಿ ನಿಯಂತ್ರಿಸುವುದು ಸಹಕಾರಿ ಸಂಸ್ಥೆಗಳೇ! ಇವತ್ತು ಮಹಾರಾಷ್ಟ್ರವನ್ನೂ ಬಿಟ್ಟು ದೇಶದ ವಿವಿಧ ಭಾಗಗಳಲ್ಲಿ ತನ್ನ ಶಾಖೆಗಳನ್ನು ಹೊಂದುವಷ್ಟು ಪ್ರಬಲವಾಗಿ ಬೆಳೆದುನಿಂತಿವೆ ಮಾತ್ರವಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸವಾಲು ಒಡ್ಡುತ್ತಿವೆ. ಅಂತಹ ಒಂದು ಸಹಕಾರಿ ಒಕ್ಕೂಟವೇ ಈ 'ಸಮೃದ್ಧ ಜೀವನ' ಎಂಬ ಕೋ-ಆಪರೇಟಿವ್ ಸೊಸೈಟಿ.

ಈ ಸಂಸ್ಥೆಯನ್ನು ಇವತ್ತು ಮುನ್ನಡೆಸುತ್ತಿರೋದು ಪೂಜಾ ಪಾರಸವಾಡ್ ಎಂಬ ಒಬ್ಬ ಮಹಿಳೆ. ಆಕೆಯ ಅಧ್ಯಕ್ಷತೆಯಲ್ಲಿರುವ 8 ಮಂದಿ ಡೈರೆಕ್ಟರ್‌ಗಳ ಆಡಳಿತ ಮಂಡಳಿ ಇದರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದೆ. ವಿವಿಧ ರಾಜ್ಯಗಳಲ್ಲಿ ಸಾಕಷ್ಟು ಆಸ್ತಿ, ಜಮೀನನ್ನು ಹೊಂದಿದೆ. ಕರ್ನಾಟಕದ ವಿಜಯಪುರ ಜಿಲ್ಲೆಯ ಝಳಕಿಯಲ್ಲಿ ಜಮೀನು ಖರೀದಿಸಿ ಎಮ್ಮೆ ಸಾಕಾಣಿಕೆ ಘಟಕ ಮಾಡಿದೆ. ಇದರೊಂದಿಗೆ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನಲ್ಲಿ ಒಟ್ಟು 3 ಘಟಕಗಳನ್ನು ಸ್ಥಾಪಿಸಿ, ಹೈನುಗಾರಿಕೆ ಕ್ಷೇತ್ರದಲ್ಲಿ ಕೂಡಾ ತೊಡಗಿಸಿಕೊಂಡಿದ್ದಾರೆ. ಜೊತೆಗೆ ಹಿಂದಿ ಹಾಗೂ ಮರಾಠಿ ಭಾಷೆಯಲ್ಲಿ ಎರಡು ಟಿವಿ ಚಾನಲ್‌ಗಳನ್ನೂ (Liv[...] India, ಮೀ-ಮರಾಠಿ) ಸೊಸೈಟಿ ನಡೆಸಿಕೊಂಡು ಬರುತ್ತಿ[...] ಹಲವಾರು ಶಾಲೆಗಳನ್ನು ನಡೆಸುವುದರ ಮೂಲಕ ತನ[...] ಗ್ರಾಹಕರ ಬಡಮಕ್ಕಳ ವಿದ್ಯಾಭ್ಯಾಸಕ್ಕೂ ನೆರವಾಗುತ್ತಿದೆ[...] ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿಯ ಮಹಿಳೆಯರ[...] ಸ್ವಯಂ ಉದ್ಯೋಗ ಸೃಷ್ಟಿಗಾಗಿ ಹೈನುಗಾರಿಕೆ, ಕುರಿ ಸಾಕಾಣಿಕ[...] ಕೇಂದ್ರಗಳನ್ನು ಸೊಸೈಟಿ ತೆರೆದಿದೆ.



ಮಹೇಶ್ ಕಿಶಾನ್

ಆದರೆ ಮಹಾರಾಷ್ಟ್ರಕ್ಕೆ ಹೋಲಿಸಿದರೆ ಕರ್ನಾಟಕದ[...] ಮಟ್ಟಿಗೆ ಸಹಕಾರಿ ಕ್ಷೇತ್ರದಲ್ಲಿ ಹೇಳಿಕೊಳ್ಳುವಂತಹ ಸಾಧ[...] ಸವೆದಿಲ್ಲ, ನೈಜ ಸಹಕಾರಿ ತತ್ವ ವಿಜೃಂಭಿಸುವುದಕ್ಕಿಂತ[...] ಹೆಚ್ಚಾಗಿ, ಅದರ ಸೋದರ ದಾಯಾದಿಗಳಂತೆ ಹುಟ್ಟಿಕೊಂಡ[...] ಚಿಟ್‌ಫಂಡ್ ರೀತಿಯ ಸ್ಕೀಮುಗಳು ದೋಖಾ ಮಾಡಿದ್ದೇ[...] ಹೆಚ್ಚು, ಕರ್ನಾಟಕದಲ್ಲಿ ಸಹಕಾರಿ ಭೀಷ್ಮ ಎಂದೇ ಹೆಸರಾಗಿದ್ದ[...] ದಿವಂಗತ ಕೆ.ಎಚ್. ಪಾಟೀಲರು ಕಟ್ಟಿದ ಸಹಕಾರಿ ಸಂಸ್ಥೆಗಳು[...] ಈಗಾಗಲೇ ನಷ್ಟ ಅನುಭವಿಸಿ ಬಾಗಿಲು ಮುಚ್ಚಿವೆ. ಮಾಜಿ[...] ಸಚಿವ ಪಿ.ಸಿ. ಸಿದ್ದನಗೌಡ್ರ ರಾಣೆಬೆನ್ನೂರ ಹತ್ತಿರ[...] ಜವಳಿ-ಗಿರಣಿ ಸ್ಥಾಪನೆಗೆ ಮಾಡುತ್ತೇನೆ ಅಂತಾ ರೈತರಿಂದ[...] ಎತ್ತಿದ ಹಣ ಗುಳುಂ ಆಗಿ ಹೋಗಿದೆ. ಕಲಘಟಗಿ[...] ತಾಲ್ಲೂಕಿನಲ್ಲಿ ಶಾಸಕ ಸಂತೋಷ್ ಲಾಡ್ ಅವರ ತಂದೆ[...] ಸ್ಥಾಪಿಸಿದ್ದ ಸಹಕಾರಿ ಮಿಲ್‌ಗಳು, ಕಾಟನ್ ಸೊಸೈಟಿಗಳು[...]



ೀತಿ ಆಯೋಗದಿಂದ ಹೊರಹೊಮ್ಮಿ ಬಂದಂತಹ
ಮಾರ ಆಶಯಗಳನ್ನು ನೀಗಿಸುತ್ತವೆಂಬುದು ಪ್ರಶ್ನಾರ್ಹ.
ಅದಕ್ಕೆ ಉತ್ತರವೂ ಬಹಳ ಸುಲಭ. ಅವು ಕೇವಲ
ಗಳ, ಅವರ ಆಪ್ತ ಬಂಡವಾಳಿಗರ ಮತ್ತು ಅವರ
ಾಲಕರನ್ನು ತೃಪ್ತಿಪಡಿಸುವುದು ಮಾತ್ರವೇ ಆಗಿರುತ್ತದೆ.
ಕನ್ನಡಿ ಹಿಡಿದಂತೆ ನಮ್ಮಲ್ಲಿರುವ ಹಗರಣಗಳೇ
ಮುಂದಿನ ದಿನಗಳಲ್ಲಿ ಈ ಹಗರಣಗಳಿಗಿಂತ ಹೆಚ್ಚು
ಮತ್ತದರ ಗಾತ್ರವನ್ನು ಊಹಿಸಲು ಸಾಧ್ಯ. ನೀತಿಯು
ಗೆ ದಾರಿ ಮಾಡಿಕೊಡುವ ಬಗೆಯಿದು. ಇದರಿಂದ
ದ ಸಮಾಜವು ರೋಗಗ್ರಸ್ತವಾಗುತ್ತದೆ. ಬುದ್ಧಿ
ುತ್ತದೆ, ಮನಸ್ಸು ಕೊಳಕಾಗುತ್ತದೆ. ದೇಶ ಕಟ್ಟುವುದು
ರೆ ಇದೆ ಏನು?
ೋಜನಾ ಆಯೋಗವನ್ನು ನೀತಿ ಆಯೋಗವನ್ನಾಗಿ
ರ್ತಿಸಿದ ರೀತಿಯಲ್ಲಿಯೇ 'ಭಾರತದಲ್ಲಿ ಮಾಡಿದ್ದು'
ದನ್ನು 'ಭಾರತಕ್ಕೆ ಬಂದು ಮಾಡಿ' ಎಂಬುದಾಗಿ
ಾನವನ್ನು ಕಳೆದುಕೊಳ್ಳುವ ನೀತಿಯಾಗಿರುವುದೇ
ತ. ದೇಶದ ಅಮೂಲ್ಯ ಸಂಪತ್ತನ್ನು ಪರಕೀಯರಿಗೆ
ುರೆದು ಅವರು ಹೂಡುವ ಬಂಡವಾಳಕ್ಕೆ ಹಾಗೂ
ವ ಪುಡಿಗಾಸಿಗೆ ಕೈಚಾಚಬೇಕೇ? ಬರುವವರು
ು? ಅವರ ಉದ್ದೇಶವೇನು? ಎಂಬ ಪ್ರಶ್ನೆಗಳಿಗೆ
ೋಗದಲ್ಲಿ ಉತ್ತರಗಳು ಸಿಗಲಾರವು. ಒಂದು ದೇಶದಲ್ಲಿ
ನ ಸಂಪನ್ಮೂಲಗಳನ್ನು ಸಂಚಯಿಸುವ, ಉತ್ಪಾದಿಸುವ
ರಿಂದ ನಿರೀಕ್ಷಿಸಬಹುದಾದ ಫಲಗಳನ್ನು ಹಂತಹಂತ
ಚರ್ಚಿಸುವ ಹಾಗೂ ಅದರ ಸಾಧಕಬಾಧಕಗಳನ್ನು
ದಂದಾಜಿಸುವ ಕೆಲಸವು ಯೋಜನಾ ಆಯೋಗಕ್ಕೆ
ತ್ತು. ಆದರೆ ಅದನ್ನು ತಿರಸ್ಕರಿಸಿ ನೇರವಾಗಿ ನೀತಿಯನ್ನು
ಡಿಸಿಕೊಳ್ಳುವುದು ದೇಶದ ಅಭಿವೃದ್ಧಿಗೆ ಹಾಗೂ
ಣಿಗೆಗೆ ಶ್ರೇಯಸ್ಕರವಲ್ಲ.

● ವೇಣುಗೋಪಾಲ್ ಬಿ.ಎನ್.

ಷ್ಟಿ ಅದರ ಜಾಗ ಮಾರಾಟವಾಗಿವೆ.
ಇಂತಹ ಸಂದರ್ಭದಲ್ಲಿ ತಕ್ಕಮಟ್ಟಿನ ನಂಬಿಕೆ
ಿಕೊಂಡಿದ್ದ ಸಮೃದ್ಧ ಜೀವನ ಸೊಸೈಟಿಯ ಮೇಲೂ
ಕಾರಣ ಆರೋಪ ಕೇಳಿ ಬಂದಿರೋದು ಜನರಲ್ಲಿ
ವಾಗಿಯೇ ಆತಂಕ ಮೂಡಿಸಿವೆ. ಆದರೆ ಸೊಸೈಟಿಯ
ತ ಮಂಡಳಿ ತಮ್ಮದು ಬೋಗಸ್ ಕಂಪನಿಯಲ್ಲ
ೀದನ್ನು ಸಾಬೀತು ಮಾಡಲು ದಾಖಲೆಗಳ ಸಮೇತ
ೀಸ್ ಠಾಣೆಗಳಿಗೆ ಅಲೆಯುತ್ತಿದ್ದಾರೆ. ಜೊತೆಗೆ, ತಮ್ಮದೇ
ಸೈಟ್ www.samruddhajeevan multi
esociety.com ನಲ್ಲಿ ಕೇಂದ್ರ ಸರ್ಕಾರದಿಂದ ಪಡೆದ
ಮತಿ ಪತ್ರ, ನೋಂದಣಿ, ಬೈಲಾಗಳು, ತಿದ್ದುಪಡಿಗಳು
ರಂತೆ ಸಮಗ್ರ ದಾಖಲೆಗಳನ್ನು ಅಪ್‌ಲೋಡ್ ಮಾಡಿ,
ಕರ ವಿಶ್ವಾಸವನ್ನು ಮರಳಿ ಗಳಿಸಲು ಹೆಣಗಾಡುತ್ತಿದ್ದಾರೆ.
ಜನರ. ಕೋಟ್ಯಂತರ ಹಣ ಆತಂಕದಲ್ಲಿರುವಂತಹ
ಒಂದು ಸಹಕಾರಿ ಸಂಸ್ಥೆಯ ಪ್ರಾಮಾಣಿಕತೆಯ
ುದಂತಹ ಸೂಕ್ಷ್ಮ ಸಂಗತಿಗಳನ್ನು ಆಳವಾಗಿ ಅರ್ಥ
ಕೊಂಡು ಪ್ರತಿಕ್ರಿಯಿಸಬೇಕಾದ ರಾಜಕಾರಣಿಗಳೂ
ತುಂಬಾ ಹಗುರ ಮಾತುಗಳಲ್ಲಿ ಜನರ ಗಾಬರಿಯನ್ನು
ಪ್ಪು ಹೆಚ್ಚಿಸುತ್ತಿದ್ದಾರೆ. ಇತ್ತೀಚೆಗೆ ಧಾರವಾಡ ಉಸ್ತುವಾರಿ
ವಿನಯ್ ಕುಲಕರ್ಣಿಯನ್ನು ಪತ್ರಕರ್ತರು ಸಮೃದ್ಧ
ನ ಸೊಸೈಟಿಯ ಗೊಂದಲದ ಕುರಿತು ಪ್ರಶ್ನಿಸಿದಾಗ
ೈಟಿ ವಿರುದ್ಧ ಸ್ವಯಂ ದೂರು ದಾಖಲಿಸುವಂತೆ
ೀಸ್ ಕಮೀಷನರ್‌ಗೆ ಹೇಳುತ್ತೇನೆ' ಎಂದು ಹೇಳಿದರೆ,
ಜೆಡಿಎಸ್‌ನ ಪರಿಷತ್ ಸದಸ್ಯ ಬಸವರಾಜ್ ಹೊರಟ್ಟಿ
ಒಂದು ಬೋಗಸ್ ಕಂಪನಿ' ಎಂಬ ತೀರ್ಪು ನೀಡುವ
ಲಕ ಜನರ ಆತಂಕವನ್ನು ಜಾಸ್ತಿ ಮಾಡಿಟ್ಟಿದ್ದಾರೆ.
ಕೊನೆಯದಾಗಿ ಒಂದು ಮಾತು, ಸಹಕಾರಿ ತತ್ವವನ್ನೇ
ಮಾನಿಸುವಂತಹ ಈ ಕಾಲಘಟ್ಟದಲ್ಲೂ 'ಸಮೃದ್ಧ
ನ' ಎಂಬ ನೋಂದಾಯಿತ ಕೋ ಆಪ್‌ರೇಟಿವ್
ಟಿಗೆ ಕರ್ನಾಟಕವೊಂದರಲ್ಲೇ 63 ಶಾಖೆಗಳ ಮೂಲಕ
ತರ ಜನ ಹಣ ಹೂಡಿದ್ದಾರೆ. ಅರ್ಧ ಲಕ್ಷದಷ್ಟು
ಏಜೆಂಟರಾಗಿ ಕೆಲಸ ಮಾಡುತ್ತಿದ್ದಾರೆ. ಇವರನ್ನೇ
ದ ಲಕ್ಷಾಂತರ ಬಡ ಕುಟುಂಬಗಳಿವೆ. ಇವರಿಗೆಲ್ಲಾ
ನೀರು ಬಡುವ ಕೆಲಸವನ್ನು ಸಂಸ್ಥೆ ಮಾಡಬಾರದು.
ಸಂದರ್ಭಗಳಲ್ಲಿ ತನ್ನ ಗ್ರಾಹಕರಲ್ಲಿ ಹಾಗೂ
ರಲ್ಲಿ ವಿಶ್ವಾಸ ಮೂಡಿಸುವ ಕೆಲಸ ಸಂಸ್ಥೆಯದ್ದು.

● ಹುಬ್ಬಳ್ಳಿಯಾಂವ

ಎಲ್ಲೋ ಹರಿದುಹೋದ ಗ್ರಾಮೀಣ ಜನರ ಕುಡಿಯುವ ನೀರು

ಚರಿತ್ರೆಯಲ್ಲಿ ಅನೇಕ ವ್ಯಕ್ತಿಗಳು ಬೇರೆ-ಬೇರೆ ಕಾರಣಗಳಿಗೆ ದಾಖಲಾಗುತ್ತಾರೆ. ಕೆಲವರು ಜನಪೀಡಕರೆಂಬ, ದುಷ್ಟರೆಂಬ ಕಾರಣಕ್ಕೆ ದಾಖಲಾಗುತ್ತಾರೆ. ಇನ್ನೂ ಕೆಲವರು ತಮ್ಮ ಜೀವನವನ್ನು ಸಮಾಜದ ಒಳಿತಿಗೆ ಮೀಸಲಿಟ್ಟು ದುಡಿದ ಕಾರಣಕ್ಕೆ ದಾಖಲಾಗುತ್ತಾರೆ. ಎರಡನೇ ಗುಂಪಿನಲ್ಲಿ ಹೆಚ್ಚಿನ ಹೆಸರುಗಳನ್ನು ಪಟ್ಟಿ ಮಾಡಲಾಗುವುದರಿಂದ ಸಮಾಜದ ಕುರಿತು ಭರವಸೆಗಳನ್ನು ಇಟ್ಟುಕೊಳ್ಳಬೇಕಾಗುತ್ತದೆ. ಕಳೆದ ನಲವತ್ತು ವರ್ಷಗಳ ಕರ್ನಾಟಕದ ಚರಿತ್ರೆಯಲ್ಲಿ ದಾಖಲಾದ ನಜೀರ್ ಸಾಬರ ದುಡಿಮೆ ಮೆಚ್ಚುವಂತದ್ದು. ಗ್ರಾಮ ಕರ್ನಾಟಕದ ನೀರಿನ ಬವಣೆ ಅರಿತಿದ್ದ 'ನೀರುಸಾಬರು' ಹಟತೊಟ್ಟ ಹಾಗೆ ಕುಡಿಯುವ ನೀರಿನ ಯೋಜನೆಗಳನ್ನು ಜಾರಿಗೆ ತರಲು ದುಡಿದರು. ಅದಕ್ಕೆ ಪೂರಕವೆಂಬಂತೆ ಮೂರು ಹಂತಗಳ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಬಲಗೊಳಿಸಲಾಯಿತು. ಇದರಿಂದ ಕುಡಿಯುವ ನೀರಿನ ಯೋಜನೆಗಳ ನಿರ್ವಹಣೆಯ ಹೊಣೆ ಸಹಜವಾಗಿಯೇ ಪಂಚಾಯತಿಗಳ ಮೇಲೆ ಬಿದ್ದಿತು. ಅದನ್ನು ಸವಾಲಾಗಿ ಸ್ವೀಕರಿಸಿದ ನಜೀರ್ ಸಾಬರು ದೇಶದ ಇತರ ರಾಜ್ಯಗಳಿಗೆ ಮಾದರಿಯಾಗುವಂತೆ ಕರ್ನಾಟಕವನ್ನು ಮುನ್ನಡೆಸಿದರು. ಕರ್ನಾಟಕದ ಉತ್ತಮ ಆಡಳಿತದ ಮಾದರಿಯನ್ನು ಆಧರಿಸಿ ಕೇಂದ್ರ ಸರ್ಕಾರವು ಸಂವಿಧಾನದ 73ನೇ ಕಲಮಿಗೆ ತಿದ್ದುಪಡಿ ತಂದಿತು.

ಹಳ್ಳಿಗಳಲ್ಲಿ ಬೊಗಸೆ ನೀರು, ಒಂದು ಬಿಂದಿಗೆ ನೀರಿಗೆ ದಿನವಿಡೀ ಕಷ್ಟಪಡಬೇಕಿದ್ದ ಹೆಂಗಸರ ಸ್ಥಿತಿಯನ್ನು ಅರಿತಿದ್ದ ನಜೀರ್ ಸಾಬರು ಅಂತಃಕರಣ ಪೂರಕವಾಗಿ ನಿವಾರಿಸಲು ಯತ್ನಿಸಿದರು. ಕುಡಿಯುವ ನೀರಿನ ಬಾವಿ, ಕೆರೆಗಳೆಲ್ಲ ನಿರ್ದಿಷ್ಟ ಸಮುದಾಯದ ಹಿಡಿತದಲ್ಲಿದ್ದ ಕಾರಣ ತೀವ್ರವಾದ ಜಾತಿ ತಾರತಮ್ಯಗಳು ಹೆಚ್ಚಿದ್ದವು. ಬೋರ್‌ವೆಲ್‌ಗಳ ಆಗಮನದಿಂದ ಇವು ಕಡಿಮೆಯಾದವು. ನಿಧಾನಕ್ಕೆ ಕಾಲನಿಗಳು ಕೂಡ ನೀರಿನ ಬವಣೆ ನೀಗಿಸಕೊಳ್ಳ ತೊಡಗಿದವು. ಕಾಂಗ್ರೆಸ್ಸೇತರ ಪ್ರಾದೇಶಿಕ ಪಕ್ಷದ ನೇತಾರರಾಗಿದ್ದ ಪಾದರಸದಂತಹ ವ್ಯಕ್ತಿಯಾಗಿದ್ದ ನಜೀರ್ ಸಾಬರ ದುಡಿಮೆಯಿಂದ ಇದು ಸಾಧ್ಯವಾಯಿತು. ಹಾಗಾಗಿ ಅವರನ್ನು ನೆನೆಯದಿರಲು ಸಾಧ್ಯವೇ ಇಲ್ಲ.

ಹುತ್ತ ಕಟ್ಟಿದ್ದು ಇರುವೆ, ಸೇರಿಕೊಂಡಿದ್ದು ಸರ್ಪ

ಅನ್ನ, ನೀರು, ಆರೋಗ್ಯ, ನ್ಯಾಯ ಮತ್ತು ಹಸಿರುಗಳ ವಿಚಾರದಲ್ಲಿ ಭ್ರಷ್ಟತೆ ಸ್ವಜನಪಕ್ಷಪಾತ ಸ್ವಾರ್ಥಗಳು ಎಡತಾಗಿದರೆ ಜತನದಿಂದ ಕಟ್ಟಿ ಬೆಳೆಸಿದ್ದ ವ್ಯವಸ್ಥೆ ಸರ್ವನಾಶವಾಗುತ್ತದೆ. ಅಂತಹ ಸರ್ವನಾಶದ ಸನ್ನಿವೇಶ ಪ್ರಸ್ತುತ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಆರಂಭಗೊಂಡಿದೆ. ಕಳೆದ ಮೂರು ದಶಕಗಳಲ್ಲಿ ಸ್ಥಳೀಯ ಸಂಸ್ಥೆಗಳಡಿ ಕೈಗೆತ್ತಿಕೊಳ್ಳಲಾದ ಅಭಿವೃದ್ಧಿ ಮತ್ತು ಮೂಲಸೌಕರ್ಯ ಯೋಜನೆಗಳು ಜನಪ್ರತಿನಿಧಿಗಳು, ಗುತ್ತಿಗೆದಾರರು, ಅಧಿಕಾರಶಾಹಿಯ ಒಳಒಪ್ಪಂದದಿಂದ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಹಳ್ಳ ಹಿಡಿದಿವೆ. ಇದಕ್ಕೆ ತಾಜಾ ಉದಾಹರಣೆ ಎಂದರೆ, ರಾಷ್ಟ್ರೀಯ ಗ್ರಾಮಾಂತರ ಕುಡಿಯುವ ನೀರಿನ ಯೋಜನೆ. ನಜೀರ್ ಸಾಬರಂತಹ ದಕ್ಷ ಮತ್ತು ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿ ದುಡಿದಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇಂದು ಉತ್ತರದಾಯಿತ್ವವಿಲ್ಲದ ಸಾಮಾಜಿಕ ಕಳಕಳಿಯಿಂದ ವಿಮುಖವಾಗಿ ಅವಸಾನದ ಹಾದಿ ಹಿಡಿದಿರುವ ಇಲಾಖೆಯಾಗಿದೆ. ಇದನ್ನು ರಿಪೇರಿ ಮಾಡಿ ಹಳ್ಳಿಗಳ ಜನರಿಗೆ ಶುದ್ಧ ನೀರು ಪೂರೈಸುವ ಕೆಲಸ ಅಸಾಧ್ಯದ ಕೆಲಸ ಎಂಬಂತಾಗಿದೆ.

ಸದ್ಯದ ಕುಡಿಯುವ ನೀರಿನ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡು ಸಮಾನ ಅನುಪಾತದಲ್ಲಿ ಅನುದಾನ ಒದಗಿಸುವುದರ ಜೊತೆಗೆ, ರಾಜ್ಯ ಸರ್ಕಾರವು ಬರ ನಿರ್ವಹಣೆ ಕಾಮಗಾರಿಗಳಡಿ ಕುಡಿಯುವ ನೀರಿನ ಯೋಜನೆಗಾಗಿ ಅನುದಾನ ನೀಡುತ್ತದೆ. ರಾಜ್ಯದಲ್ಲಿನ ಮೂವತ್ತು ಸಾವಿರ ಹಳ್ಳಿಗಳು ಸೇರಿದಂತೆ 59 ಗ್ರಾಮೀಣ ಜನವಸತಿಗಳಿಗೆ ಪ್ರತಿದಿನ ಪ್ರತಿ ವ್ಯಕ್ತಿಗೆ 55 ಲೀಟರ್ ಕುಡಿಯುವ ನೀರನ್ನು ಒದಗಿಸುವುದು ಸರ್ಕಾರದ ಕರ್ತವ್ಯವಾಗಿದೆ. ಇದನ್ನು ಕೊಳವೆ ಬಾವಿ, ಕಿರುನೀರು ಸರಬರಾಜು, ಕೈಪಂಪ್ ಮತ್ತು ಮಲ್ಟಿ ವಿಲೇಜ್ ಸ್ಕೀಮ್ ಮೂಲಕ ಒದಗಿಸಲಾಗುತ್ತಿದೆ. ಗುಣಮಟ್ಟದ ಕುಡಿಯುವ ನೀರನ್ನು ಒದಗಿಸುವ ಉದ್ದೇಶದಿಂದ ಕಳೆದ ಎರಡು ವರ್ಷಗಳಿಂದ ನೀರು ಶುದ್ಧೀಕರಣ ಘಟಕಗಳನ್ನು ಪ್ರಾರಂಭಿಸಿದ್ದು, ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಏಳು ಸಾವಿರ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸುವುದಾಗಿ ಘೋಷಿಸಲಾಗಿದೆ. ಕಳೆದ ವರ್ಷ ರಾಜ್ಯ ಸರಕಾರ ಗ್ರಾಮೀಣ ಕುಡಿಯುವ ನೀರಿನ ಉಸ್ತುವಾರಿಗೆ ಪ್ರತ್ಯೇಕ ಇಲಾಖೆಯನ್ನು ಸೃಷ್ಟಿಸಿ ಐಎಎಸ್ ವೃಂದದ ಅಧಿಕಾರಿಯನ್ನು ಆಯುಕ್ತರನ್ನಾಗಿ ನೇಮಿಸಲಾಗಿದೆ.

ಯಾವುದೇ ಸರಕಾರ ಅಥವಾ ಆಳುವ ವರ್ಗಕ್ಕೆ ಜನತೆಯ ಬಗೆಗೆ ಇರುವ ಕಾಳಜಿಯ ಸ್ವರೂಪದ ಬೆಳಕಿಗೆ ಬರುವುದು ಅವು ಸಮಾಜದ ಮೂಲಸೌಕರ್ಯಗಳಿಗೆ ಎಷ್ಟು ಗಮನ ನೀಡುತ್ತವೆ ಎಂಬುದರ ಆಧಾರದ ಮೇಲೆ ನಿರ್ಧಾರವಾಗುತ್ತದೆ. ಕಳೆದ ಆರು ವರ್ಷಗಳಲ್ಲಿ ಕುಡಿಯುವ ನೀರಿನ ಯೋಜನೆಯು ಎತ್ತ ಸಾಗಿದೆ? ಸರ್ಕಾರ ಯಾರಿಗಾಗಿ ಮತ್ತು ಯಾವ ದಿಕ್ಕಿನಲ್ಲಿ ಕೆಲಸ ನಿರ್ವಹಿಸುತ್ತಿದೆ ಎಂಬುದನ್ನು ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಇಲಾಖೆ ಪ್ರಗತಿಯ ವರದಿಗಳನ್ನು ನೋಡಿದರೆ ದುಃಸ್ವಪ್ನ ಬಿದ್ದಂತಾಗುತ್ತದೆ. ಹಳ್ಳಿಗರ ಬದುಕಿನ ಬವಣೆಯನ್ನು ಕಂಡು ಸಂಕಟವಾಗುತ್ತದೆ. ಸರ್ಕಾರದ ವೆಬ್‌ಸೈಟ್‌ನ ಅಂಕಿ-ಅಂಶಗಳಂತೆ 2009-10ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ 2.03 ಲಕ್ಷ ಜನವಸತಿಯ 824.27 ಗ್ರಾಮಾಂತರ ಪ್ರದೇಶದ ಜನರಿಗೆ ಕುಡಿಯುವ ನೀರು ಒದಗಿಸಲು ರೂ. 57,326.71 ಕೋಟಿ ಮೌಲ್ಯದ 3,76,706 ಕಾಮಗಾರಿಗಳ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ. ಇದರಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಕ್ರಮವಾಗಿ ರೂ. 6,957.33 ಮತ್ತು ರೂ. 6,486.77 ಕೋಟಿಗಳಾಗಿದೆ. ಇದುವರೆಗೆ ರೂ. 6,117.96 ಕೋಟಿ ವೆಚ್ಚ ಮಾಡಲಾಗಿದೆ. ವಾರ್ಷಿಕವಾರು ವಿವರ ಕೋಷ್ಟಕ-1 ರಲ್ಲಿ ತೋರಿಸಿದೆ. (ಕಾಮಗಾರಿಯ ಮೌಲ್ಯ ಕೋಟಿಗಳಲ್ಲಿ) 2009-10 ರಿಂದ ನವೆಂಬರ್ 2015ರವರೆಗೆ ಮುಂದುವರೆದ ಮತ್ತು ಸ್ಪಿಲ್ ಓವರ್ ಆದ 1,36,990 ಕಾಮಗಾರಿಗಳಿದ್ದು, ಇದರ ಮೊತ್ತ ರೂ. 33,186 ಕೋಟಿಗಳಾಗಿದ್ದು, ಕಾಮಗಾರಿಗಳಿನ್ನೂ ಮುಗಿದಿರುವುದಿಲ್ಲ.



ಲಭ್ಯ ಮಾಹಿತಿಯ ಪ್ರಕಾರ ಪ್ರಸಕ್ತ ಸಾಲಿನಲ್ಲಿ ತೆಗೆದುಕೊಳ್ಳಬೇಕಾದ ಕಾಮಗಾರಿಗಳ ಕ್ರಿಯಾಯೋಜನೆಯನ್ನು ಸರ್ಕಾರವಿನ್ನು ಅನುಮೋದಿಸಿಲ್ಲ, ಆದರೂ ಕೇಂದ್ರ ಸರ್ಕಾರದ ಕುಡಿಯುವ ನೀರು ಮತ್ತು ಶೌಚಾಲಯ ಹಾಗು ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಯೋಜನೆಯ ವೆಬ್‌ಸೈಟ್ ನಲ್ಲಿ ನವೆಂಬರ್ 2015ರವರೆಗೆ ಅಂಕಿ-ಅಂಶಗಳನ್ನು ಅಪ್‌ಡೇಟ್ ಮಾಡಿದ್ದು, ಅದರಂತೆ ಪ್ರಸಕ್ತ ಸಾಲಿನಲ್ಲಿ ರೂ. 4,345.87 ಕೋಟಿ ಮೌಲ್ಯದ 33,462 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದೆ.

ಕಳೆದ ಆರು ವರ್ಷಗಳಲ್ಲಿ ಸರ್ಕಾರದ ಅಧಿಕೃತ ಮಾಹಿತಿಯಂತೆಯೇ 1,69,098 ಕಾಮಗಾರಿಗಳನ್ನು ರೂ. 14,198.51 ಕೋಟಿ ಮೌಲ್ಯದ ಕಾಮಗಾರಿಗಳನ್ನು 1,14,564 ಜನವಸತಿ ಪ್ರದೇಶಗಳಲ್ಲಿ ಕೈಗೊಂಡಿದ್ದು, 3.74 ಕೋಟಿ ಗ್ರಾಮೀಣ ಜನರಿಗೆ ಕುಡಿಯುವ ನೀರನ್ನು ಒದಗಿಸಿದೆ. ಪೂರ್ಣ ವಿವರಗಳನ್ನು ಕೋಷ್ಟಕ-2 ರಲ್ಲಿ ತೋರಿಸಿದೆ.

ಮೇಲಿನ ಕೋಷ್ಟಕವನ್ನು ಪರಿಶೀಲಿಸಿದರೆ ಕಳೆದ ಆರು ವರ್ಷಗಳಲ್ಲೇ ಗ್ರಾಮೀಣ ಭಾಗದ 3.74 ಕೋಟಿ ಜನರಿಗೆ ಕುಡಿಯುವ ನೀರು ಸೌಕರ್ಯ ಒದಗಿಸಲಾಗಿದೆ. ಅಂದರೆ ಇದೇ ಪ್ರಥಮ ಬಾರಿಗೆ ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸಿದಂತೆ. ಕೋಷ್ಟಕದಲ್ಲಿನ ಮಾಹಿತಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಸಿಗುವ ನೈಜ ಚಿತ್ರಣವೇ ಬೇರೆ. ಸರ್ಕಾರ ಪ್ರಸಕ್ತ ಸಾಲಿನಲ್ಲಿ ಗ್ರಾಮೀಣ ಕುಡಿಯುವ ನೀರಿನ ಯೋಜನೆಗಾಗಿ ಬಜೆಟ್ಟಿನಲ್ಲಿ ರೂ. 1569.7 ಕೋಟಿ ಅನುದಾನ ಒದಗಿಸಿದ್ದು, ಪೂರ್ಣಗೊಂಡ ಕಾಮಗಾರಿಗಳ ಒಟ್ಟು ಮೊತ್ತ ರೂ. 14198.51 ಕೋಟಿಗಳಲ್ಲಿ ಇದುವರೆಗೂ ಪಾವತಿಸಿರುವುದು ಕೇವಲ ರೂ. 6117.99 ಕೋಟಿ ಮಾತ್ರ. ಇದರ ಜೊತೆಗೆ ಸ್ಪಿಲ್‌ಓವರ್ ಆಗಿ ಮುಂದುವರೆದ ಕಾಮಗಾರಿಗಳ ಮೊತ್ತ ರೂ. 33,186 ಕೋಟಿ ಮತ್ತು ಪ್ರಸಕ್ತ ಸಾಲಿನಲ್ಲಿ ತೆಗೆದುಕೊಂಡ ಕಾಮಗಾರಿಗಳ ಮೊತ್ತ ರೂ.4345.87 ಲಕ್ಷ ಕೂಡಿದರೆ ಕಳೆದ ಆರು ವರ್ಷಗಳಲ್ಲಿ ತೆಗೆದುಕೊಂಡ ಕಾಮಗಾರಿಗಳ ಮೊತ್ತ ರೂ. 45612.84 ಕೋಟಿಗಳು. ಅಂದರೆ ತೆಗೆದುಕೊಂಡಿರುವ ಕಾಮಗಾರಿಗಳನ್ನು ಮುಗಿಸಿದರೆ ಸರ್ಕಾರ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಿಲ್ಲಿನ ಮೊತ್ತ ರೂ. 45612.84 ಕೋಟಿಗಳು. ಅಕಸ್ಮಾತ್ ಅನುಮೋದನೆಯಾಗಿರುವ ಮೊತ್ತ ರೂ.57326.71 ಕೋಟಿ ಮೊತ್ತದ ಕಾಮಗಾರಿಗಳನ್ನು ಪರಿಗಣಿಸಿದರೆ ಸರ್ಕಾರ ಪಾವತಿಸಬೇಕಾದ ಬಾಕಿ ರೂ.51,208.74 ಕೋಟಿಗಳು.

ಸರ್ಕಾರದ ಪ್ರಸಕ್ತ ಸಾಲಿನ ಒಟ್ಟಾರೆ ಆಯವ್ಯಯದ ಮೊತ್ತ 1.4 ಲಕ್ಷ ಕೋಟಿ ಇದ್ದು, ಕುಡಿಯುವ ನೀರಿನ ಬಾಕಿಯೇ ಆಯವ್ಯಯದ ಶೇ.31ರಷ್ಟಾಗುತ್ತದೆ. ಆದರೆ ಇದು ವಾಸ್ತವವಲ್ಲ, ಸಾರ್ವಜನಿಕರಿಗೆ ಜನಪ್ರತಿನಿಧಿಗಳು ಮತ್ತು ಸರ್ಕಾರ ಕುಡಿಯುವ ನೀರಿನ ಯೋಜನೆಯ ಕ್ರಿಯಾಯೋಜನೆ ಅನುಮೋದಿಸಿ ಕಾಮಗಾರಿ ಕೈಗೆತ್ತಿಕೊಂಡಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಇಷ್ಟೊಂದು ಮೌಲ್ಯದ ಕಾಮಗಾರಿ ನಿರ್ವಹಿಸಿ ಬಿಲ್ ಪಡೆಯದೇ ಗುತ್ತಿಗೆದಾರರು ಸುಮ್ಮನಿದ್ದಾರೆಂದರೆ ಒಂದು ಕೆಲಸ ನಿರ್ವಹಿಸಿಲ್ಲ, ಬೋಗಸ್ ಬಿಲ್ ಬರೆಯಲಾಗಿದೆ ಅಥವಾ ಕ್ರಿಯಾಯೋಜನೆಗಳನ್ನು ಮಾತ್ರ ಅನುಮೋದಿಸಿ ಸರ್ಕಾರದ ವೆಬ್‌ಸೈಟ್‌ನಲ್ಲಿ ಅಂಕಿಅಂಶಗಳನ್ನು ಮಾತ್ರ ಹಾಕಿ ಜನತೆಗೆ ಮಕಮಲ್ ಟೋಪಿ ಹಾಕಿದಂತಿದೆ. ಇದೊಂದು ರೀತಿ ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆಯಂತೆ.

ಮುಗಿದಿದೆ ಎನ್ನಲಾದ ರೂ.14198.53 ಮೊತ್ತದ ಕಾಮಗಾರಿಗಳನ್ನು 4 ಕೋಟಿ ಗ್ರಾಮಾಂತರ ಜನರಿಗೆ ಮತ್ತು 5267 ಗ್ರಾಮಪಂಚಾಯತಿಗಳಿಗೆ ಹಂಚಿಕೆ ಮಾಡಿದರೆ ಸರಾಸರಿ ಪ್ರತಿ ವ್ಯಕ್ತಿ ಮತ್ತು ಪ್ರತಿ ಪಂಚಾಯತಿಗಳಿಗೆ ರೂ.3550/- ಮತ್ತು ರೂ.2.52 ಕೋಟಿ ಆಗುತ್ತದೆ. ಇದುವರೆಗೆ ಅನುಮೋದನೆಯಾಗಿರುವ ಕಾಮಗಾರಿಗಳ ಮೊತ್ತ ರೂ.57326.71 ಕೋಟಿಗಳನ್ನು ಪರಿಗಣಿಸಿದರೆ ಸರಾಸರಿ ಪ್ರತಿ ವ್ಯಕ್ತಿ ಮತ್ತು ಪಂಚಾಯತಿಗಳಿಗೆ ರೂ.14,332/- ಮತ್ತು ರೂ.10.19 ಕೋಟಿ ಆಗುತ್ತದೆ. ಈ ಅಂಕಿ-ಅಂಶಗಳನ್ನು ನೋಡಿದರೆ ರಾಜ್ಯದ ಎಲ್ಲ ಮೂವತ್ತು ಸಾವಿರ ಹಳ್ಳಿಗಳು ಸೇರಿದಂತೆ ಐವತ್ತೊಂಭತ್ತು ಸಾವಿರ ಜನವಸತಿ ಪ್ರದೇಶಗಳಿಗೆ ರಾಜ್ಯದ ನದಿಗಳಿಂದ ಪೈಪುಗಳ ಮೂಲಕ ಕುಡಿಯುವ ನೀರನ್ನು ಒದಗಿಸಬಹುದಿತ್ತು, ಆದರೆ ಹಣ ಮತ್ತು ಗ್ರಾಮೀಣ ಕುಡಿಯುವ ನೀರು ಎಲ್ಲೋ ಹರಿದಿದೆ. ಹರಿದ ನೀರಿನ ಹರವುವನ್ನು ಪತ್ತೆ ಹಚ್ಚುವುದು ಯಾರು? ದೇಶಕ್ಕೆ ಮಾದರಿಯಾಗಿದ್ದ ರಾಜ್ಯದ ಪಂಚಾಯತ್ ರಾಜ್ ಇಲಾಖೆ ಈಗ ಹಗರಣಗಳ ಗೂಡಾಗಿದೆ.

ಈ ಎಲ್ಲ ಸಮಸ್ಯೆಗಳಿಗೆ ಕಾರಣವೇನೆಂದರೆ, ಅಧಿಕಾರದಲ್ಲಿರುವ ಪಕ್ಷ ತನ್ನ ಕಾರ್ಯಕರ್ತರಿಗೆ ಮತ್ತು ಗುತ್ತಿಗೆದಾರರಿಗೆ ಹಣ ದೋಚಲು ಅನುವಾಗುವಂತೆ ಅವಶ್ಯಕತೆ ಇಲ್ಲದಿದ್ದರೂ ಕಾಮಗಾರಿ ಕೈಗೆತ್ತಿಕೊಳ್ಳುವುದು, ಆಯವ್ಯಯದಲ್ಲಿ ಅನುದಾನವಿಲ್ಲದಿದ್ದರೂ ಕ್ರಿಯಾಯೋಜನೆ ಅನುಮೋದಿಸುವ ಬಹುಪರಾಕ್ ಮತ್ತು ಭಟ್ಟಂಗಿ ಅಧಿಕಾರಶಾಹಿ, ಎಲ್ಲದರಲ್ಲೂ ಸಿಕ್ಕಿದಷ್ಟೂ ದೋಚುವ ಕಾಯಕ ಪ್ರಯತ್ನದಲ್ಲಿರುವ ರಾಜಕಾರಣಿ, ಗುತ್ತಿಗೆದಾರ ಮತ್ತು ಅಧಿಕಾರಶಾಹಿಗಳೆಂಬ ತ್ರಿಮೂರ್ತಿಗಳು, ವ್ಯಾಪಾರೀಕರಣಗೊಂಡ ರಾಜಕಾರಣ, ತಮ್ಮ ಅವಧಿಯಲ್ಲಿ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಕಾರ್ಯಕೈಗೊಂಡಿದ್ದೇನೆಂದು ಬಡಾಯಿ ಕೊಚ್ಚಿಕೊಳ್ಳುವ ಜನಪ್ರತಿನಿಧಿಗಳು ಹಾಗೂ ರಾಜಕೀಯ ಸಂಕಲ್ಪ ಮತ್ತು ಸಮಗ್ರ ಯೋಜನೆ ಪರಿಕಲ್ಪನೆ ಇಲ್ಲದ ಪ್ರಭುತ್ವ.

ಸಮಸ್ಯೆ ಗೂಡಾಗಿರುವ ಭ್ರಷ್ಟಾಚಾರವೇ ನಿತ್ಯಕಾಯಕವಾಗಿರುವ ಗ್ರಾಮೀಣ ಕುಡಿಯುವ ನೀರಿನ ಯೋಜನೆಯನ್ನು ಸರಿದಾರಿಗೆ ತರಬೇಕೆಂದರೆ ಅವಶ್ಯವಿರುವ ಕಾಮಗಾರಿಗಳ ಮುಂದುವರಿಕೆ, ಅನಗತ್ಯವಾದುದನ್ನು ಕೈಬಿಡುವುದು, ಯೋಜನೆಯ ಒಟ್ಟಾರೆ ಪರಾಮರ್ಶೆ, ಸಾಮಾಜಿಕ ಕಳಕಳಿ ಮತ್ತು ನಿಷ್ಠ ಅಧಿಕಾರಿಗಳ ನೇಮಕ ತುರ್ತಾಗಿ ಆಗಬೇಕಾಗಿದೆ.


ಕುಡಿಯುವ ನೀರಿನ ಯೋಜನೆಯ ರೂ.950 ಕೋಟಿ ಹಣವನ್ನು ಖಾಸಗಿ ಖಾತೆಗಳಲ್ಲಿ ಠೇವಣಿ ಮಾಡಲಾಗಿದೆ ಎಂದು ಐ.ಎಫ್.ಎಸ್. ಅಧಿಕಾರಿ ಪುನಾತಿ ಶ್ರೀಧರ ಅವರ ನೇತೃತ್ವದ ಸಮಿತಿ ಆಂತರಿಕ ತನಿಖೆ ಮಾಡಿ ವರದಿ ಸಲ್ಲಿಸಿದ ನಂತರವೂ 110 ಅಕೌಂಟ್‌ಗಳಲ್ಲಿ 495 ಕೋಟಿ ಠೇವಣಿ ಹಣ ಪತ್ತೆಯಾಗಿದೆ. ಸರ್ಕಾರ ಇದರಲ್ಲಿ ಒಬ್ಬ ಅಕೌಂಟೆಂಟ್ ಅನ್ನು ಅಮಾನತ್ತು ಮಾಡಿ ಕ್ರಿಮಿನಲ್ ಪ್ರಕರಣ ದಾಖಲಿಸಿದೆ.

ಅಂದರೆ ಒಬ್ಬ ಅಕೌಂಟೆಂಟ್ ಸರ್ಕಾರದ ನೂರಾರು ಕೋಟಿ ಹಣವನ್ನು ಖಾಸಗಿಯಾಗಿ ಠೇವಣಿ ಮಾಡುತ್ತಾನೆಂದರೆ, ಕಾರ್ಯದರ್ಶಿ ಮತ್ತು ಮೇಲ್ದರ್ಜೆಯ ಅಧಿಕಾರಿಗಳು ನಿದ್ದೆ ಮಾಡುತ್ತಿದ್ದೀರಬಹುದು. ಖಾಸಗಿಯಾಗಿ ಠೇವಣಿ ಇಟ್ಟಿರುವ ಹಣವನ್ನು ಪತ್ತೆ ಹಚ್ಚಲಾಗದ ಸರ್ಕಾರಕ್ಕೆ ಕುಡಿಯುವ ನೀರಿನ ಹೆಸರಿನಲ್ಲಿ ಹರಿದುಹೋಗಿರುವ ಸಾವಿರಾರು ಕೋಟಿ ಹಣವನ್ನು ಹುಡುಕುವ ಮತ್ತು ಉತ್ತರದಾಯಿತ್ವವನ್ನು ಸರ್ಕಾರದಿಂದ ನಿರೀಕ್ಷಿಸುವುದು ನಮ್ಮ ಮೂರ್ಖತನದ ಪರಮಾವಧಿ. ತತ್ವಹೀನ ರಾಜಕಾರಣ ಮತ್ತು ಆತ್ಮಹೀನ ಆಡಳಿತಶಾಹಿ ಗಳಿಂದ ಜನತೆ ಏನೆಲ್ಲ ನಿರೀಕ್ಷಿಸಬಹುದು. ಕಾಲವೇ ಉತ್ತರಿಸಬೇಕು.

● ಚಿರಂತನ್.ಸಿ



ಹೆಬ್ಬಾಳದ ಬೇಗುದಿ


ಜಾಫರ್ ಷರೀಫ್

ತನ್ನ ಪಾಲಿನ ಯಾಗದ ಕುದುರೆಯಂತೆ ಭೈರತಿ ಸುರೇಶ್ ಎಂಬ ಚಾಲಾಕಿಗೆ ಹೆಬ್ಬಾಳದ 'ಬಿ' ಫಾರಂ ಕೊಡಿಸಿಯೇ ತೀರುತ್ತೇನೆಂಬ ಮುಖ್ಯಮಂತ್ರಿ ಸಿದ್ದರಾಮಯ್ಯನವರ ದೂರದೃಷ್ಟಿಗೆ ಹೈಕಮಾಂಡ್ ಮನ್ನಣೆ ಸಿಗಲೇ ಇಲ್ಲ. ಜನವರಿ 26ರ ಗಣರಾಜ್ಯೋತ್ಸವದ ಗಡಿಬಡಿಯ ನಡುವೆಯೂ ಸೋನಿಯಾ ಮೇಡಂರ ಆಪ್ತ ಕಾರ್ಯದರ್ಶಿ ಅಹ್ಮದ್ ಪಟೇಲ್ ಜೊತೆ ಮಂಗಳವಾರದ ಸಂಜೆ ಕೊನೆಯ ಯತ್ನವೆಂಬಂತೆ ಮಾತಾಡಿದ್ದೂ ಆಯಿತು. ಅದಕ್ಕೂ ಮುನ್ನ ರಾಜ್ಯದ ಉಸ್ತುವಾರಿ ಹೊತ್ತ ದಿಗ್ವಿಜಯ್ ಸಿಂಗ್ ಜೊತೆ ಬರೋಬ್ಬರಿ ಅರ್ಧ ಗಂಟೆಗಳ ಕಾಲ ತನ್ನೆಲ್ಲಾ ರಣತಂತ್ರವನ್ನು ವಿವರಿಸಿದ್ದೂ ಆಗಿತ್ತು. ಊಹ್ಞೂಂ; ಏನೆಲ್ಲಾ ವಿವರಣೆ, ಚೌಕಾಸಿಯ ಹೊರತಾಗಿಯೂ ಹೈಕಮಾಂಡ್ ಒಲಿದದ್ದು ಜಾಫರ್ ಷರೀಫ್ ಮೊಮ್ಮಗನಿಗೆ!

ಭೈರತಿಗೆ 'ಬಿ' ಫಾರಂ ತಪ್ಪಿತೆಂಬ ಒಂದೇ ಕಾರಣಕ್ಕೆ 'ಇದು ಮುಖ್ಯಮಂತ್ರಿಗಾದ ಹಿನ್ನಡೆ'ಯೆಂಬಂತೆ ಮರುದಿನದ ಪತ್ರಿಕೆಗಳಲ್ಲಿ ತಲೆಬರಹಗಳು ವಿಜೃಂಭಿಸಿದವು. ಖರ್ಗೆ ಕೈ ಮೇಲಾಯಿತೆಂದೂ, ಕುರುಬರ ಜಾತಿ ಆಧಿಪತ್ಯಕ್ಕಿದು ದೊಡ್ಡ ಪೆಟ್ಟೆಂದೂ, ಸಿದ್ದು ವಿರೋಧಿಗಳ ಮುನ್ನಡೆಯೆಂದೂ ತಲೆಗೊಂದರಂತೆ ವಿಮರ್ಶೆ, ವಿಶ್ಲೇಷಣೆಗಳೂ ತೇಲಾಡುತ್ತಿವೆ. ಪ್ರಶ್ನೆಯೆಂದರೆ; ತನ್ನ ಪರಮಾಪ್ತ ಮಾಗಡಿ ರೇವಣ್ಣನವರನ್ನೂ ಕೈಬಿಟ್ಟು ರಾಜ್ಯ ಕಾಂಗ್ರೆಸ್ಸಿನ ಅಧಿನಾಯಕರಲ್ಲೊಬ್ಬರಾದ ಜಾಫರ್ ಷರೀಫ್ ಸಾಹೇಬರ ಒತ್ತಾಸೆಯನ್ನೂ ಬದಿಗೊತ್ತಿ ನಿನ್ನೆಮೊನ್ನೆಯಷ್ಟೇ ಕಾಂಗ್ರೆಸ್ಸಿಗೆ ಕಾಲಿಟ್ಟ ಭೈರತಿ ಸುರೇಶ್ ಎಂಬ ಪಡ್ಡೆ ಹುಡುಗನ ಪರವಾಗಿ ಸಿದ್ದು ತನ್ನದೇ ಪಕ್ಷದ ಘಟಾನುಘಟಿಗಳನ್ನೂ ಲೆಕ್ಕಿಸದ ಹಂತಕ್ಕೆ ಬಂದಿದ್ದಾದರೂ ಏಕೆ?

ಅದು ಹೆಬ್ಬಾಳದ ಬೇಗುದಿ. ಬೀದರ್, ದೇವದುರ್ಗ ಸೇರಿದಂತೆ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯೇನೋ ಒಟ್ಟೊಟ್ಟಿಗೆ ಕೂಡಿ ಬಂದಿದೆಯಾದರೂ ಹೆಬ್ಬಾಳದ ವೈಶಿಷ್ಟ್ಯವೇ ಬೇರೆ. ರಾಜಧಾನಿ ಬೆಂಗಳೂರಿನ 28 ಕ್ಷೇತ್ರಗಳ ಪೈಕಿ ಬಿಜೆಪಿ ಪಾಲಿಗೆ ಅತೀದೊಡ್ಡ ತಲೆನೋವಾಗಿ ಪರಿಣಮಿಸಿದ್ದು ಹೆಬ್ಬಾಳವೆ. ಈ ಹಿಂದೆ ಯಲಹಂಕದಲ್ಲಿದ್ದ ಹೆಬ್ಬಾಳ 2008 ರಲ್ಲಿ ಪ್ರತ್ಯೇಕ ವಿಧಾನಸಭಾ ಕ್ಷೇತ್ರವಾದಾಗ ಅಲ್ಲಿಂದ ಮೊದಲ ಬಾರಿ ಗೆದ್ದಿದ್ದು ಬಿಜೆಪಿಯ ಕಟ್ಟಾನಾಯ್ಡು.

ಕಮಲ ಸೂತಕ

ಅದೇನು ಗ್ರಾಚಾರವ್ರೋ; ಗೆದ್ದ ಶುರುವಿನಲ್ಲೇ ಕಟ್ಟಾ ಮಂತ್ರಿಯಾಗಿದ್ದೂ ಅಲ್ಲದೆ ಜೈಲುಪಾಲಾಗಿ ಅದೇ ಕಾರಣಕ್ಕೆ ಮಂತ್ರಿಗಿರಿಯನ್ನೂ ಕಳಕೊಂಡ. ಇನ್ನು ಬಿಜೆಪಿಗೆ ಟಿಕೆಟ್ ಕೊಡಲು ತಾನೇ ಮುಖವೆಲ್ಲಿತ್ತು. ಕಟ್ಟಾ ತನ್ನ ಮನೆಕೆಲಸದ ಆಳಿನಂತಿದ್ದ ತನ್ನೆಲ್ಲಾ ಅಕ್ರಮಗಳ ಆಡಿಟರ್ ಜಗದೀಶ್‌ಕುಮಾರ್‌ಗೆ ಬಿಜೆಪಿ ಟಿಕೆಟ್ ಕೊಡಿಸಿ ಗೆಲ್ಲಿಸಿಕೊಂಡ. ಮಾಡಿದ ಪಾಪ


ಭೈರತಿ ಸುರೇಶ್

ಕಾಡದೇ ಬಿಡದೆಂಬಂತೆ ಜಗದೀಶ್ ಕೂಡ ಅಕಾಲಮೃತ್ಯುವಿಗೀಡಾದರು. ಅಲ್ಲಿಗೆ ಹೆಬ್ಬಾಳದಿಂದ ಯಾರ್‍ಯಾರು ಬಿಜೆಪಿಯಿಂದ ಗೆಲ್ಲುತ್ತಾರೋ ಅವರೆಲ್ಲರಿಗೂ ಒಂದಲ್ಲ ಒಂದು 'ವಕ್ರ' ಎಂಬ ಮೌಢ್ಯವೊಂದು ತನ್ನಿಂತಾನೇ ಚಾಲ್ತಿಗೆ ಬಂದಿತ್ತು. ಈ ಬಾರಿ ಕಟ್ಟಾನೇ ಮತ್ತೆ ಕಣಕ್ಕಿಳಿಯುತ್ತಾನೆಂಬ ಲೆಕ್ಕಾಚಾರ ಒಂದೆಡೆಯಾದರೆ ಅದಕ್ಕೆ ನಿಷ್ಕ್ರಿಯ ಬೆಂಬಲವೆಂಬಂತೆ ಜೆಡಿಎಸ್ ಪ್ರಭಾವೀ ಮುಸ್ಲಿಂ ಅಭ್ಯರ್ಥಿಯೊಬ್ಬನನ್ನು ಹಾಕುವ ಮೂಲಕ ಪರೋಕ್ಷವಾಗಿ ಬಿಜೆಪಿಗೆ ನೆರವಾಗಬಹುದೆಂಬ ವಾಸನೆಯೂ ಇತ್ತು.


ಕಟ್ಟಾ ನಾಯ್ಡು


ಕಳೆದ ಬಾರಿ ನಡೆದದ್ದೂ ಇದೇ ತಾನೆ? ಜಾಫರ್ ಷರೀಫರ ಮೊಮ್ಮಗ ರೆಹಮಾನ್ ಷರೀಫ್ ಗೆಲ್ಲುವ ಎಲ್ಲ ಲಕ್ಷಣಗಳೂ ನಿಚ್ಚಳವಾಗಿತ್ತು. ಅಡ್ಡಗಾಲಾಗಿದ್ದು ಜೆಡಿಎಸ್. ದೇವೇಗೌಡರ ಅಶ್ವಮೇಧದ ಕುದುರೆಯೆಂಬಂತೆ ಭಾರೀ ಅಬ್ಬರದಲ್ಲೇ ಅಖಾಡಕ್ಕಿಳಿದ ಅಬ್ದುಲ್ ಅಜೀಮ್ ಬರೋಬ್ಬರಿ 23 ಸಾವಿರದಷ್ಟು ಮುಸ್ಲಿಂ ಓಟುಗಳನ್ನು ಕಿತ್ತುಬಿಟ್ಟರು. ರೆಹಮಾನ್ ಷರೀಫ್ ಗಿಟ್ಟಿಸಿದ್ದು ಮೂವತ್ತು ಸಾವಿರ ಚಿಲ್ಲರೆಯಷ್ಟನ್ನು. 36,284 ಮತಗಳನ್ನು ಬಾಚಿದ ಬಿಜೆಪಿಯ ಜಗದೀಶ್ ಕುಮಾರ್ ಐದು ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದುಬಿಟ್ಟರು. ಅದು ಭೀಷ್ಮ ಜಾಫರ್ ಷರೀಫ್ ಸಾಹೇಬರಿಗೆ ರಾಜಕೀಯವಾಗಿ ಬಿದ್ದ ದೊಡ್ಡ ಪೆಟ್ಟು.

ಕೇವಲ ಅಬ್ದುಲ್ ಅಜೀಂ ಸ್ಪರ್ಧೆಯಷ್ಟೇ ಅಲ್ಲ; ಸದ್ಯ ಸಿದ್ದು ಸಂಪುಟದ ಪ್ರಭಾವಿ ಮುಸ್ಲಿಂ ಮಂತ್ರಿಯೊಬ್ಬರಿಂದ ಹಿಡಿದು ರೆಹಮಾನ್ ಖಾನ್, ನಜೀರ್ ಅಹ್ಮದ್, ಸಲೀಂ ಅಹ್ಮದ್ ಸೇರಿದಂತೆ ರಾಜ್ಯ ಕಾಂಗ್ರೆಸ್‌ನ ಬಹುತೇಕ ಮುಸ್ಲಿಂ ನಾಯಕರಿಗೂ ಷರೀಫ್ ಸಾಹೇಬರಿಗೂ ಅಷ್ಟಕ್ಕಷ್ಟೆಯೆ. ಇದರ ಪರಿಣಾಮವನ್ನು ಸೂಕ್ಷ್ಮವಾಗೇ ಲೆಕ್ಕ ಹಾಕಿದ ಸಿಎಂ ಸಿದ್ದು ಈ ಬಾರಿ ಹಿಂದೂ ಅಭ್ಯರ್ಥಿಯೊಬ್ಬನನ್ನು ಇಳಿಸಿದರಷ್ಟೇ ಬಿಜೆಪಿಗೆ ಪೆಟ್ಟು ಕೊಡಬಹುದೆಂಬ ನಿರ್ಧಾರಕ್ಕೆ ಬಂದಿದ್ದಕ್ಕೂ ಮತ್ತೊಂದು ಕಾರಣವಿತ್ತು.

ಚಾಲಾಕಿ ಭೈರತಿ

ಹೆಬ್ಬಾಳ ಬೆಂಗಳೂರಿನ ಅತೀ ಸೂಕ್ಷ್ಮ ಕ್ಷೇತ್ರಗಳಲ್ಲೊಂದು. ರಾಜಧಾನಿಯ ಒಟ್ಟು 28 ಕ್ಷೇತ್ರಗಳ ಪೈಕಿ ಜೆಡಿಎಸ್‌ನ ಮೂರು ಕ್ಷೇತ್ರಗಳನ್ನು ಹೊರತುಪಡಿಸಿದರೆ ಕಾಂಗ್ರೆಸ್ ಮತ್ತು ಬಿಜೆಪಿ ತಲಾ 12 ಕ್ಷೇತ್ರಗಳಲ್ಲಿ ಸರಿಸಮವಾದ ಬಲಾಬಲದಲ್ಲಿವೆ. ಈಗ ಹೆಬ್ಬಾಳವನ್ನು ಗೆದ್ದರೆ ಸಹಜವಾಗೇ ಕಾಂಗ್ರೆಸ್ ಕೈಮೇಲಾಗುತ್ತದೆ. ಅಧಿಕಾರದಲ್ಲಿದ್ದಾಗಲೂ ಗೆಲ್ಲದೆ ಹೋದರೆ ಮತ್ತೆಂದೂ ಹೆಬ್ಬಾಳ ದಕ್ಕುವುದು ಕಷ್ಟವೆ. ಹಾಗೊಮ್ಮೆ ಹೆಬ್ಬಾಳದಲ್ಲೇನಾದರೂ ಕಾಂಗ್ರೆಸ್ ಸೋತಿತೆಂದರೆ ಅದು ಮುಖ್ಯಮಂತ್ರಿಯ ಪಾಲಿಗೆ ಜನಪ್ರಿಯತೆಯ ಪ್ರಶ್ನೆಯೆ. ಇಂಥಾ ಸ್ಥಿತಿಯಲ್ಲಿ ಮತ್ತೆ ಮುಸ್ಲಿಂ ಅಭ್ಯರ್ಥಿಯನ್ನೇ ಹಾಕಿಬಿಟ್ಟರೆ ಫಲಿತಾಂಶ ಕಳೆದ ಚುನಾವಣೆಗಿಂತ ಭಿನ್ನವಾಗೇನೂ ಇರುವುದಿಲ್ಲ. ಏಕೆಂದರೆ ಮುಸ್ಲಿಂ ಅಭ್ಯರ್ಥಿಯ ವಿರುದ್ಧ ಹಿಂದೂ ಮತಗಳ ಧ್ರುವೀಕರಣಕ್ಕೆ ತಾವೇ ಕಲ್ಪಿಸಿದಂತಾದರೂ ಕಷ್ಟವೇ.

ಈ ಎಲ್ಲಾ ಲೆಕ್ಕ ಹಾಕಿಯೇ ಜಾಫರ್ ಷರೀಫ್ ಮೊಮ್ಮಗನನ್ನು ಹಾಕಲು ಸಿದ್ದು ಹಿಂದೇಟು ಹಾಕಿದ್ದು. ಆಗ ಕೇಳಿಬಂದಿದ್ದೇ ಭೈರತಿ ಸುರೇಶ್ ಎಂಬ ಚಾಲಾಕಿ ಹೆಸರು. ಯಾವುದೇ ಪಕ್ಷ, ಫಂಡು, ಗಾಡ್‌ಫಾದರ್‌ಗಳಿಲ್ಲದೆ ತನ್ನ ದುಡ್ಡಿನ ತಾಕತ್ತೊಂದರ


ಹೆಬ್ಬಾಳ ಫ್ಲೈಓವರ್-ಕೆರೆ





ರೆಹಮಾನ್ ಷರೀಫ್

ಹಠಕ್ಕೆ ಬೀಳಲು ಸಿಎಂ ಏನು ಚಿಕ್ಕ ಮಗುವಾ?

ಅಲ್ರೀ ರಾಜ್ಯದ ಮುಖ್ಯಮಂತ್ರಿಯೊಬ್ಬ ಯಾವುದೋ ಒಂದು ಕ್ಷೇತ್ರಕ್ಕಾಗಿ ಚಿಕ್ಕಮಕ್ಕಳಂತೆ ಹಠಹಿಡಿಯುತ್ತಾರೆಂದರೆ ನಂಬುತ್ತೀರಾ? ನಾನೂ ಹೆಬ್ಬಾಳದ ಟಿಕೆಟ್ ಆಕಾಂಕ್ಷಿಯಾಗಿದ್ದೆ ನಿಜ. ಟಿಕೆಟ್ ಸಿಗಲಿಲ್ಲ ಅಂತ ಮುನಿಸಿಕೊಳ್ಳೋಕ್ಕಾಗುತ್ತಾ? ಹೇಗೂ ನನ್ನ ಎಮ್ಮೆಲ್ಸಿಗಿರಿ ಇದ್ದೇ ಇದೆ. ಅದೇ ರೀತಿ ಭೈರತಿ ಸುರೇಶ್ ಕೂಡ ಎಮ್ಮೆಲ್ಸಿಯಾಗಿದ್ದಾರೆ. ಒಂದು ಚುನಾವಣೆ ಅಂದ ಮೇಲೆ ಟಿಕೆಟ್ ಕೇಳಲು ಪ್ರತಿಯೊಬ್ಬರಿಗೂ ಹಕ್ಕಿದೆ. ಅದೇ ರೀತಿ ಮುಖ್ಯಮಂತ್ರಿಗಳಿಗೆ ಅವರದ್ದೇ ಲೆಕ್ಕಾಚಾರವಿರಬಹುದು. ಹಾಗೆಯೇ ಪಕ್ಷಕ್ಕೂ ತನ್ನದೇ ಕಾರ್ಯತಂತ್ರವಿರುತ್ತೆ ಅಲ್ವಾ?

ಇಲ್ಲಿ ಯಾರ ಕೈ ಮೇಲಾಯಿತು ಕೆಳಗಾಯಿತು ಎಂಬ ಪ್ರಶ್ನೆಯೇ ಹಾಸ್ಯಾಸ್ಪದ. ಹೈಕಮಾಂಡ್ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿದ್ದೇವೆ. ಎಲ್ಲರೂ ಸೇರಿಕೊಂಡೇ ರೆಹಮಾನ್ ಷರೀಫ್‌ರನ್ನು ಗೆಲ್ಲಿಸುತ್ತೇವೆ. ಒಂದು ಕ್ಷೇತ್ರದ ಉಪಚುನಾವಣೆಗೋಸ್ಕರ ಹಠಕ್ಕೆ ಬೀಳುವಷ್ಟು ಸಣ್ಣ ವ್ಯಕ್ತಿಯಂತೂ ಸಿದ್ದರಾಮಯ್ಯನವರಲ್ಲ. ಯಾರಾದರೂ ಹಾಗೆಂದುಕೊಂಡು ಖುಷಿಪಡುವುದಾದರೆ ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

– ಎಚ್.ಎಂ. ರೇವಣ್ಣ



...ದ ಮೇಲೆಯೇ ವಿಧಾನ ಪರಿಷತ್ತಿಗೆ ಗೆದ್ದುಬಂದ ... ಸುರೇಶ್ ಬೆನ್ನಿಗಿರುವುದು ಕೆ.ಆರ್. ಪುರಂನ ... ಭೈರತಿ ಬಸವರಾಜು ಮತ್ತು ...ಕೋಟೆಯ ಎಂಟಿಬಿ ನಾಗರಾಜು. ಸದ್ಯ ...ರಿನ ಮಟ್ಟಿಗೆ 'ಕುರುಬರ ಕೂಟ' ಎಂದೇ ...ಲ್ಲಿರುವ 'ಭೈರತಿ' ದಳದ ಪ್ರಾಬಲ್ಯದ ...ವೆಂಬಂತೆ ಹೆಬ್ಬಾಳವನ್ನು ಅಷ್ಟು ಸುಲಭಕ್ಕೆ ...ಗೆ ಬಿಟ್ಟುಕೊಡಲಾರರೆಂಬ ನಿರೀಕ್ಷೆಯಿಟ್ಟೇ ಸಿದ್ದು ... ಬೆನ್ನಿಗೆ ನಿಂತಿದ್ದು.

...ದರ ಹೊರತಾಗಿ ಬೇರೆ ದಾರಿಯಾದರೂ ...? ರಾಜಧಾನಿಯ ಕ್ಷೇತ್ರವೊಂದನ್ನು ...ರದಲ್ಲಿದ್ದಾಗಲೂ ಗೆಲ್ಲಲಾಗದೇ ಹೋದರೆ ...ಮಂತ್ರಿಗದು ಮುಖಭಂಗವೆ. ಪಕ್ಷಕ್ಕೆ ಹಣಕಾಸಿನ ...ಯೂ ತಪ್ಪುತ್ತದೆ. ಜೆಡಿಎಸ್‌ನಿಂದ ಮುಸ್ಲಿಂ ... ಹಾಕಿ ಮುಸ್ಲಿಮರ ಓಟು ಕೀಳುವ ತಂತ್ರಕ್ಕೂ ...ಲ್ಲ. ಬಿಜೆಪಿಯ ಕೇಸರೀಕರಣಕ್ಕೂ ...ಶವಿಲ್ಲ. ತನ್ನ ಜನಪ್ರಿಯತೆಯ ಬಗ್ಗೆ ...ಲೆಬ್ಬಿಸುವುದಕ್ಕೂ ಕಾರಣವಿಲ್ಲ.

ಷರೀಫರ ದೆಹಲಿ ಯಾತ್ರೆ!

... ಎಲ್ಲಾ ಲೆಕ್ಕಾ ಹಾಕಿಯೇ ಸಿದ್ದು ಭೈರತಿ ...ರನ್ನು ಪಕ್ಷದ ಹಂಗಿಗೆ ಕಟ್ಟಿಹಾಕಲು ...ದ್ದು. ಸಿದ್ದು ದೃಷ್ಟಿಯಲ್ಲಿದು ಅನಿವಾರ್ಯ ...ಮೇನೋ ಸರಿ. ಆದರೆ ಕಾಂಗ್ರೆಸ್ ಪಿತಾಮಹ ... ಷರೀಫರ ಸಮಸ್ಯೆಗಳೇ ಬೇರೆ. ಅವರ ...ದು ಮಾಡು ಇಲ್ಲವೇ ಮಡಿ ಕಾಳಗ. ತನ್ನ ...ನ ಕೊನೇಗಾಲಕ್ಕಾದರೂ ವಂಶದ ...ಒಂದನ್ನು ತನ್ನ ಸಮರ್ಥ ಉತ್ತರಾಧಿಕಾರಿಯಾಗಿ ...ಪಿಸದೇ ಹೋದರೆ ರಾಜಕೀಯವಾಗಿ ಅಧ್ಯಾಯ ...ದಂತೆಯೇ. ಕ್ಷೀಣಿಸಿದ ಆರೋಗ್ಯ. ಮುತ್ತಿಕ್ಕುವ ... ತನ್ನ ಕಣ್ಣೆದುರೇ ಬೆಳೆದು ನಿಂತವರೆಲ್ಲ ... ಪಾಲಿನ ಮುಸ್ಲಿಂ ನಾಯಕರಾಗಿ ...ತ್ತಿರುವಾಗ ತನ್ನ ಮೊಮ್ಮಗನಿಗೊಂದು ಸ್ಥಾನ ...ಗದೆ ಹೋದರೆ ಕಾಂಗ್ರೆಸ್ಸಿನಲ್ಲಿದ್ದು ಏನು ...ಜನ?

...ನೇನು ಭೈರತಿಗೆ ಹೆಬ್ಬಾಳ ನಿಕ್ಕಿಯಾಯಿತೆಂದು ಗೊತ್ತಾಗಿದ್ದೇ ತಡ, ಮೊಮ್ಮಗ ರೆಹಮಾನ್‌ನನ್ನು ಕರಕೊಂಡು ದೆಹಲಿ ವಿಮಾನವನ್ನೇರಿಬಿಟ್ಟರು. ನೇರವಾಗಿ ಸೋನಿಯಾ ಮೇಡಂ ಮನೆಬಾಗಿಲನ್ನೇ ತಟ್ಟಿಬಿಟ್ಟರು. ಅಲ್ಲಿ ಷರೀಫರನ್ನು ಸಂತೈಸಿದ್ದು ಅಹ್ಮದ್ ಪಟೇಲ್. ಸಾಲದ್ದಕ್ಕೆ ದಿಗ್ವಿಜಯ್ ಸಿಂಗ್‌ಗೂ ದುಂಬಾಲು ಬಿದ್ದ ಷರೀಫ ತನ್ನ ಮೊಮ್ಮಗನಿಗೇನಾದರೂ ಹೆಬ್ಬಾಳದ ಟಿಕೆಟ್ ತಪ್ಪಿತೆಂದರೆ ತನ್ನ ಮತ್ತು ಕಾಂಗ್ರೆಸ್ಸಿನ ಋಣ ಹರಿದಂತೆಯೇ ಎಂಬ ಎಚ್ಚರಿಕೆಯನ್ನೂ ಕೊಟ್ಟುಬಂದರು.


ಅಲ್ಲಿಗೆ ಷರೀಫ್ ಸಾಹೇಬರು ಜೆಡಿಎಸ್ ಸೇರುವುದು ನಿಶ್ಚಿತವೆಂಬಂತಾಗಿತ್ತು. ಕಾಂಗ್ರೆಸ್ ಪಾಲಿಗೆ ಇಂಥಾದ್ದೊಂದು ಅವಘಡದ ವಾಸನೆ ಹಿಡಿದ ಖರ್ಗೆಗೆ ಷರೀಫ್ ನಿರ್ಗಮನದಿಂದಾಗಬಹುದಾದ ನಷ್ಟದ ಪಕ್ಕಾ ಅಂದಾಜು ಸಿಕ್ಕಿದೆ. ಮುಂಬರುವ ಚುನಾವಣೆಯಲ್ಲಿ ಇದರ ಲಾಭ ಪಡೆಯುವುದು ಬಿಜೆಪಿಯೇ. ಷರೀಫ್ ಜೆಡಿಎಸ್‌ಗೆ ಬಂದಾಕ್ಷಣ ದೇವೇಗೌಡರಿಗೆ ದೊಡ್ಡ ಲಾಭವಾಗದೇ ಹೋದರೂ ಬಿಜೆಪಿಗದು ಅನುಕೂಲವೆ. ರಾಜಧಾನಿಯ ಕನಿಷ್ಠ ಆರು ಕ್ಷೇತ್ರಗಳಲ್ಲಾದರೂ ಷರೀಫ್ ಹೆಸರಿಗೊಂದು ಮುಸ್ಲಿಂ ಮತಬುಟ್ಟಿಯಿದೆ. ಅಲ್ಪಸಂಖ್ಯಾತ ಸಮುದಾಯದಲ್ಲಿ ಸಹಜವಾಗೇ ಸಂಶಯದ ಹೊಗೆಯೇಳುತ್ತದೆ. ಮುಂದ್ಯಾವತ್ತಾದರೂ ಮುಖ್ಯಮಂತ್ರಿಯಾಗಲೇಬೇಕೆಂಬ ತನ್ನ ಉದ್ದೇಶಕ್ಕಿದು ಹಿನ್ನಡೆಯೇ.


ಹೀಗೆಂದು ಲೆಕ್ಕಹಾಕಿದ ಖರ್ಗೆ ರಾತ್ರೋರಾತ್ರಿ ಷರೀಫ್ ಸಾಹೇಬರ ಮನೆ ಬಾಗಿಲು ತಟ್ಟಿದ್ದಾರೆ. ಷರೀಫ್-ಖರ್ಗೆ ಸಂಧಾನದ ವಿಸ್ತರಣೆಯೆಂಬಂತೆ ಕಾಂಗ್ರೆಸ್ ರಾಷ್ಟ್ರೀಯ ಕಾರ್ಯದರ್ಶಿಗಳಾದ ಬಿ.ಕೆ. ಹರಿಪ್ರಸಾದ್ ಮತ್ತು ಆಸ್ಕರ್ ಫರ್ನಾಂಡಿಸ್ ತೆರೆಮರೆಯಲ್ಲೇ 'ಆಪರೇಷನ್ ಭೈರತಿ'ಗೆ ಕೈಜೋಡಿಸಿದ್ದಾರೆ. ಅದು ಮೂಲ ಕಾಂಗ್ರೆಸ್ ನಾಯಕರುಗಳ ಒಳಸಂಧಾನ. ಆ ಹೊತ್ತಿಗಾಗಲೇ ಮುಖ್ಯಮಂತ್ರಿಗೆ ಇದರ ವಾಸನೆ ಹತ್ತಿತ್ತು. ಹೆಬ್ಬಾಳದ ಟಿಕೆಟ್ ನಿರ್ಧರಿಸಲೆಂದೇ ನಗರ ಉಸ್ತುವಾರಿ ಸಚಿವ ಕೆ.ಜೆ. ಜಾರ್ಜ್, ಬಿ.ಎಲ್. ಶಂಕರ್, ಎಮ್ಮೆಲ್ಸಿ ಲಕ್ಷ್ಮೀನಾರಾಯಣ, ಭೋಸರಾಜು ಮತ್ತು ಐವಾನ್ ಡಿಸೋಜರ ಕಮಿಟಿಯೊಂದನ್ನು ಪರಮೇಶ್ವರ್ ರಚಿಸಿದ್ದರಲ್ಲ.

ಅದು ಅಂತಿಮವಾಗಿ ಮೂರು ಹೆಸರುಗಳನ್ನು ಸೂಚಿಸಿ ಹೈಕಮಾಂಡ್ ಅನುಮತಿಗೆಂದು ರವಾನಿಸಿಯೂ ಆಗಿತ್ತು. ಮೊದಲ ಹೆಸರೇ ಭೈರತಿ ಸುರೇಶ್. ಎರಡನೆಯದ್ದು ರೆಹಮಾನ್ ಷರೀಫ್ ಮತ್ತು ಎಚ್.ಎಂ. ರೇವಣ್ಣ ಮೂರನೆಯವರು!



ಹರಿಪ್ರಸಾದ್





ಖರ್ಗೆ

ಕೇಸರಿ ಹುನ್ನಾರ

ಹಾಗೆ ನೋಡಿದರೆ ಸಿಎಂ ಭೈರತಿಯನ್ನು ಬೆಂಬಲಿಸಿದ್ದೇನೋ ನಿಜವಾದರೂ ತನ್ನದೇ ಆಗಬೇಕೆಂದೇನೂ ಹಠಕ್ಕೆ ಬಿದ್ದಿರಲಿಲ್ಲ. ಭೈರತಿ ಬಸವರಾಜು ಮತ್ತು ಎಂಟಿಬಿ ನಾಗರಾಜು ಈ ಬಗ್ಗೆ ಸಿದ್ದು ಬೆನ್ನಿಗೆ ಬಿದ್ದಿದ್ದೇನೋ ಸರಿ. ಹಾಗಂತ ಸಿದ್ದು ವಿಪರೀತ ಒತ್ತಡ ತಂತ್ರ ಬಳಸಲಿಲ್ಲ. ಆದರೆ ಭೈರತಿ ಬಸವರಾಜ್ ಹೆಬ್ಬಾಳದಲ್ಲಿ ಎಬ್ಬಿಸಿದ್ದ ಧೂಳಿತ್ತಲ್ಲ; ಇನ್ನೇನು ತನಗೇ ಟಿಕೆಟ್ಟಾಯಿತು, ಮುಖ್ಯಮಂತ್ರಿ ತನ್ನ ಪರ ಹಠ ಹಿಡಿದಿದ್ದಾರೆ, ಅವರ ಮಾತಿನ ಮೇರೆಗೇ ನಾನು ಈಗಾಗಲೇ ಗೆದ್ದಾಗಿದೆ ಎಂಬಂತೆ ಮೀಡಿಯಾಗಳಲ್ಲಿ ಬಿಂಬಿಸಿಬಿಟ್ಟ. ಹಾಗೊಮ್ಮೆ ಸಿಎಂ ಹಠಕ್ಕೆ ಬಿದ್ದಿದ್ದೇ ಆಗಿದ್ದರೆ ಕೆಪಿಸಿಸಿ ಮೂರು ಹೆಸರುಗಳನ್ನೇಕೆ ಸೂಚಿಸಬೇಕಿತ್ತು.

ಭೈರತಿ ದಳದ ಅತೀ ಆತ್ಮವಿಶ್ವಾಸ ಮತ್ತು ದುಡುಕುಬುದ್ಧಿಗೆ ಸಿಲುಕಿದ್ದು ಸಿದ್ದು ಹೆಸರಷ್ಟೇ. ಜನವರಿ 26ರ ಸಂಜೆ ಕೊನೆಯ ಯತ್ನವೆಂಬಂತೆ ದಿಗ್ವಿಜಯ್ ಸಿಂಗ್ ಮತ್ತು ಅಹ್ಮದ್ ಪಟೇಲರ ಜೊತೆ ಮಾತಾಡಿದ್ದೇ ಕೊನೆ. ಹೈಕಮಾಂಡ್ ಮಾತಿನ ಧಾಟಿಯಲ್ಲೇ ಸಿದ್ದುವಿಗದು ಅರ್ಥವಾಗಿಹೋಗಿತ್ತು. ರಾತ್ರಿ ಹೊತ್ತಿಗದು ನಿಕ್ಕಿಯಾಯಿತು. ಹೆಬ್ಬಾಳ್ ಜಾಫರ್ ಷರೀಫರ ವಶವಾಗಿತ್ತು. ಹಾಗಂತ ಸಿದ್ದು ತಲೆ ಕೆಡಿಸಿಕೊಳ್ಳಲಿಲ್ಲ. ಮುಖ್ಯಮಂತ್ರಿಯೊಬ್ಬ ಯಾವುದೋ ಒಂದು ಕ್ಷೇತ್ರದ ಉಪಚುನಾವಣೆಗೆ ತನ್ನ ಜಾತಿಯ ಪಕ್ಷದ ಕಾರ್ಯಕರ್ತನೇ ಅಲ್ಲದವನ ಪರವಾಗಿ ಹಠಕ್ಕೆ ಬಿದ್ದರೆಂಬಂತೆ ಮೀಡಿಯಾಗಳು ಬಿಂಬಿಸಿಬಿಟ್ಟವು. ಅದು ಕಳೆದೊಂದು ವರ್ಷದಿಂದ ಮೀಡಿಯಾ ಕೇಸರಿ ವರ್ಗವೊಂದು ನಡೆಸಿಕೊಂಡೇ ಬಂದ ಮಸಲತ್ತಿನ ಫಲವೆಂಬುದು ಯಾರಿಗೆ ತಾನೇ ಗೊತ್ತಿಲ್ಲ?

ಮುಖ್ಯಮಂತ್ರಿಯೊಬ್ಬನಿಗೆ ತನ್ನದೇ ಲೆಕ್ಕಾಚಾರವಾದರೆ ಅದೇ ಪಕ್ಷದ ಮತ್ತೊಂದು ವರ್ಗದ ವರಿಷ್ಠರಿಗೂ ಅವರದೇ ಲೆಕ್ಕಾಚಾರಗಳಿರುತ್ತವೆ. ಒಂದು ಕ್ಷೇತ್ರದ ಟಿಕೆಟ್ಟಿಗಾಗಿ ಮುಖ್ಯಮಂತ್ರಿಯನ್ನು 'ಬಾಲಿಶ'ಗೊಳಿಸುವಷ್ಟು ಹುಡುಗಾಟಿಕೆಗೆ ಸರ್ಕಾರದ ವಿರೋಧಿ ಕೂಟವೇನೋ ಇಳಿದಿದೆ ನಿಜ. ಆದರೆ ನಂಬುವವರಾರು? ಇಲ್ಲಿ ಸಿದ್ದು ಸೋತು ಗೆದ್ದಿದ್ದಾರೆ ಭೈರತಿ ದಳದ ಹಿನ್ನಡೆಯಿಂದಾಗಿ ಪಕ್ಷವೂ ಗೆದ್ದಿದೆ

● ರಾ. ಸೋಮನಾಥ್


ಮೂವತ್ತು ಮಸೀದಿಗಳ ಮುಖ್ಯಸ್ಥರು ಬರೆದ ಪತ್ರ

...ರತಿ ಸುರೇಶ್‌ರ ಹೊರತಾಗಿ ಸಿಎಂ ಸಿದ್ದರಾಮಯ್ಯನವರು ಎಚ್.ಎಂ. ರೇವಣ್ಣರನ್ನು ...ಸಿದ್ದರೆ ಸಮಸ್ಯೆಯಿರುತ್ತಿರಲಿಲ್ಲವೆ?

...ಬ್ಬಾಳಕ್ಕೆ ಭೈರತಿಯನ್ನು ತರುವ ಯತ್ನವೆಂಬಂತೆ ಸಿದ್ದು ಮೊದಲು 'ಆತ ಕಾಂಗ್ರೆಸ್ ...ಸ್ಸ' ಎಂಬ ಹೇಳಿಕೆ ಕೊಟ್ಟಿದ್ದೇ ವಿರೋಧಿಗಳ ಪಾಲಿಗೆ ಅಸ್ತ್ರವಾಯಿತು. ಹಾಗಾದರೆ ...ದಿಂದಲೂ ಪಕ್ಷಕ್ಕಾಗಿ ದುಡಿದವರಿಲ್ಲವೆ ... ಪ್ರಶ್ನೆ ಸಹಜವಾಗೇ ಷರೀಫ್ ...ರಿಗೆ ಪರವಾಗಿ ಪರಿಣಮಿಸಿತು. ...ಲ್ಲಿ ಭೈರತಿ ಕುರುಬ ಬೇರೆ. ಈಗಾಗಲೇ ...ಜಪುರದ ಭೈರತಿ ಬಸವರಾಜು, ...ಕೋಟೆಯ ಎಂಟಿಬಿ ನಾಗರಾಜು ಮತ್ತು ...ನಿಸ ಪ್ರಕಾಶ್ ಶಾಸಕರಾಗಿ ಗೆದ್ದಿದ್ದು ...ನಾಗೇ ಮೀಡಿಯಾಗಳ ಪಾಲಿಗೆ ...ಯಿತು. ಮುಖ್ಯಮಂತ್ರಿ ತನ್ನದೇ ...ರ ಜಾಲವನ್ನು ಕಟ್ಟಿ ಕೂರುತ್ತಿದ್ದಾರೆಂಬ ...ಕೂ ಇದೇ ಆಸ್ಪದವಾಯಿತು. ರೆಹಮಾನ್ ...ಗೂ ಮುನ್ನ ಇದೇ ಹೆಬ್ಬಾಳದ ಟಿಕೆಟ್ ... ಹಿರಿಯ ಕಾಂಗ್ರೆಸ್ ನಾಯಕ ಎಚ್.ಎಂ. ರೇವಣ್ಣ ಕೂಡ ಜಾತಿಯಿಂದ ...ಕೆಂಬುದನ್ನು ಅನೇಕರು ಮರೆತೇಬಿಟ್ಟರು.

...ದ ಹೊರತಾಗ್ಯೂ ಹೆಬ್ಬಾಳ ಚುನಾವಣೆಯಲ್ಲಿ ಇಕ್ಬಾಲ್ ಅಹ್ಮದ್ ಸರಡಗಿಯವರನ್ನು ...ನಾಗಿಯೇ ಸೋಲಿಸಿದ್ದ ಭೈರತಿಯ ಹಿನ್ನೆಲೆಯೇ ಮುಳುವಾಗಿ ಪರಿಣಮಿಸಿತು. ...ದ ಜೊತೆಗೆ ಹೆಬ್ಬಾಳದ ... ಸೋಲಿನಲ್ಲಿ ಬೇರೊಂದೇ ಬೆಳವಣಿಗೆಗಳಾದವು.





...ೋಷನ್ ಬೇಗ್

ಹೇಳಿಕೇಳಿ ಇದು ಮುಸ್ಲಿಂ ಬಹುಸಂಖ್ಯಾತರ ಕ್ಷೇತ್ರ. ಆ ಕಾರಣಕ್ಕೇ ಕಳೆದ ಚುನಾವಣೆಯಲ್ಲಿ ರೆಹಮಾನ್ ಷರೀಫ್‌ರಿಗೆ ಟಿಕೆಟ್ ಕೊಟ್ಟಿದ್ದು. ಅಷ್ಟಕ್ಕೂ ಸೋತಿದ್ದು ಕೇವಲ ಐದು ಸಾವಿರ ಮತಗಳ ಅಂತರದಿಂದ ಮಾತ್ರ. ಈಗೇನಾದರೂ ಮುಸ್ಲಿಂ ಅಭ್ಯರ್ಥಿ ಹಾಕದೇ ಹೋದರೆ ಆ ಕಾಲದಿಂದಲೂ ಕಾಂಗ್ರೆಸ್ಸನ್ನು ಬೆಂಬಲಿಸಿಕೊಂಡು ಬಂದ ನಮಗೆ ಬೇರೆ ಯಾವುದಾದರೂ ಪಕ್ಷದ ಮುಸ್ಲಿಂ ಅಭ್ಯರ್ಥಿಯನ್ನು ಬೆಂಬಲಿಸದೇ ಬೇರೆ ವಿಧಿಯೇ ಇಲ್ಲ ಎಂದು ಹೆಬ್ಬಾಳದ ವ್ಯಾಪ್ತಿಯ ಮೂವತ್ತಕ್ಕೂ ಅಧಿಕ ಮಸೀದಿಗಳ ಮುಖ್ಯಸ್ಥರೆಲ್ಲ ಸೇರಿಕೊಂಡಿದ್ದೇ ಸೋನಿಯಾ ಮೇಡಂಗೆ ಮನವಿ ಕೊಟ್ಟರು.

ಅಲ್ಲಿಗಿದು ಮುಸ್ಲಿಮರ ಕಾಂಗ್ರೆಸ್ ನಿಷ್ಠೆಯ ಪ್ರಶ್ನೆಯಾಗಿ ಬದಲಾಗಿತ್ತು. ಭೈರತಿ ಎಷ್ಟೆಂದರೂ ಕಾಂಗ್ರೆಸ್ ಕಾರ್ಯಕರ್ತನಲ್ಲ. ಜಾಫರ್ ಷರೀಫ್‌ರಂಥ ಹಿರಿಯರನ್ನು ಬದಿಗೊತ್ತಿ ಪಕ್ಷದ ಕಾರ್ಯಕರ್ತನೇ ಅಲ್ಲದ ಭೈರತಿಗೆ ಟಿಕೆಟ್ ಕೊಡುವುದು ಬಹುತೇಕ ಕಾಂಗ್ರೆಸ್ ನಾಯಕರ ಕಣ್ಣು ಕೆಂಪಗಾಗಿಸಿತು. ಯಾವ ಬೆಲೆತೆತ್ತು ಭೈರತಿಯನ್ನು ಎಮ್ಮೆಲ್ಲೆಯಾಗಿಸಬೇಕು ಮತ್ತು ಯಾವ ಬೆಲೆತೆತ್ತು ಷರೀಫರನ್ನು ಕಾಂಗ್ರೆಸ್ ಕಳಕೊಳ್ಳಬೇಕೆಂಬ ಪ್ರಶ್ನೆ ಸಹಜವಾಗೇ ಉದ್ಭವಿಸಿತ್ತು. ಭೈರತಿ ಗೆಲ್ಲುವ ಕುದುರೆಯೇನೋ ಸರಿ. ಹಾಗಂತ ಪ್ರಶ್ನೆ ಸಹಜವಾಗೇ ಉದ್ಭವಿಸಿತ್ತು. ಹಕ್ಷದ ಅಲ್ಪಸಂಖ್ಯಾತರ ನಿಷ್ಠೆಯ ಪ್ರಶ್ನೆ ಉದ್ಭವಿಸಿತೆಂದರೆ ಹೈಕಮಾಂಡ್ ಷರೀಫರ ಮೊಮ್ಮಗನಿಗೆ ಮಣೆ ಹಾಕದೇ ಬೇರೆ ವಿಧಿಯೇ ಇರಲಿಲ್ಲ.

ರೋಹಿತ್ ವೇಮುಲನನ್ನು ಬದುಕಿಸೋಣ

ಎರಡು ವಾರ ನ್ಯಾಯಕ್ಕಾಗಿ ಕ್ಯಾಂಪಸ್ಸಿನಲ್ಲಿಯೇ ಹಗಲೂ-ಇರುಳು ಧರಣಿ ಕೂತು ಕೊನೆಗೂ ನ್ಯಾಯ ಸಿಗದೇ ರೋಹಿತ್ ವೇಮುಲ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮನುವಾದಿ ಕುತಂತ್ರಿಗಳಿಗೆ ಬಲಿಯಾಗಿದ್ದಾನೆ. ಅಂಬೇಡ್ಕರ್ ಮತ್ತು ಸಾವಿತ್ರಿಬಾಯಿ ಫುಲೆಯವರ ಭಾವಚಿತ್ರದ ಮುಂದೆ ನಡೆದ ಧರಣಿ ಅವನನ್ನು ಉಳಿಸಲು ಕಷ್ಟಪಟ್ಟು ಉಸಿರಾಡಿ ಕೊನೆಗೆ ಅವನನ್ನು ಕಳೆದುಕೊಂಡಿದೆ. ಅಂದು ಭಾವಚಿತ್ರದೊಳಗಿನ ಬಾಬಾಸಾಹೇಬ್ ಅಂಬೇಡ್ಕರ್ ಏನು ಹೇಳಿರಬಹುದು? 'ಎದೆಗುಂದಬೇಡ. ರೋಹಿತ ವೇಮುಲ ಮರಳಿ ಹಿಂದೆ ಹೆಜ್ಜೆ ಹಾಕು ನನ್ನ ಕಂದಾ. ಇಂತಹ ಅದೆಷ್ಟೋ ಕಷ್ಟಗಳನ್ನನುಭವಿಸುತ್ತಿರುವ ನಿನ್ನ ಅಣ್ಣತಮ್ಮಂದಿರಿದ್ದಾರೆ. ಅಕ್ಕತಂಗಿಯರಿದ್ದಾರೆ. ಅಷ್ಟೇ ಏಕೆ ನನ್ನ ಕಷ್ಟಗಳನ್ನೇ ನೆನೆಸಿಕೋ. ನನ್ನ ಜಾತಿ ತಿಳಿದು ಹುಡುಗನಾಗಿದ್ದಾಗ ಎತ್ತಿನಗಾಡಿಯಿಂದ ಎಸೆದಿದ್ದರು, ರಾತ್ರೋರಾತ್ರಿ ಬಾಡಿಗೆ ಕೋಣೆಯಿಂದ ನನ್ನನ್ನು ಹೊರದಬ್ಬಿದ್ದರು, ಹೆಜ್ಜೆಹೆಜ್ಜೆಗೂ ಪಿಶಾಚಿಗಳಂತೆ ಕಾಡುತ್ತಿದ್ದರು. ಆಗ ಒಬ್ಬನೇ ಅಳುತ್ತಿದ್ದೆ. ಬಿಕ್ಕಿ ಬಿಕ್ಕಿ ಅಳುತ್ತಿದ್ದೆ. ಆದರೆ ಎಂದಿಗೂ ಆತ್ಮಹತ್ಯೆಯ ತೀರ್ಮಾನ ಕೈಗೊಂಡಿರಲಿಲ್ಲ, ಬಾ ರೋಹಿತ ಹಿಂದೆ ಬಾ' ಎಂದಿದ್ದರೇನೋ.

ವಿದ್ಯಾದಾತೆ ಸಾವಿತ್ರಿಬಾಯಿ ಫುಲೆ ಏನು ಹೇಳಿರಬಹುದು? 'ಮಗೂ.. ಈ ತೀರ್ಮಾನ ಬೇಡ. ಈ ಕಷ್ಟ ಇಂದು ನಿನ್ನೆಯದಲ್ಲ, ಇದನ್ನು ಮೆಟ್ಟಿ ನಿಲ್ಲಲೆಂದೇ ನಿನಗೆ ವಿದ್ಯೆ ದಯಪಾಲಿಸಿದ್ದೇನೆ. ನನ್ನನ್ನೇ ಆದರ್ಶವಾಗಿಟ್ಟುಕೋ. ಸುಲಭದಲ್ಲಿ ನಾನು ನಿಮಗೆ ಕಲಿಸಲಿಲ್ಲ, ಸೆಗಣಿ ತೂರಿದ್ದರು, ಕಲ್ಲಿಂದ ಹೊಡೆದಿದ್ದರು, ನಮ್ಮ ಧರ್ಮ ಹಾಳು ಮಾಡುತ್ತಿದ್ದೀ ಎಂದರು. ಆದರೆ ನಾನು ಹಿಂಜರಿಯಲಿಲ್ಲ, ಅದರ ಪರಿಣಾಮ ನೀನಿಲ್ಲಿರುವೆ. ನನ್ನ ಶ್ರಮವನ್ನು ವ್ಯರ್ಥಗೊಳಿಸಬೇಡ ಮಗೂ.. ಬಾ.. ಹಿಂದಿರುಗಿ ಬಾ ರೋಹಿತ' ಎಂದಿದ್ದರೇನೋ.

ಇಂತಹ ಸನ್ನಿವೇಶದಲ್ಲಿ ನಾವು ಏನು ಮಾಡಬೇಕಿತ್ತು? ರೋಹಿತ ವೇಮುಲನ ಬೆಂಬಲಕ್ಕೆ ನಿಲ್ಲಬೇಕಿತ್ತು, ಅವನ ಹೆಗಲಿಗೆ ನಮ್ಮ ಹೆಗಲು ಕೊಟ್ಟು ನಿಲ್ಲಬೇಕಿತ್ತು, ಆದರೆ ನಾವ್ಯಾರೂ ಹಾಗೆ ಮಾಡಲಿಲ್ಲ. ತೀರ ಕ್ಷುಲ್ಲಕ ವಿಷಯವೆಂಬಂತೆ ಕುಂತಲ್ಲಿಯೇ ಕುಳಿತುಬಿಟ್ಟೆವು. ದಲಿತರು ಪ್ರಗತಿಪರರಾದಿಯಾಗಿ ಸುಮ್ಮನೆ ಕುಳಿತುಬಿಟ್ಟೆವು. ಆ ಜೀವ ತಾನೇ ಅದೆಷ್ಟು ದಿನ ನಮಗಾಗಿ ಕಾದೀತು? 'ದಲಿತರಿಗೆ ವಿಷ ಕೊಟ್ಟು ಬಿಡಿ, ನೇಣು ಹಾಕಿಕೊಳ್ಳಲು ಹಗ್ಗ ಕೊಡಿ' ಎಂದರೂ ಎಚ್ಚೆತ್ತುಕೊಳ್ಳದ ವಿಶ್ವವಿದ್ಯಾಲಯದ ಅಪ್ಪಾರಾವ್ ಅವರಿಗೂ ನಮ್ಮಲ್ಲಿಯೂ ವ್ಯತ್ಯಾಸ ಅವನಿಗೆ ಕಾಣಲಿಲ್ಲವೇನೋ. ಅಂದು ಬಿಳಿ ಹಾಳೆ ಪೆನ್ನು ಹಿಡಿದು ಕುಳಿತು 'ಶುಭ ಮುಂಜಾನೆ' ಎಂದು ಆರಂಭಿಸಿಯೇ ಬಿಟ್ಟ. ನಮ್ಮ ಭಾರವನ್ನು ಇಳಿಸಲು 'ನನಗೆ ಯಾರ ಮೇಲೂ ದೂರುಗಳಿಲ್ಲ! ಹಾಗೆ ನೋಡಿದರೇ ನನಗೆ ಸಮಸ್ಯೆಗಳು ನನ್ನೊಂದಿಗೆ ಇದ್ದವು' ಎಂದು ಅವನ ಮೇಲೆಯೇ ಹೆಣಭಾರವನ್ನು ಹೊತ್ತುಕೊಂಡ. 'ನಾನು ಮನುಷ್ಯರನ್ನು ಪ್ರೀತಿಸಿದೆ' ಎಂದಾಗ ಅವನು ನಮ್ಮನ್ನೂ ನೆನೆಸಿಕೊಂಡ. ಆದರೆ 'ನನ್ನ ಬಾಲ್ಯದ ಒಂಟಿತನದಿಂದ ಚೇತರಿಸಿಕೊಂಡಿಲ್ಲ' ಎನ್ನುವ ಮೂಲಕ ನೀವೂ ನನ್ನೊಂದಿಗಿಲ್ಲ ಎಂದೇ ಹೇಳಿದ. 'ನಮ್ಮ ಭಾವನೆಗೆ ನಾವು ಬಣ್ಣ ಬಳಿದುಕೊಂಡು ಬಿಟ್ಟೆವು' ಎಂದು ನಮ್ಮ ಬಣ್ಣವನ್ನೂ ಬಯಲು ಮಾಡಿದ. ಅವನ ಮಾತಿನಲ್ಲಿಯೇ ಹೇಳಬೇಕೆಂದರೆ 'ಸೆಕೆಂಡ್ ಹ್ಯಾಂಡುಗಳು'. 'ನಾನು ಹೋದಮೇಲೆ ಜನ ನನ್ನನ್ನು ಹೇಡಿ, ಸ್ವಾರ್ಥಿ, ಮೂರ್ಖ ಎನ್ನಬಹುದು' ಎನ್ನುವುದರ ಮೂಲಕ ನಮ್ಮ ಹೇಡಿತನ, ಮೂರ್ಖತನ, ಸ್ವಾರ್ಥವನ್ನು ತೋರಿಸಿದ್ದಾನೆ.

ಅವನು ವೈಜ್ಞಾನಿಕ ಬರಹಗಾರನಾಗಬೇಕಿತ್ತಂತೆ. ಅದೆಷ್ಟರಮಟ್ಟಿಗೆಂದರೆ ಅವನ ಡೆತ್‌ನೋಟ್ ಕೂಡ ಮನೋವೈಜ್ಞಾನಿಕ ಬರಹದಂತೆ ಕಾಣುತ್ತದೆ. 'ಅಂಬೇಡ್ಕರ್ ವಿದ್ಯಾರ್ಥಿ ಸಂಘಟನೆ ನನ್ನ ಕುಟುಂಬ' ಎನ್ನುವ ಮೂಲಕ ನಮಗೆಲ್ಲರಿಗೂ ಒಂದು ಕಿವಿಮಾತು ಹೇಳಿಹೋಗಿದ್ದಾನೆ. ಕೊನೆಯದಾಗಿ 'ನಾನು ಹೋದಮೇಲೆ ನನ್ನ ಮಿತ್ರರು ಮತ್ತು ಶತ್ರುಗಳಿಗೆ ತೊಂದರೆ ನೀಡಬೇಡಿ' ಎಂದು ಬುದ್ಧಾನುಯಾಯಿ ಆಗಿದ್ದಾನೆ. ನಿಜ. ರೋಹಿತ್ ವೇಮುಲನಿಗೆ ವೈಜ್ಞಾನಿಕ ಬರಹಗಾರನಾಗುವ, ಕಾರ್ಲ್ ಸಗಾನನ್ನು ಮೀರಿಸುವ ತಾಕತ್ತಿತ್ತು, ಅದನ್ನು ಅವನು ಬರೆದ ಮೊದಲ ಮತ್ತು ಕೊನೆಯ ಪತ್ರದಲ್ಲಿ ಸಾಬೀತುಮಾಡಿಬಿಟ್ಟ. ಆದರೆ ಆ ತಾಕತ್ತನ್ನು ನಾವು ಬೇಗ ಅರ್ಥ ಮಾಡಿಕೊಳ್ಳುವಲ್ಲಿ ಸೋತುಬಿಟ್ಟೆವು.

ಕ್ಷಮಿಸು ಗೆಳೆಯ. ಕುತಂತ್ರಿಗಳು ಹೆಣೆದ ಚಕ್ರವ್ಯೂಹದಲ್ಲಿ ನೀನು ಸಿಲುಕಿದ್ದೆ. ಅದನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ತಡ ಮಾಡಿದೆವು. ನಿನ್ನ ಬದುಕಿಸಿಕೊಳ್ಳಲು ನೀನೇ ನಮಗೆ ಬಹಳಷ್ಟು ಸಮಯ ಕೊಟ್ಟೆ ಆದರದು ನಮಗೆ ಅರ್ಥವಾಗಲಿಲ್ಲ, ಇಂದು ಅರ್ಥವಾಗಿದೆ ಆದರೆ ನೀನೇ ಇಲ್ಲ, ನಮ್ಮನ್ನು ಎಚ್ಚರಿಸಲು ನೀನು ತೆಗೆದುಕೊಂಡ ನಿರ್ಧಾರ ಇದೆಯಲ್ಲಾ ಅಬ್ಬಾ!! ಎಂತಹವರೂ ಹಿಂದೂಮುಂದೂ ನೋಡುವ ಕೆಲಸ. ನೀನು ಮಾಡಿಯೇ ಬಿಟ್ಟೆ. ನೀನಂದುಕೊಂಡಂತೆ ನಾವು ಎಚ್ಚೆತ್ತುಕೊಂಡೆವು. ಆದರೆ ನಮ್ಮೊಳಗಿನ ಅಪರಾಧಿ ಭಾವನೆ ನಮ್ಮನ್ನು ತಿನ್ನುತ್ತಿದೆ. ಪಾರಂಪರಿಕ ಕುತಂತ್ರಿಗಳು ಹೆಣೆದ ಬಲೆಯಲ್ಲಿ ನೀನು ಸಿಕ್ಕಿ ನರಳಾಡುತ್ತಿದ್ದಾಗ ನಿನ್ನ ಕೈ ಹಿಡಿಯಲಿಲ್ಲವಲ್ಲವೆಂದು ಕರುಳು ಹಿಂಡುತ್ತಿದೆ. ಎದೆ ಭಾರವಾಗುತ್ತಿದೆ. ನೀನು ಕಡೆಯ ಪತ್ರದಲ್ಲಾದರೂ ನಮಗೆ ಧಿಕ್ಕಾರ ಹಾಕಬೇಕಿತ್ತು, ಆದರೆ ಶತ್ರುಗಳನ್ನೂ ಕ್ಷಮಿಸುವ ನೀನು ನಮಗೆಲ್ಲಿ ಧಿಕ್ಕಾರ ಹೇಳಬೇಕು? ತಾಯಿಯಂತಹ ಕರುಣೆ ಅದೆಲ್ಲಿಂದ ಕಲಿತೆಯೋ ಗೆಳೆಯ. ನಿಜಕ್ಕೂ ನಿನ್ನ ಸಾವು ಇಡೀ ದೇಶದ ನಷ್ಟ.

ನೀನೇನೋ ನಿನ್ನ ಕೊಂದವರನ್ನು ಕ್ಷಮಿಸಿಬಿಟ್ಟೆ. ನೀ ಹೋದಮೇಲೆ ಅವರ ಆಟಗಳು ಇನ್ನೂ ನಿಂತಿಲ್ಲ, ನಿನ್ನನ್ನು 'ಭಯೋತ್ಪಾದಕರ ಬೆಂಬಲಿಗ' ಎನ್ನುತ್ತಿದ್ದಾರೆ. ನೀನು ಮರಣದಂಡನೆಯ ವಿರುದ್ಧ ಹೋರಾಡಿದ್ದಕ್ಕೆ ಗೋಡ್ಸೆಗೆ ಗುಡಿ ಕಟ್ಟುವ ಜನ ನಿನ್ನನ್ನು ಯಾಕೂಬ್ ಮೆಮನ್ನಿನ ಪರವಿದ್ದವನೆಂದು ಬಣ್ಣ ಕಟ್ಟುತ್ತಿದ್ದಾರೆ. 'ವಿಜ್ಞಾನ, ನಕ್ಷತ್ರ ಮತ್ತು ನಿಸರ್ಗವನ್ನು' ಪ್ರೀತಿಸುವ ನಿನ್ನ ಜಾತಿಯ ಜಗ್ಗಾಡುತ್ತಿದ್ದಾರೆ. ನಿನ್ನ ಸಾವಿಗಾಗಿ ರಾಜಕೀಯದಾಟ ಆಡಿದ ಕುತಂತ್ರಿಗಳು ನಿನಗೆ ಸಿಗುತ್ತಿರುವ ಬೆಂಬಲ ನೋಡಿ 'ರಾಜಕೀಯ ಮಾಡಬೇಡಿ' ಎನ್ನುತ್ತಿದ್ದಾರೆ. ನಿನ್ನಿಂದ, ನಿನ್ನ ಹೆತ್ತ ತಾಯಿಂದ ಹದಿನೇಳು ವರ್ಷ ದೂರವಿದ್ದ ನಿನ್ನ 'ಅಪ್ಪ' ಎನಿಸಿಕೊಂಡವನನ್ನು ಹುಡುಕಿ ಕರೆತಂದಿದ್ದಾರೆ. ಆ ನಿನ್ನಪ್ಪ ಎನಿಸಿಕೊಂಡವನು ಮೀಡಿಯಾಗಳ ಮೈಕಿನ ಮುಂದೆ ಹೇಳುತ್ತಿದ್ದಾನೆ ನೀನು ದಲಿತನಲ್ಲ, ಹಿಂದುಳಿದ ಜಾತಿಯವನೆಂದು. ನಿನ್ನಪ್ಪ ನಿನ್ನನ್ನು ಪ್ರೀತಿಸುವವನಲ್ಲ ಗೆಳೆಯ. ಅವನೂ ತನ್ನ ಭಾವನೆಗಳಿಗೆ ಬಣ್ಣ ಬಳಿದುಕೊಂಡು ಬಿಟ್ಟಿದ್ದಾನೆ. 'ನನ್ನ ಮಗನ ಸಾವಿಗೆ ಕಾರಣರಾದವರನ್ನು ಶಿಕ್ಷಿಸಿ' ಎಂದು ಹೇಳಬೇಕಿದ್ದ ಮನುಷ್ಯ ನಿನ್ನ ಜಾತಿಯ ಸ್ಪಷ್ಟೀಕರಣ ನೀಡಲು ಕುಣಿದಾಡುತ್ತಿದ್ದಾನೆ. ಎಸ್.ಸಿ, ಎಸ್.ಟಿ ಕಾಯ್ದೆಯಡಿ ಶಿಕ್ಷೆ ಅನುಭವಿಸಬೇಕಿರುವ ನಿನ್ನ ಕೊಂದವರನ್ನು ರಕ್ಷಿಸಲು ನಿಂತಿದ್ದಾನೆ. ನಿನ್ನಪ್ಪ ಅವನನ್ನೇ ಮಾರಿಕೊಂಡಿಹನೋ ಗೆಳೆಯ. ಆದರೆ ನಿನ್ನಮ್ಮ ನಿನ್ನ ಪರ. ಎಷ್ಟಾದರೂ ಹೆತ್ತವಳಲ್ಲವೇ? 'ನಿರ್ಭಯಾ ಜಾತಿ ಕೇಳದ ನೀವು ನನ್ನ ಮಗನ ಜಾತಿ ಯಾಕೆ ಕೇಳುತ್ತಿದ್ದೀರಿ' ಎಂದು ಪ್ರಶ್ನಿಸಿ ಕುತಂತ್ರಿಗಳಿಗೆ ಚುರುಕು ಮುಟ್ಟಿಸಿದ್ದಾರೆ.

ನಿರಾಸೆ ಬೇಡ ಗೆಳೆಯ. ನಿನ್ನ ವೀರಮರಣ ವ್ಯರ್ಥವಾಗದಂತೆ ನೋಡಿಕೊಳ್ಳಲು ಯುವ ಪಡೆಯೇ ಸಜ್ಜಾಗಿದೆ. ದೇಶದ ಮೂಲೆಮೂಲೆಗಳಲ್ಲಿಯೂ ನಿನಗಾದ ಅನ್ಯಾಯವನ್ನು ಪ್ರಶ್ನಿಸುತ್ತಾ ನಿನ್ನ ಆತ್ಮಹತ್ಯೆಗೆ ಕಾರಣರಾದವರ ಶಿಕ್ಷೆಗಾಗಿ ಆಗ್ರಹಿಸುತ್ತಿದೆ. ನಿರ್ಭಯಾಳಿಗೆ ಮಿಡಿದ ಜನತೆ ನಿನಗೂ ಜಾತಿ, ಮತ ಬಿಟ್ಟು ಮಿಡಿಯುತ್ತಿದ್ದಾರೆ. ನೀ ಹಚ್ಚಿದ ಹೋರಾಟದ ಕಿಡಿ ಇಂದು ಜ್ವಾಲಾಮುಖಿಯಾಗುವತ್ತ ಸಾಗುತ್ತಿದೆ. ಪಟ್ಟಭದ್ರರ ಕುತಂತ್ರವನ್ನು ಮೆಟ್ಟಿ ನಿಲ್ಲುತ್ತದೆ. ನಿನಗೆ ನ್ಯಾಯ ದಕ್ಕಿಸಿಕೊಡುತ್ತದೆ ಎಂಬ ನಂಬಿಕೆ ನನಗಿದೆ. ಆ ನ್ಯಾಯದ ನೆರಳಿನಲ್ಲಿ ಇನ್ನು ಮುಂದೆ ವಿಶ್ವವಿದ್ಯಾಲಯಗಳಲ್ಲಿನ ತಾರತಮ್ಯದ ಸುಡುಬಿಸಿಲು ಕರಗುವಂತೆ ಮಾಡಬೇಕಿದೆ. ಅದಕ್ಕೆ ನೀ ಆರಂಭಿಸಿದ ಹೋರಾಟವೇ ಮುನ್ನುಡಿ.

ಆದರೂ ಗೆಳೆಯ ನೀ ಬರೆದ ಪತ್ರದಲ್ಲಿನ ಒಂದು ವಾಕ್ಯ ನನ್ನನ್ನಿರಿಯುತ್ತಿದೆ. ಅದಾವುದು ಗೊತ್ತಾ?


"ನನಗೆ ಬದುಕಬೇಕೆಂಬ ಉತ್ಸಾಹವಿತ್ತು."

ಹೋರಾಟದ ಸಂಗಾತಿಗಳೇ. ರೋಹಿತ್ ವೇಮುಲುವಿನ ಈ ಮಾತನ್ನು ನಾವು ನಿಜವಾಗಿಸಬೇಕಿದೆ. ನಮ್ಮ ಹೋರಾಟದ ಕೂಗನ್ನು ಮುಗಿಲು ಮುಟ್ಟಿಸಿ 'ರೋಹಿತ್ ವೇಮುಲನನ್ನು ಬದುಕಿಸಬೇಕಿದೆ.'

"ರೋಹಿತ್ ವೇಮುಲ ಅಮರ್ ರಹೇ"

ಜೈ ಭೀಮ್.

● ವಿಕಾಸ ಆರ್ ಮೌರ್ಯ ಬೆಂಗಳೂರು



ಒಂದು ದಿನ

ಒಂದು ದಿನ
ಮುಂದೊಂದು ದಿನ
ನಿಮಗೆ ಅರ್ಥವಾಗಲಿದೆ
ನಾನು ಯಾಕೆ ಆಕ್ರಮಣಕಾರಿ ಆಗಿದ್ದೆ ಎಂಬುದು
ವ್ಯವಸ್ಥೆಯ ಹಿತಾಸಕ್ತಿಗಳ ತಾಳಕ್ಕೆ
ನಾ ಯಾಕೆ ಕುಣಿಯಲಿಲ್ಲವೆಂದು.

ಒಂದು ದಿನ
ಮುಂದೊಂದು ದಿನ
ಅರ್ಥವಾಗಲಿದೆ ನಿಮಗೆ
ನಾ ಕ್ಷಮೆ ಯಾಚಿಸಿದ್ದು ಯಾಕೆಂದು
ಬೇಲಿಯ ಪಕ್ಕದಲ್ಲೇ
ಬಲೆ ಹಾಸಿದ್ದಾರೆ ಎಂದು.

ಒಂದು ದಿನ
ಮುಂದೊಂದು ದಿನ
ಕುರೂಪಗೊಂಡು
ನಾ ಸಿಗುವೆನು ನಿಮಗೆ
ಇತಿಹಾಸದ ಮಾಸಿದ ಪುಟದಲ್ಲಿ
ಅದ ನೋಡಿ ನೀವು
ನಾನು ವಿವೇಕಿ ಆಗಿರಬೇಕಿತ್ತು
ಎಂದು ಆಶಿಸುವಿರಿ
ಆ ರಾತ್ರಿ
ನನ್ನ ನೆನೆದು ಮುಗುಳ್ನಗುವಿರಿ
ಅಂದು, ಆ ದಿನದಂದು
ನಾ ಪುನರುಜ್ಜೀವಿಸುವೆ!

ಮೂಲ: ರೋಹಿತ್ ವೇಮುಲ
ಕನ್ನಡಕ್ಕೆ: ಸಂವರ್ತ 'ಸಾಹಿಲ್'

(ರೋಹಿತ್ ವೇಮುಲ ಅವರ ಸ್ನೇಹಿತ ಆಯೂಬ್ ರೆಹಮಾನ್ 'ಹಿಂದುಸ್ತಾನ್ ಟೈಮ್ಸ್' ಪತ್ರಿಕೆಗೆ 22 ಜನವರಿ 2016 ರಂದು ಬರೆದ ಲೇಖನದಲ್ಲಿ ಸೆಪ್ಟೆಂಬರ್ 3 ರಂದು ರೋಹಿತ್ ಬರೆದ ಎಂದು ಹೇಳಲಾದ ಕವಿತೆ)

ನಕ್ಷತ್ರವಾದ ಬಂಧುವಿಗೆ




ಪ್ರಖರ ಬೆಳಕಿನ ಕತ್ತಲಲಿ
ಬಾಬಾಸಾಹೇಬರದೊಂದಿ ಹಿಡಿದು
ಬಿಡುಬೀಸಾಗಿ ನಡೆವ ಹೊತ್ತಲ್ಲಿ
ನಕ್ಷತ್ರಿಕರ ಕಾಟಕೆ
ಎಷ್ಟು
ತಲ್ಲಣಿಸಿರಬೇಕು ನೀನು
ಕನಸುಗಳ ಹೊತ್ತು ವಿಶ್ವಾಸದ
ಜೀವನ ಪ್ರೀತಿಯಲಿ ಬಾಳಬೇಕಾದವ
ಉರಿದು ಹೋದೆ, ನಕ್ಷತ್ರವಾದೆ

ನಿದ್ದೆಗೆಡಿಸಿದ
ನಿನ್ನ
ಕಾಣುವ ಆಸೆಯಿಂದ
ಮಧ್ಯರಾತ್ರಿ ಆಕಾಶ ನೋಡಿದೆ.
ಅಷ್ಟು ನಕ್ಷತ್ರಗಳಲಿ
ನೀನು
ಯಾರೆಂದು ತಿಳಿಯಲಿಲ್ಲ,
ದಿಟ್ಟಿಸಿದಾಗ ಕಂಡೆ:
ಎಲ್ಲಾ ನಕ್ಷತ್ರಗಳೂ
ಮಾನವತೆಗಾಗಿ ನವೆದುಹೋದ
ಈ ಲೋಕದ
ಬಂಧುಗಳೇ ಎಂದು

ವಿಷಾದವಿರಲಿ ಬಂಧುವೆ
'ಟ್ವಿಂಕಲ್‌ಟ್ವಿಂಕಲ್ ಲಿಟಲ್ ಸ್ಟಾರ್'
ಹೇಳುತ್ತಾ ಕಂದಮ್ಮಗೆ ಆಗಸ ತೋರಿಸುವ
ತಾಯಂದಿರಿಗೆ ನಿನ್ನ ನೆನಪಾಗಲಿ
ದಿನವು ಕಾರುಣ್ಯ ಸಹಬಾಳ್ವೆಯ ತುತ್ತುಣಿಸಲಿ
ಹಾಗೇ
ರಾತ್ರಿ ಆಕಾಶ ನೋಡುವ
ಜಾತಿಪ್ರೇಮಿಗಳಿಗೂ
ಬಿಡದೆ ಕಾಡಲಿ ನಿನ್ನಂತೆ
ಆಗಿಹೋದ ನಕ್ಷತ್ರಗಳ ಹಿಂಡು
ಅಲ್ಲಿ ಕಾಣಲಿ ಅವರ ಕ್ರೌರ್ಯದ ಬಿಂಬ
ಒಂದಿಷ್ಟು ಮೊಗೆದುಕುಡಿಯಲಿ ಅವರು
ಕಿರುಬೆಳಕಿನಲಿ
ಸೂಸುವ ನಿಷ್ಕಲ್ಮಷ ಪ್ರೀತಿಯನ್ನು
ಆಗಲಾದರೂ
ಮಾನವರಾಗಲಿ.

● ಎಸ್ ...ನೇಂದ್ರಕುಮಾರ್

ಮೈಸೂರಲ್ಲಿ ಬಹುರೂಪಿಯ ವಿರಾಟ್‌ರೂಪ



ಮೈಸೂರಿನಲ್ಲಿ ಒಂದು ವಾರ ಕಾಲ ನಡೆದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಜನಗಳನ್ನು ತಲುಪುವಲ್ಲಿ ಒಂದು ದಾಖಲೆಯನ್ನೇ ಮಾಡಿದೆ. ಹದಿನೈದು ಸಾವಿರಕ್ಕಿಂತಲೂ ಹೆಚ್ಚು ಜನಗಳು ರಾಷ್ಟ್ರಮಟ್ಟದ ನಾಟಕ, ಬೀದಿನಾಟಕ, ಚಲನಚಿತ್ರ ಮತ್ತು ಜಾನಪದ ಕಲಾತಂಡಗಳನ್ನು ನೋಡುತ್ತ ವಾರವಿಡೀ ರಂಗಾಯಣದ ಆವರಣವನ್ನು ಜಾತ್ರೆಯನ್ನಾಗಿಸಿದ್ದರು. ಸಿನಿಮಾ ಮತ್ತು ನಾಟಕ ನೋಡುವವರ ಹೊರತಾಗಿ ದೇಶಿ ತಿಂಡಿ ಪದಾರ್ಥಗಳು, ಮತ್ತಿತರ ಮಳಿಗೆಗಳು ದಿನವಿಡೀ ಜನರಿಂದ ಗಿಜಿಗುಡುತ್ತಿದ್ದವು. ಇಂತಹದ್ದೊಂದು ಪರಿಷೆ ಜನಪದ ಗಾಯಕ ಜನಾರ್ದನರಿಂದ ಮಾತ್ರ ಸಾಧ್ಯ ಎನ್ನುವಂತಾಯ್ತು.

ಕಡೆಯ ದಿನ ನಡೆದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಮತ್ತು ಜನರೊಡನೆ ಸಂವಾದ ನಡೆಸಿದ ಭಾರತದ ಖ್ಯಾತ ನಟ ಇರ್ಫಾನ್ ಖಾನ್‌ನ ಮಾತುಗಳು ಅಪ್ಪಟ ನಟನೊಬ್ಬನ ಮಾತಿನಂತಿದ್ದವು.

ಮರುದಿನದ ಪತ್ರಿಕೆಗಳನ್ನು ನೋಡಿದರೆ ಅವಕ್ಕೆ ಈ ನಟನ ಮಾತು ಮುಖ್ಯವಾಗಿರಲಿಲ್ಲ. ಇರಲಿ, ಈ ಮೈಸೂರಿನ ರಂಗಾಯಣದ ಆವರಣ ನೋಡಿದರೆ ನಾವು ಕಳೆದುಕೊಂಡಿದ್ದೆಲ್ಲವನ್ನು ತುಂಬಿ ಕೊಂಡ ಅನುಭವವಾಯ್ತು. ಎಲ್ಲಾ ತಂಡಗಳು ಮತ್ತು ಚಿಂತಕರು ಬಿ.ವಿ. ಕಾರಂತರ ದೂರದೃಷ್ಟಿಯನ್ನು ಕೊಂಡಾಡಿದರು.

ನಾನು ಕಳೆದ ಶತಮಾನದಲ್ಲಿ ನೋಡಿದ ಹಾಸಾಕ್ಯ ಅದೇ ಆಕಾರದಲ್ಲಿ ರಂಗಾಯಣದ ಆವರಣದಲ್ಲಿ ತೆಳ್ಳಗೆ ತಿರುಗಾಡುತ್ತಿರುವುದನ್ನು ನೋಡಿದಾಗಲಂತೂ ಖುಷಿಯಾಯ್ತು. ಹೋಗಿ ಮಾತನಾಡಿಸಿದಾಗ, ಲಂಕೇಶರ ಕಾಲವನ್ನು ನೆನೆಸಿಕೊಂಡು ಮಾತನಾಡಿದರು. ಬೊಚ್ಚಬಾಯಿ ಕೂಡ ಸುಂದರವಾಗಿ ಕಾಣಬಲ್ಲದು ಎಂಬುದು ಹಾಸಾಕ್ಯ ಮಾತಿನ ಹಾಸ್ಯದಲ್ಲಿ ಕಂಡಿತು.


"ಲಂಕೇಶರ 'ಕಲ್ಲು ಕರಗುವ ಸಮಯ' ನಾಟಕವಿದೆ. ನೋಡಲು ಬನ್ನಿ'' ಎಂದು ಅದರ ನಿರ್ದೇಶಕಿ ಸುಮತಿಯವರು ಫೋನ್ ಮಾಡಿದ್ದರಿಂದ ಹೋಗಿದ್ದೆ. ಅಲ್ಲಿ ಜನ್ನಿ ನಿರ್ದೇಶನದ 'ಸಂಸ್ಕಾರ' ನಾಟಕ ನೋಡಿ ಎಂತಹ ನಾಟಕ ಮಿಸ್ ಮಾಡಿಕೊಳ್ಳುತ್ತಿದ್ದೆನಲ್ಲ ಅನ್ನಿಸಿತು.

'ಸಂಸ್ಕಾರ' ಕಾದಂಬರಿ ಓದಿ, ಸಿನಿಮಾ ನೋಡಿ ಬಹಳ ವರ್ಷಗಳಾಗಿ ಹೋಗಿವೆ. ಆದರೆ ನಾಟಕದ ತಾಜಾತನ ಬೆರಗು ಹುಟ್ಟಿಸುವಂತಿತ್ತು. ಇದಕ್ಕೆ ಕಾರಣ ಖ್ಯಾತ ವಿಮರ್ಶಕ ಓ.ಎಲ್. ನಾಗಭೂಷಣಸ್ವಾಮಿ ಹಾಗು ಎಂ.ಸಿ. ಕೃಷ್ಣಪ್ರಸಾದ್ ಅವರು ರಂಗ ರೂಪ ಕೊಟ್ಟು ಅದನ್ನು ನಿರ್ದೇಶಿಸಿರುವ ಜನ್ನಿಯವರ ಶ್ರಮ ಸಾರ್ಥಕವೆನಿಸುವಂತದ್ದು.

ದೂರ್ವಾಸಪುರದ ನಡುವೆಯಿರುವ ಗರುಡಗಂಭದ ಮೇಲೆ ದೀಪ ಉರಿಯುತ್ತಿದೆ. ಆ ಮಬ್ಬುಗತ್ತಲಲ್ಲಿ ಏಳೆಂಟು ಜನ ಕೆಂಪು ಸೀರೆ ಉಟ್ಟು ತಲೆಬೋಳಿಸಿದ ವಿಧವೆಯರು ಪ್ರೇತಗಳಂತೆ ತೆಳ್ಳಗೆ ತಿರುಗಾಡಿ ಹೋಗುತ್ತಾರೆ. ಮುಂದಿನ ದೃಶ್ಯವೇ ಪ್ರಾಣೇಶಾಚಾರ್ಯರ ಮನೆ. ಕಾದಂಬರಿ ಓದುವಾಗ ಯಾವ ದೃಶ್ಯ ನಮ್ಮ ಮನಸ್ಸಿಗೆ ನಾಟಿತ್ತೋ ಅವೇ ದೃಶ್ಯಗಳ ಯಥಾವತ್ ಜೋಡಣೆಯಾಗಿರುವುದರಿಂದ ನೋಡುಗರನ್ನು ನಾಟಕ ವಶೀಕರಣಗೊಳಿಸುತ್ತದೆ. ಇದಕ್ಕೆ ಕಾರಣ, ನಟರ ಪ್ರಬುದ್ಧ ಅಭಿನಯ. ರಂಗಾಯಣ ಆರಂಭವಾದಾಗ ತರುಣರಾಗಿದ್ದ ಈ ನಟರೆಲ್ಲಾ ಈಗೂ ಮಧ್ಯ ವಯಸ್ಕರಾಗಿ ಪ್ರಬುದ್ಧರಾಗಿದ್ದಾರೆ. ಮನೆವಾರ್ತೆ ಜಗದೀಶ್‌ನಂತೂ ಥೇಟ್ ಪ್ರಾಣೇಶಾಚಾರಿಯೆ. ಕಾದಂಬರಿ ಓದಿದವರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿರುವ ಪಾತ್ರಗಳಾದ ದಾಸಾಚಾರಿ, ಲಕ್ಷ್ಮಣ, ಗರುಡಾಚಾರಿ ಎಲ್ಲಕ್ಕಿಂತ ನಾರಣಪ್ಪನಾಗಿ ಅಭಿನಯಿಸಿರುವ ಹುಲುಗಪ್ಪ ಕಟ್ಟಿಮನಿ ಈ ಎಲ್ಲರೂ ಅದ್ಭುತವಾಗಿ ಅಭಿನಯಿಸಿದರು. ಸಂಗೀತವೂ ಅಷ್ಟೆ. ಚಿಂತನ್ ವಿಕಾಸ್ ಮತ್ತು ತಂಡದ ಗಾಯನ; ಬೆಳಕಿನ ಸಂಯೋಜನೆ, ರಂಗಸಜ್ಜಿಕೆ ನಾಟಕವನ್ನು ಒಂದು ಶ್ರೇಷ್ಠ ನಾಟಕವಾಗಿಸುವಲ್ಲಿ ತಮ್ಮ ಪ್ರತಿಭೆಯನ್ನು ಮೆರೆದವು.

ನಾಟಕ ನೋಡಿದನಂತರ ಪ್ರಸಾದನ ಕೋಣೆಗೆ ಹೋಗಿ ಜನಾರ್ದನರನ್ನು ಅಭಿನಂದಿಸಿದೆ. ಏಕೆಂದರೆ 'ಸಂಸ್ಕಾರ' ನಾಟಕಕ್ಕೆ ಒಂದು ಸಾವಿರ ಜನ ಪ್ರೇಕ್ಷಕರು ಬಂದಿದ್ದರು. ಟಿಕೆಟ್‌ಗಳೆಲ್ಲಾ ಆನ್‌ಲೈನ್‌ನಲ್ಲೇ ಬಿಕರಿಯಾಗಿದ್ದವು. ಆದರೂ ಸುಮಾರು ಜನ ಪ್ರೇಕ್ಷಕರು ಬಾಗಿಲಲ್ಲೇ ನಿಂತು ನೋಡಿದರು. ನಮ್ಮ ಹಳೆ ತಲೆಮಾರಿನ ಪ್ರೇಕ್ಷಕರೇ ಜಾಸ್ತಿಯಿರುವಂತೆ ಕಂಡುಬಂದರು. ಪ್ರೇಕ್ಷಕರು ಹೊರಗೋಗುವಾಗ ಯಾರೋ "ನಾವು ಸಿ.ಆರ್. ಸಿಂಹನ ಸಂಬಂಧಿಗಳು" ಎಂದದ್ದು ಕೇಳಿಸಿತು.

"ಶಿವಮೊಗ್ಗಕ್ಕೆ ಈ ನಾಟಕ ತಂದು ಆಡಲು ಎಷ್ಟು ಖರ್ಚಾಗಬಹುದು" ಎಂದು ಜನಾರ್ದನರನ್ನು ಕೇಳಿದೆ. "ಆ ಲೆಕ್ಕ ಬೇಡಿ. ನೀವೆಲ್ಲಾ ಬೆಂಬಲ ಕೊಡಿ ಸಾಕು ಬಂದು ಆಡ್ತೀವಿ" ಎಂದರು. ಈ ಕೆಲಸ ಮಾಡಿಸಲು ಶಿವಮೊಗ್ಗದಲ್ಲಿ ಒಂದು ರಂಗಾಯಣವಿದೆ. ಕಳೆದ ಆರು ತಿಂಗಳಿಂದ ಅದು ಒಂದು ರೀತಿ ನಿಷ್ಕ್ರಿಯವಾಗಿದೆ. ಕಾರಣವೇನೊ ತಿಳಿದಿಲ್ಲ, ಇಕ್ಬಾಲ್ ಸಂಗೀತ ಸಮ್ಮಾನ್



ಮರಾಠಿ ನಾಟಕ ಆಡಿಸುವುದರ ಜೊತೆಗೆ 'ಸಂಸ್ಕಾರ'ವನ್ನು ತಂದು ಆಡಿಸಬಹುದು.

'ಸಂಸ್ಕಾರ' ಪ್ರಕಟಣೆಗೊಂಡು ಅರ್ಧ ಶತಮಾನ ಕಳೆದರೂ ವೇದೋಪನಿಷತ್ತು ಮತ್ತು ಲೌಕಿಕ ಜೀವನದ ಬಗ್ಗೆ ಜಿಜ್ಞಾಸೆಯನ್ನೇ ಮುಂದುವರಿಸಿರುವ ಅದರ ಬಗ್ಗೆ ಸಿಟ್ಟು ಮಾಡಿಕೊಂಡಿರುವ ಬೆಲ್ಜಿಯಂ ಬ್ರಾಹ್ಮಣನಾದ ಬಾಲಗಂಗಾಧರ, ಕುವೆಂಪು ವಿವಿಗೆ ಬಂದು 'ಸಂಸ್ಕಾರ' ಕಾದಂಬರಿಯನ್ನು ಸಾರಾಸಗಟು ಹೀಗಳೆಯುವಂತಹ ಸೆಮಿನಾರು ಮಾಡಿ ಹೋದರು. ಅಂತಹವರಿಗೆ ಸೂಕ್ತ ಉತ್ತರ ಕೊಡಲಾದರೂ ನಾಟಕವನ್ನು ತೋರಬೇಕಿದೆ. ಕೃತಿಯ ಮೂಲಪ್ರಶ್ನೆ ನಾರಣಪ್ಪ ಬ್ರಾಹ್ಮಣ್ಯ ಬಿಟ್ಟರೂ, ಬ್ರಾಹ್ಮಣ್ಯ ಅವನನ್ನು ಬಿಡಲಿಲ್ಲ. ಹಾಗೆಯೇ ನಾಟಕದಲ್ಲಿ ಪ್ರಾಣೇಶಾಚಾರ್ಯರು "ಕಾಮವನ್ನು ನಾನು ಬಿಟ್ಟರೂ ನನ್ನನ್ನು ಕಾಮ ಬಿಡಲಿಲ್ಲ" ಎಂಬ ಸೋಲೊಪ್ಪುವ ಮಾತು, ಸೈದ್ಧಾಂತಿಕ ಸಂಘರ್ಷದಲ್ಲಿ ನಾರಣಪ್ಪ ಗೆಲ್ಲುವ ಸತ್ಯಸಂಗತಿ ಅನಾವರಣಗೊಂಡಿದೆ. ಆದ್ದರಿಂದ ಬೆಲ್ಜಿಯಂ ನಾರಣಪ್ಪ ಬಂದು ನಾಟಕ ನೋಡುವುದು ಒಳ್ಳೆಯದು.

● ಬಿ. ಚಂದ್ರೇಗೌಡ


ಇದಕ್ಕೇ ಗ್ರಹಚಾರ ಅನ್ನೋದು

ಈ ಹಾಳಾದ ಗ್ರಹಗಳಿಗೆ ಸ್ವಂತ ಮನೆ ಅನ್ನೋದು ಇಲ್ಲವೇ ಇಲ್ವೇನೋ. ಅವುಗಳ ಕಣ್ಣಿಗೆ ಪರರ ಮನೆಯೇ ಸುಂದರವಾಗಿ ಕಾಣಬಹುದು. ಅದಕ್ಕೇ ಏನೋ ಅವು ಆವಾಗವಾಗ ತಮ್ಮ ಮನೆ ಬಿಟ್ಟು ಪರರ ಮನೆ ಸೇರಿಕೊಳ್ತವೆ. ಅವು ಎಲ್ಲಿದ್ದರೆ ನಮಗೇನು ಅನ್ನುವಂತೆ ಇಲ್ಲ. ಯಾಕೆಂದರೆ ಹಾಳಾದೋವು ಯಾವ ಮನೇಲಿರ್ತವೋ ಅದರ ಮೇಲೆ ಭೂಲೋಕದ ಸುಖದುಃಖ ನಿಂತದೆ. ವರ್ಷದ ಕೆಳಗೆ ಅವು ಯಾವುದೋ ಸುಭದ್ರ ಮನೇಲಿದ್ದು ಸಂಘಪರಿವಾರಕ್ಕೆ ಶುಭ ಹಾರೈಸುತ್ತಿದ್ದವಂತೆ. ಈಗೇನಾಗ್ಗಿದೆ ಅಂದ್ರೆ ಯಾವುದೋ ಮುರುಕಲು ಮನೆಮೂಲೇಲಿ ಕುಂತು ಬಲೇ ಕಾಟ ಕೊಡ್ತಾ ಅವಂತೆ. ಪಾಪ ಅದರ ಮುದ್ದಿನ ಕೂಸು ಅದಲ್ಲ ಎಬಿವಿಪಿ ಅಂತಾವ ಅದ್ಕಂತೆ ಹಿಂಗೆ ಮಾಡ್ತಾ ಇರೋದು: ಅದೂ ಹೆಂಗೇ ಅಂತೀರಿ. ಅದ್ರ ಲೀಡ್ರು ಅವ್ನಲ್ಲ ಅವುನ್ಗೆ ಎಎಸ್‌ಎ ಹುಡುಗ್ರು ಬಂದು ಜಡಿಯೋ ಹಂಗೆ ಮಾಡವಂತೆ. ಬೇರೆ ಸಮಯದಲ್ಲಾದರೆ ಬಂದು ತರಹ ಇತ್ತು, ತಮ್ಮದೇ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿ ದ್ದಾಗಲೂ ಹಿಂಗಾಗದೆ ಅಂದ್ರೆ....

ಇದು ಬಂಡಾರು ದತ್ತಾತ್ರೇಯ ಅವರ ಕಿವಿಗೂ ಬಿದ್ದದೆ. ಅವರು ಎನ್‌ಡಿಎ ಮಂತ್ರಿಮಂಡಳದವರೇ ಅಲ್ವಾ, ರೇಗೋಗದೆ. ಈ ಜುಜುಬಿ ಎಎಸ್‌ಎ ಅವರು ಹಿಂಗೆ ಮಾಡ್ತಾ ಬಿದ್ದವಲ್ಲ ಇವ್ಕೆ ಸರಿಯಾಗಿ ಬುದ್ಧಿ ಕಲಿಸ್ಬೇಕು. ಅಂತ ಏನ್ಮಾಡವ್ರೆ, ತಮಗೆ ಹಿಂಗಿಂಗೆ ಬೇಕೋ ಹಂಗಂಗೆ ಕಾಗ್ದ ಬರ್ದವ್ರೆ. ಯಾರ್ಗೆ? ಮಾನವ ಸಂಪನ್ಮೂಲ ಇಲಾಖೆಯೋರ್ಗೆ. ಹೈದರಾಬಾದ್ ಕೇಂದ್ರೀಯ ವಿದ್ಯಾಲಯ ಅನ್ನೋದು ಜಾತಿವಾದಿಗಳ, ಉಗ್ರಗಾಮಿಗಳ, ದೇಶದ್ರೋಹಿಗಳ ತಂಗುದಾಣ ಆಗಿದೆ ಅಂತಾನೂ ಸೇರ್ಸವ್ರೆ. ಅವರಿಗೆ ಹಂಗನ್ನೋದು ನ್ಯಾಯವೇಯ. ಎಬಿವಿಪಿ ವಿರೋಧಿಸುವವರು ಅವರೇ ಅಲ್ವಾ...! ಈ ಪತ್ರ ಸ್ಮೃತಿ ಇರಾನಿಯವರಿಗೂ ಹೋಗದೆ. ಅವರೇ ಆ ಇಲಾಖೆ ಮುಖ್ಯಸ್ಥರು ಅದ್ಕೆ ಅದ ಓದಿದ ಮೇಲೆ ತಮ್ಮ ಮುದ್ದಿನ ಕೂಸಿಗೆ ಹಿಂಗೆಲ್ಲ ಹಿಂಸೆ ಆಗ್ತಿದೆಯಲ್ಲ ಅಂತ ಅವ್ರ ಕರುಳು ಚುರುಕ್ ಅಂದದೆ. ಹಷ್ಟೇ ಆಗಲಿ ಹೆಂಗರುಳು ಪಾಪ. ತಮ್ಮ ಮುದ್ದಿನ ಕೂಸನ್ನು ಹಿಂಸಿಸಿದವರ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಿ ಅಂತ ತಕ್ಷಣ ಆದೇಶ ನೀಡವ್ರೆ- ಇದು ದಕ್ಷತೆ ಅಂದ್ರೆ.

ಕೇಂದ್ರೀಯ ವಿಶ್ವವಿದ್ಯಾಲಯ ಅಂದ್ರೆ ಸುಮ್ನೆ ಆಯ್ತಾ ಅಲ್ಲಿದ್ದೋರೂ ದಕ್ಷರೇಯ. ಮಂತ್ರಿ ಕಾಗದ ಬಂದತಕ್ಷಣ ಕಾರ್ಯಪ್ರವೃತ್ತರಾಗವ್ರೆ. ಯಾರ್‍ಯಾರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಅನ್ನೋದನ್ನು ತೀರ್ಮಾನಿಸೋರೆ ಅಲ್ವಾ. ಒಂದು ಸಮಿತಿ ಅಂತ ಮಾಡಿ ಐದು ಲಿಸ್ಟ್ ಮಾಡ್ಕೊಂಡ್ರು ಹಾಸ್ಟೆಲಿಂದ ವಜಾ ಮಾಡವ್ರೆ. ಕೆಲವು ಸ್ಥಳಗಳಿಗೆ ಹೋಗದಂತೆ ನಿರ್ಬಂಧ ಹೇರವ್ರೆ. ದೇವಸ್ಥಾನದಲ್ಲಿ ಕೆಲವು ಜಾತಿಗೆ ಎಲ್ಲರನ್ನೂ





ಸೇರಿಸಲ್ವಲ್ಲ ಹಂಗೇ ಇಲ್ಲೂ ಮಾಡವ್ರೆ ಅಷ್ಟೇಯ!

ಎಲ್ಲ ಮುಗೀತಲ್ಲ ಖುಷಿಖುಷಿಯಾಗಿರೋಣ ಅಂದ್ರೆ ಗ್ರಹಚಾರ ಕಾಡ್ತು ನೋಡಿ. ಹಾಸ್ಟೆಲಿನಿಂದ ವಜಾ ಆಗಿದ್ದವರಲ್ಲಿ ಒಬ್ಬ ಹುಡುಗ ರೋಹಿತ್ ವೇಮುಲ ಅನ್ನೋನು ಪ್ರತಿಭಾವಂತನಂತೆ. ಅವನೇನು ಮಾಡವ್ನೆ. ಅವಮಾನ ಆಯ್ತಲ್ಲ ಅಂತಾನೋ ಏನೋ ನೇಣು ಬಿಗಿದುಕೊಂಡು ಸತ್ತವ್ನೆ. ಅವನೇ ನೇಣಾಕಿಕೊಂಡಿದ್ನೆ ನೆಪ ಮಾಡ್ಕೊಂಡು ಇದು ಆತ್ಮಹತ್ಯೆಯಲ್ಲ ಮೇಲ್ವರ್ಗದವರಿಂದ ಆದ ಕೊಲೆ, ಹಂಗೆ ಹಿಂಗೆ ಅಂತ ಕೆಲವರು ಪ್ರತಿಭಟನೆ ಶುರು ಮಾಡಿದ್ರು. ಸಂಘಪರಿವಾರದವರೇನು ನೀನು ಸಾಯಿ ಅಂದಿದ್ರಾ ಇಲ್ವಲ್ಲ, ಹಾಸ್ಟೆಲಿನಿಂದ ತೆಗೆದಿದ್ನೆ, ಅವಮಾನ ಅಂದು ಕೊಂಡ್ರೆ ಅದೇನು ಮಾಡಾಕಾಯ್ತದೆ. ಮುಷ್ಕರ ಹೂಡಿದ್ರೆ ಹೂಡ್ಕಳ್ಳಿ. ಒಂದು ನಾಕು ದಿನ ಹಿಂಗೆ ಹಾರಾಡ್ತವೆ ಆಮೇಲೆ ತೆಪ್ಪಗಾಯ್ತವೆ ಅನ್ನಬಹುದಾಗಿತ್ತು, ಆದ್ರೆ ಗ್ರಹಚಾರ ನೋಡಿ ಒಂದು ಕಾಲೇಜಿನಲ್ಲಿ ನಡೆಯಬೇಕಾಗಿದ್ದ ಪ್ರತಿಭಟನೆ ದೇಶದಾದ್ಯಂತ ಹರಡ್ಬುಟ್ಟದೆ. ದಲಿತ ವಿರೋಧಿ ಸರ್ಕಾರ ಇದು ಅನ್ನೋ ಕೂಗು ಎದ್ದದೆ. ಸಂಘಪರಿವಾರವನ್ನು ಸಂಕಷ್ಟಕ್ಕೆ ಗುರಿ ಮಾಡಿದ್ದು ಇದು ದಲಿತ ವಿರೋಧಿ ಪಟ್ಟ, ರೋಹಿತ್ ಸಾವಲ್ಲ, ಹಾಗೆ ಆಗಬೇಕಾದದ್ದು ಸಹಜವೇ. ಮುಂದಿನ ವರ್ಷ ಉತ್ತರ ಪ್ರದೇಶದಲ್ಲಿ, ಅದೂ ಶೇಕಡ 22 ರಷ್ಟು ದಲಿತರಿರುವಾಗ ಚುನಾವಣೆ ಎದುರಿಸಬೇಕಾದ್ರೆ ಹಿಂಗಾಗಬೇಕಾದ್ದೆ.

ದಲಿತ ವಿರೋಧಿಪಟ್ಟ ಕಳಚಿಕೊಳ್ಳಲು ಸಂಘಪರಿವಾರ ಶಾನೆ ಪರದಾಡಿತು. ಅವಶ್ಯಕತೆ ಇಲ್ಲದಿದ್ದರೂ ರೋಹಿತ್ ಮೂಲ ಹುಡುಕಿತು. ಸಿಕ್ಕಿತು ದಾಖಲೆ. ಅವನ್ತಂದೆ ವಡ್ಡರವ. ಪುರುಷಪುಂಗವ ಮಕ್ಕಳನ್ನು ಹುಟ್ಟಿಸಿ ಪರಾರಿಯಾಗಿದ್ದ ನಿಜ. ಸಾಕಿದ ತಾಯಿ ದಲಿತೆ. ಆ ತಾಯಿಯ ಮಡಿಲಲ್ಲಿ ಬೆಳೆದ ಮಗು ರೋಹಿತ್. ಅವನಿಗೆ ಸಿಕ್ಕಿದ್ದು ದಲಿತ ಸಂಸ್ಕಾರ. ಇದನ್ನು ಸಂಘಪರಿವಾರ ನಂಬಲು ಸಿದ್ಧರಿರಲಿಲ್ಲ. ಶಾಸ್ತ್ರಗಳ ಪ್ರಕಾರ ಬೀಜ ಪ್ರಧಾನ, ಭೂಮಿ ಅಲ್ಲ. ಇದನ್ನೇ ಸಾರಿದರು. ಪರಾರಿಯಾಗಿದ್ದ ರೋಹಿತ್ ತಂದೆಯನ್ನು ಎಳೆದುಕೊಂಡು ಬಂದರು. ಮಾಧ್ಯಮದವರ ಎದುರು 'ನಾನು ರೋಹಿತ್ ತಂದೆ. ನಾನು ದಲಿತ ಅಲ್ಲ, ಒಡ್ಡರವ' ಎಂದು ಹೇಳಿಸಿದರು. ಇಷ್ಟೆಲ್ಲ ಮಾಡಿದರೂ ಜನರು ನಂಬಲೇ ಇಲ್ಲ, ರೋಹಿತ್ ದಲಿತ ಅಂತಾನೆ ಅನ್ತವೆ. ಇದು ಗ್ರಹಚಾರ ಅಂದರೆ.

ಸ್ಮೃತಿ ಇರಾನಿ ಮೇಲೆ 'ದಲಿತ ವಿರೋಧಿ' ಪಟ್ಟ ಕಳಚುವ ಜವಾಬ್ದಾರಿ ಬಿದ್ದಿತ್ತಲ್ಲಾ, ಮಾಧ್ಯಮಗೋಷ್ಠಿ ಕರೆದರು. ರೋಹಿತ್ ದಲಿತ ಅಲ್ಲ ಅನ್ನುವುದು ಠುಸ್ ಎಂದಿತ್ತಲ್ಲಾ, ಅದಕ್ಕೇನು ಮಾಡಿದರು 'ರೋಹಿತ್ ಅನ್ನು ವಜಾ ಮಾಡಿದ ಸಮಿತಿ ಅಧ್ಯಕ್ಷರು ದಲಿತರೇ ಆಗಿದ್ದರು' ಅಂದುಬಿಟ್ಟರು. ಎಂತಹ ದುಃಸ್ಥಿತಿ ಬಂತುನೋಡಿ. 'ಸತ್ಯವೇ ನಮ್ಮ ತಾಯಿತಂದೆ', 'ಸತ್ಯವೇ ನಮ್ಮ ಬಂಧುಬಳಗ' ಅನ್ನೋದನ್ನ ಕಲಿಸಬೇಕಾದವರು 'ಸುಳ್ಳೇ ನಮ್ಮ ತಾಯಿತಂದೆ', 'ಸುಳ್ಳೇ ನಮ್ಮ ಬಂಧುಬಳಗ', ಒಟ್ಟಿನಲ್ಲಿ 'ಸುಳ್ಳೇ ನಮ್ಮ ಸರ್ವಸ್ವ' ಅನ್ನೋ ಹಂಗೆ ನಡೆಯಬೇಕಾಯಿತು. ಅದೇನು ಗ್ರಹಚಾರವೋ ಏನು ಕತೆಯೋ ಸ್ಮೃತಿ ಇರಾನಿ ಮಂತ್ರಿಣಿ ಅಲ್ವಾ. ತಮ್ಮ ಸುಳ್ಳು ಹೇಳಿಕೇನೇ ಸತ್ಯ ಅನ್ನೋ ಹಂಗೆ ಮಾಧ್ಯಮಗಳು ಬಿಂಬಿಸ್ತಿವೆ. ಜನ ಅದನ್ನು ನಂಬ್ತಾರೆ. ಬಂದ ಸಂಕಟ ಪರಿಹಾರ ಆಗುತ್ತೆ ಅಂದುಕೊಂಡಿದ್ದರು. ಅದೂ ನಿಜವೇ ಅಲ್ವಾ. ಇದು ಸರಿಯೋ ತಪ್ಪೋ ಅಂತ ಯಾರು ಪರೀಕ್ಷಿಸೋರು. ಮಾಧ್ಯಮದಲ್ಲಿ ಬಂದದ್ದೇ ಸತ್ಯ ಅಂದ್ಕೋತೀವಿ ತಾನೆ. ಆದ್ರೆ ಇಲ್ಲೇನಾಗದೆ ಕೇಂದ್ರೀಯ ವಿಶ್ವವಿದ್ಯಾಲಯದ ಕೆಲವು ಪ್ರಾಧ್ಯಾಪಕರೇ 'ಸ್ಮೃತಿ ಹೇಳಿಕೆ ಸುಳ್ಳು. ಆ ಸಮಿತಿಯ ಅಧ್ಯಕ್ಷ ದಲಿತ ಅಲ್ಲ, ಅಷ್ಟೇ ಏಕೆ, ಆ ಸಮಿತಿಯಲ್ಲಿ ದಲಿತರೇ ಇರಲಿಲ್ಲ, ಇದ್ದ ಒಬ್ಬ ದಲಿತನೂ ಸಹ ಸದಸ್ಯ ಮಾತ್ರ ಅಂದುಬಿಟ್ಟವ್ರೆ. ಅದ್ಕೂ ಮಾಧ್ಯಮಗಳು ಸಖತ್ತಾಗಿ ಪ್ರಚಾರ ನೀಡವೆ. ಇದು ಉರಿಯೋ ಬೆಂಕಿಗೆ ತುಪ್ಪ ಸುರಿದಂಗಾಗದೆ. ಇದಕ್ಕೇ ಗ್ರಹಚಾರ ಅನ್ನೋದು.

ಇಂತಹ ವಿಷಯಗಳು ಬಂದಾಗ ನಮ್ಮ ಪ್ರಧಾನಿ ಮೌನಿ ಬಾಬಾ ಆಗ್ತಾರೆ. ಅಂದ್ರೆ ಗಾಂಧಿಯವರ ಮೂರು ಕೋತಿ ತರಹ ಆಗ್ತಾರೆ ಅಂತ ಅಲ್ಲ. ದಲಿತರ ಓಟಿನ ಬಗ್ಗೆ ತಲೆ ಕೆಡಿಸಿಕೊಂಡಿರ್ತಾರೆ. ಹಾಳಾದ ರೋಹಿತ್ ಡೆತ್‌ನೋಟ್ ಬರ್ದವ್ನೆ ಅದರಲ್ಲಿ ತನ್ನ ಸಾವಿಗೆ ಯಾರನ್ನೂ ಹೊಣೆ ಮಾಡಿಲ್ಲ. ಮಾಡಿದಿದ್ರೆ ನಮ್ಮವರೇ ಡೆತ್‌ನೋಟ್ ಇಲ್ಲದ ಹಾಗೆ ಮಾಡ್ತಿದ್ರು. ಯಾರ ಹೆಸರು ಹೇಳಿಲ್ಲವಲ್ಲ ಅಂತ ಹಂಗೇ ಬಿಟ್ಟದ್ದಾರೆ. ಅದ್ಕೂ ಇಲ್ದಂಗೆ ಮಾಡಿದ್ರೆ ಆಗ್ತಿತ್ತು, ಈಗ ಅದ್ನೇ ಹಿಡ್ಕಂಡು ದಲಿತರಿಗೆ ಆಗುತ್ತಿರುವ ಅನ್ಯಾಯಗಳ ಕುರಿತು ಅರುಚ್ತಾ ಅವ್ರೆ ಎಂದೆಲ್ಲ ಯೋಚಿಸಿರಬಹುದು. ಮನಸ್ಸಿನಲ್ಲಿರೋದ್ನೆಲ್ಲ ಬಹಿರಂಗಪಡಿಸೋಕೆ ಸಾಧ್ಯವೆ? ಅದಕ್ಕೇ ಅಂಬೇಡ್ಕರ್ ವಿಶ್ವವಿದ್ಯಾಲಯದ ಘಟಿಕೋತ್ಸವಕ್ಕೆ ಹೋದಾಗ ರೋಹಿತ್ ವಿಷಯ ಪ್ರಸ್ತಾಪಿಸಿದರು. ವೇಮುಲ ಸಾವಿಗೆ ಮಮ್ಮಲ ಮರುಗಿದರು. ಭಾರತ ಮಾತೆಗೆ ಆದ ನಷ್ಟಕ್ಕಾಗಿ ಪರಿತಪಿಸಿದರು. ಹೆತ್ತ ತಾಯಿಯ ಕರುಳಸಂಕಟ ನೆನೆದು ಭಾವುಕರಾದರು. ಇದನ್ನೆಲ್ಲ ಕಂಡು. ಕೇಳಿದ ಮೇಲೂ ಜನ, ಅವರ ಅಂತರಾಳ ತಿಳಿಯಲು ಬಂದವರಂಗೆ, ಇಷ್ಟೊಂದು ಮರುಕ ತೋರ್‍ಸೋರು ಜರುಗಿಸುವ ಕ್ರಮದ ಸುದ್ದಿ ಎತ್ತಲಿಲ್ಲ ಯಾಕೆ ಅಂತ ಕುಹಕ ಆಡ್ತಾರಲ್ಲಾ... ಇದಕ್ಕೇ ಗ್ರಹಚಾರ ಅನ್ನೋದು.

● ಎಚ್ಚೆಲ್ಕೆ

ನಿಜ ಇಸ್ಲಾಂ ಮುಖಕ್ಕೆ ಮಸಿ ಬಳಿಯುವ ಇದು ಯಾವ ಇಸ್ಲಾಂ?

ಇಲ್ಲಿಯ ವರೆಗೆ ಇತಿಹಾಸ ಕಂಡ ಎಲ್ಲ ಕ್ರೂರತ್ವಗಳನ್ನು ನೆನಪಿಸುವ ಹಾಗೆ ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ (ಐಎಸ್‌ಐಎಸ್-ಐಸಿಸ್-ಐಎಸ್) ಉಗ್ರರು ಹಿಂಸಾಕೃತ್ಯಗಳಲ್ಲಿ ತೊಡಗಿದ್ದಾರೆ. ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್ ಜರ್ಮನಿಯ ನಾಗರಿಕರನ್ನು ಮೋಸಗೊಳಿಸಿ, ಅವರು ಹಿಂಸೆಯಲ್ಲಿ ತೊಡಗುವಂತೆ ಪ್ರಚೋದನೆ ಮಾಡಿದ ರೀತಿಯಲ್ಲಿ ಐಎಸ್ ಉಗ್ರರು ಜಗತ್ತಿನ ಮುಸ್ಲಿಮರನ್ನು ಪ್ರಚೋದನೆ ಮಾಡುವ ವಿಫಲ ಯತ್ನ ನಡೆಸಿದ್ದಾರೆ. ಇವರ ವಿರುದ್ಧ ಜಗತ್ತಿನ ವಿವಿಧ ದೇಶಗಳ 70 ಸಾವಿರ ಇಸ್ಲಾಂ ಧರ್ಮ ಪಂಡಿತರು ಪ್ರತಿಕ್ರಿಯೆ ವ್ಯಕ್ತಪಡಿಸಿದರೂ ಸಾಮ್ರಾಜ್ಯಶಾಹಿ ಹಿಡಿತದಲ್ಲಿರುವ ಅನೇಕ ಮಾಧ್ಯಮಪತಿಗಳು ಆ ಸುದ್ದಿಗೆ ಹೆಚ್ಚಿನ ಪ್ರಚಾರ ಕೊಡದೆ ಹೋದದ್ದು ಐಎಸ್ ಹೀನಕೃತ್ಯದ ಹಿಂದೆ ಸಾಮ್ರಾಜ್ಯಶಾಹಿಗಳ ಕೈವಾಡವೂ ಇದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಅವರು ಬಳಸುವ ಶಸ್ತ್ರಾಸ್ತ್ರಗಳು ಮತ್ತು ಯುದ್ಧ ವಾಹನಗಳು ಅಮೆರಿಕ ಸಾಮ್ರಾಜ್ಯಶಾಹಿಗಳ ಕೊಡುಗೆ ಎಂಬುದು ಸಾಬೀತಾಗಿದೆ. ಇಸ್ರೇಲ್ ಸಹಾಯದೊಂದಿಗೆ ಅಮೆರಿಕದವರು ಐಎಸ್ ಉಗ್ರರಿಗೆ ಸಹಾಯ ಮಾಡುತ್ತಿದ್ದಾರೆ ಎಂಬುದನ್ನು ಮಾನವತಾವಾದಿಗಳು ಸಾಕ್ಷ್ಯಾಧಾರಗಳೊಂದಿಗೆ ಎತ್ತಿತೋರಿಸುತ್ತಿದ್ದರೂ ಸಾಮ್ರಾಜ್ಯಶಾಹಿ ಕೈಗೊಂಬೆಗಳಾದ ವಿಶ್ವವ್ಯಾಪಿ ವಿದ್ಯುನ್ಮಾನ ಮಾಧ್ಯಮಗಳು ಹಾಗೂ ದೊಡ್ಡ ಪತ್ರಿಕೆಗಳು ಆ ಕಡೆ ಗಮನ ಹರಿಸುತ್ತಿಲ್ಲ. ಆದರೆ ಈ ಅಮಾನುಷ ಉಗ್ರರು 'ಅಲ್ಲಾ ಹೋ ಅಕ್ಬರ್' ಎಂದು ನಾಟಕೀಯವಾಗಿ ಘೋಷಣೆ ಕೂಗುತ್ತ ಕುಂಬಳ ಕಾಯಿ ಕೊಯ್ಯುವ ಹಾಗೆ ಅಮಾಯಕರ ರುಂಡಮುಂಡಗಳನ್ನು ಬೇರ್ಪಡಿಸುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಲಭಿಸುವಂತೆ ಮಾಡುತ್ತಿದ್ದಾರೆ.

ಇವರ ಇಸ್ಲಾಂ ವಿಚಿತ್ರವಾಗಿದೆ. ಇವರ ಪ್ರಕಾರ ಇಸ್ಲಾಂ ವಿರುದ್ಧ ಐತಿಹಾಸಿಕವಾಗಿ ದ್ವೇಷ ಸಾಧನೆ ಮಾಡಿದ ಜನಾಂಗದ ಮಹಿಳೆಯರು ಯುದ್ಧ ಕೈದಿಗಳಾಗಿ ಸಿಕ್ಕರೆ ಅವರ ಮೇಲೆ ಅತ್ಯಾಚಾರ ಮಾಡುವುದು, ಮಾರಾಟ ಮಾಡುವುದು ಧರ್ಮಸಮ್ಮತ! ಇಸ್ಲಾಂಗೆ ಮತಾಂತರ ಗೊಂಡವರು ಮರಳಿ ತಮ್ಮ ಹಳೆಯ ಧರ್ಮಕ್ಕೆ ಹೊರಟರೆ ಮತ್ತು ಮುಸ್ಲಿಮರು ಇನ್ನೊಂದು ಧರ್ಮ ಸ್ವೀಕರಿಸಲು ಹೊರಟರೆ ಅವರನ್ನು ವಧಿಸುವುದು ಧರ್ಮಸಮ್ಮತ! ಹೆಣ್ಣು ಮಕ್ಕಳು ಮುಖ ತೋರಿಸುವುದು ಅಧರ್ಮ! ಗಂಡ ಬಯಸಿದಾಗಲೆಲ್ಲ ಕಾಮತೃಷೆ ತೀರಿಸದೆ ಇರುವುದು ಅಧರ್ಮ! ಜೆಹಾದ್‌ನಲ್ಲಿ ಹುತಾತ್ಮರಾದ ಪ್ರತಿಯೊಬ್ಬರಿಗೂ ಸ್ವರ್ಗದಲ್ಲಿ 72 ಅಚ್ಯುತ ಕನ್ಯೆಯರು ಕಾಯುತ್ತಿರುತ್ತಾರೆ! ಹುತಾತ್ಮರು ತಮ್ಮ ಪಾಲಿಗೆ ಬಂದ ಕನ್ನೆಯರನ್ನು ಭೋಗಿಸುತ್ತಾರೆ! ಎಂದು ಮುಂತಾಗಿ ಅಪಪ್ರಚಾರವನ್ನು ಅವರದೇ ಆದ ಸಾಮಾಜಿಕ ಜಾಲತಾಣಗಳ ಮೂಲಕ ಉಗ್ರರು ಹರಿಬಿಡುತ್ತಲೇ ಇರುತ್ತಾರೆ. ಜಗತ್ತಿನ ಅನೇಕ ದೇಶಗಳ ಮುಸ್ಲಿಮ್ ಯುವಕರು ಮತ್ತು ಯುವತಿಯರು ಅತ್ಯಲ್ಪ ಪ್ರಮಾಣದಲ್ಲಾದರೂ ಈ ಮೋಸಕ್ಕೆ ಬಲಿಯಾಗುತ್ತಿದ್ದಾರೆ.



ಇತ್ತೀಚೆಗೆ ಸಿರಿಯಾದ ರಖ್ಖಾದಲ್ಲಿ ಹೃದಯವಿದ್ರಾವಕ ಘಟನೆಯೊಂದು ನಡೆಯಿತು. ಅಲ್ಲಿನ ಇಸ್ಲಾಮಿಕ್ ಉಗ್ರರ ಸೈನ್ಯಕ್ಕೆ ಸೇರಿದ ಅಲಿ ಸಕ್ರ ಅಲ್ ಕಾಸಿಂ ಎಂಬ 20 ವರ್ಷದ ಯುವಕನ 45 ವರ್ಷದ ತಾಯಿ ಲೆನಾ ಅಲ್ ಕಾಸಿಂ 'ಆ ಉಗ್ರರ ಸಂಗದಿಂದ ತಪ್ಪಿಸಿಕೊಂಡು ಹೋಗು' ಎಂದು ಮಗನಿಗೆ ತಿಳಿಸಿದ್ದಾಳೆ. ಉಗ್ರರಿಗೆ ತನ್ನನ್ನೇ ಸಮರ್ಪಿಸಿಕೊಂಡಿರುವ ಮಗ ಅಲಿ 'ಪಲಾಯನ ಮಾಡಲು ತಾಯಿ ಒತ್ತಾಯಿಸುತ್ತಿದ್ದಾಳೆ' ಎಂದು ಉಗ್ರರ ನಾಯಕರಿಗೆ ತಿಳಿಸಿದ್ದಾನೆ. 'ನಿನ್ನ ತಾಯಿ ಧಾರ್ಮಿಕ ಕಟ್ಟಳೆಗಳನ್ನು ಮೀರಿದ್ದಾಳೆ. ಆದ್ದರಿಂದ ರಖ್ಖಾ ಹೊರವಲಯದಲ್ಲಿ ಆಕೆ ಕೆಲಸ ಮಾಡುವ ಕಚೇರಿಯ ಮುಂದೆಯೆ ಸಾರ್ವಜನಿಕವಾಗಿ ನೀನೇ ಗುಂಡಿಕ್ಕಿ ಕೊಲ್ಲಬೇಕು' ಎಂದು ಆ ಉಗ್ರರ ನಾಯಕ ಅಲಿಗೆ ಆದೇಶ ಮಾಡಿದ್ದಾನೆ. ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ ಅಲಿ ಭಾರಿ ಜನಸಮೂಹದ ಎದುರೇ ತನ್ನ ತಾಯಿಯನ್ನು ಗುಂಡಿಟ್ಟು ಕೊಂದಿದ್ದಾನೆ!

ಇಸ್ಲಾಂ ಧರ್ಮದ ಕಟ್ಟಳೆ ಮೀರುವವರು, ಧರ್ಮ ತೊರೆಯುವವರು ಮತ್ತು ತೊರೆಯುವಂತೆ ಒತ್ತಾಯ ಮಾಡುವವರಿಗೆ ಮರಣ ದಂಡನೆ ಶಿಕ್ಷೆ ನೀಡಬೇಕೆಂಬುದು ಸಿರಿಯಾದಲ್ಲಿ ಐಎಸ್ ನಿಯಮವಾಗಿದೆ. ತಮ್ಮದೇ ಆದ ನಿಯಮದ ಪ್ರಕಾರವೇ ಉಗ್ರರು ಮಗನಿಂದ ತಾಯಿಯ ಹತ್ಯೆ ಮಾಡಿಸಿದ್ದಾರೆ.

ನಿಜ ಇಸ್ಲಾಂ

ಸ್ವರ್ಗವು ತಾಯಿಯ ಪದತಲದಲ್ಲಿದೆ ಎಂದ… ಮುಹಮ್ಮದ್ ಪೈಗಂಬರರು (570-632) ತಿಳಿಸಿದ್ದಾ… ಏಕದೇವೋಪಾಸನೆ ಮತ್ತು ಶಾಂತಿಯನ್ನು ಪ್ರತಿಪಾದಿಸು… ಇಸ್ಲಾಂ ಎಂದರೆ ಏಕ ದೇವೋಪಾಸಕರಾಗಿದ್ದು ಆ ಅಲ್ಲಾಹು… ಶರಣಾಗತರಾಗಿರುವುದು ಮತ್ತು ನೆಮ್ಮದಿಯಿಂ… ಶಾಂತಿಯುತವಾಗಿ ಬದುಕುವುದು.

1500 ವರ್ಷಗಳ ಹಿಂದೆ ಅರಬಸ್ತಾನದಲ್ಲಿ ಇದ್ದಂ… ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಪೈಗಂಬರರು ಮಹಿಳೆಯ… ಘನತೆಯನ್ನು ಕಾಪಾಡಲು ಮಾಡಿದ ಪ್ರಯತ್ನ ಅಗಾಧವಾಗಿ…

'ಅವರೊಂದಿಗೆ ಕರುಣೆಯಿಂದ ಬದುಕಿರಿ. ನೀ… ಅವರನ್ನು ತಿರಸ್ಕರಿಸಿದರೆ, ದೇವರು ಕೊಟ್ಟ ಒಳ್ಳೆಯದನ್… ನೀವು ತಿರಸ್ಕರಿಸುತ್ತಿರಬಹುದು' ಎಂದು ಕುರಾನಿನ 4… ಅಧ್ಯಾಯದ (ಸೂರಾ) 1ನೇ ಸೂಕ್ತ (ಆಯತ್) ಹೇಳುತ್ತ… 'ಸುಶೀಲೆಯರಾದ ಸ್ತ್ರೀಯರ ಮೇಲೆ ಯಾರು ಆರೋ… ಹೊರಿಸುತ್ತಾರೋ ಮತ್ತು ನಾಲ್ಕು ಮಂದಿ ಸಾಕ್ಷಿದಾರರ… ಅವರು ತರುವುದಿಲ್ಲವೋ ಅವರಿಗೆ 80 ಬಾರೇಟುಗಳ… ಹೊಡೆಯಿರಿ. ಅವರ ಸಾಕ್ಷ್ಯಗಳನ್ನು ಸ್ವೀಕರಿಸಬೇಡಿ. ಅವ… ಧರ್ಮಭ್ರಷ್ಟರು' ಎಂದು 24ನೇ ಸೂರಾದ 4… ಆಯತ್‌ನಲ್ಲಿ ಹೇಳಲಾಗಿದೆ. 2ನೇ ಸೂರಾದ 187… ಆಯತ್‌ನಲ್ಲಿ ಹೇಳಲಾದ 'ಗಂಡಹೆಂಡತಿಗೆ ಪೋಷಾಕ… ಹೆಂಡತಿ ಗಂಡನಿಗೆ ಪೋಷಾಕು' ಎಂಬ ಮಾತ… ಗಂಡಹೆಂಡಂದಿರ ಅನ್ಯೋನ್ಯ ಸಂಬಂಧವನ್ನು ಸೂಚಿಸುತ್ತ… ಇದರಲ್ಲಿ ಸಮಾನತೆಯ ಅಂಶ ಅಡಗಿದೆ.

'ವಿವಾಹ ವಿಚ್ಛೇದನ ಮಾಡಲ್ಪಟ್ಟ ಸ್ತ್ರೀಗೆ ವಾಡಿಕೆಯಂ… ಜೀವನೋಪಾಯಕ್ಕೆ ಏನಾದರೂ ಕೊಡಬೇಕು. ಇದ… ದೈವಭಕ್ತರ ಮೇಲೆ ಬಾಧ್ಯತೆಯಾಗಿದೆ' ಎಂದು 2ನ… ಸೂರಾದ 241ನೇ ಆಯತ್ ತಿಳಿಸಿದೆ. ಹೆಂಡ… ತಪ್ಪಿತಸ್ಥಳೆಂದು ಸಿದ್ಧವಾದ ಮೇಲೂ ಹೆಣ್ಣಿನ ಬಗ್ಗೆ ಇರು… ಕಾಳಜಿಯ ದ್ಯೋತಕ ಇದಾಗಿದೆ.

ಕುರಾನ್ ಎಲ್ಲ ದೃಷ್ಟಿಯಿಂದಲೂ ಮಹಿಳೆಯರ ಮತ್… ಬಡವರ ಪಕ್ಷಪಾತಿಯಾಗಿದೆ. ಮದುವೆಗೆ ಕನ್ಯೆಯ ಸಮ್ಮ… ಇರಬೇಕು. ತಲಾಖ್ ಪಡೆದವರು ಮತ್ತು ವಿಧವೆಯರ… ಮರು ಮದುವೆಯಾಗಬಹುದು. ರತಿಕ್ರೀಡೆಯಲ್ಲಿ ಪುರುಷರ… ವಿಕೃತಕಾಮಿಗಳಾಗಬಾರದು. ಪುರುಷರ ಕಿರುಕುಳ… ಒಳಗಾಗುವ ಸಾಧ್ಯತೆ ಇರುವುದರಿಂದ ಮಹಿಳೆಯರು ಮ… ಮುಚ್ಚಿಕೊಂಡಿರಬೇಕು ಎಂದು ಮುಂತಾಗಿ ಮಹಿಳೆಯ… ಬಗ್ಗೆ ಇಸ್ಲಾಂ ಧರ್ಮ ಕಾಳಜಿ ತೋರಿದೆ. ತಂದೆಯ…

'ದಕ್ಷಿಣಾಯನ': ದಂಡಿಯಲ್ಲಿ 30-1-16ರಂದು ಸರ್ವ-ಭಾಷಾ-ಸಂವಾದ

ದಕ್ಷಿಣ ಎಂಬ ಪದಕ್ಕೆ ಈಗ ಹಲವು ಅರ್ಥಗಳಿವೆ. ಮಹಿಳಾ ದೃಷ್ಟಿಕೋನ ಮತ್ತು ವಿವೇಕಗಳನ್ನು ದಕ್ಷಿಣವು ಪ್ರತಿನಿಧಿಸುತ್ತದೆ. ಎಲ್ಲೆಲ್ಲಿ ಜನ ಚಳವಳಿ ಉಸಿರಾಡುತ್ತಿದೆಯೋ ಆ ಎಲ್ಲಾ ಪ್ರದೇಶಗಳು ದಕ್ಷಿಣವೆಂದು ಕರೆಯಲ್ಪಡುತ್ತಿವೆ. ದಕ್ಷಿಣ ಎನ್ನುವುದು ಪರ್ಯಾಯದ ಒಂದು ದಾರಿಯಾಗಿ ನೋಡಲ್ಪಡುತ್ತದೆ. ದಕ್ಷಿಣವೆಂದರೆ ಹೊಸ ಮನೋಭೂಮಿಕೆಗಳನ್ನು ಅನ್ವೇಷಿಸುವುದು; ಚಾಲ್ತಿಯಲ್ಲಿರುವ ತಾತ್ವಿಕ ಪರಿಕಲ್ಪನೆಗಳಿಗೆ, ವರ್ಗಗಳಿಗೆ ಸವಾಲನ್ನೆಸೆಯುವುದು; ಯಜಮಾನಿಕೆಯ ಏಕಮೇವ ಭಾಷೆಯನ್ನು ತಿರಸ್ಕರಿಸುತ್ತಾ ತನ್ನ ದೃಷ್ಟಿಯಲ್ಲಿರುವ ಹೊಸ ಭಾಷೆಯೊಂದನ್ನು ಹುಡುಕುತ್ತಾ ಹೋಗುವುದು; ಇದುವರೆಗೆ ಬೆಳಕಿಗೆ ಬರದ, ಹೂತುಹಾಕಿದ, ಮೌನಗೊಳಿಸಿದ ಜ್ಞಾನಗಳನ್ನು ಪತ್ತೆಹಚ್ಚುವುದು ದಕ್ಷಿಣ. ಇದುವರೆಗೆ ನಾನಾ ಕಾರಣಗಳಿಂದ ನಿಗ್ರಹಿಸಲ್ಪಟ್ಟ ಜ್ಞಾನಶಾಖೆಗಳು ದಂಗೆಯೆದ್ದಿರುವ, ಹೊಸ ರಾಜಕೀಯ ಕಲ್ಪನೆಗಳನ್ನು ಸಂಶೋಧಿಸುವ ಸ್ಥಳ ದಕ್ಷಿಣ. ಅಷ್ಟೇ ಅಲ್ಲ, ವಿವಿಧ ಸಂಸ್ಕೃತಿಗಳ ನಡುವಣ ಸಂವಾದವಾಗಿರುವುದು ದಕ್ಷಿಣ. ಅಲ್ಲದೆ, ಎಲ್ಲರನ್ನೂ ಮುಕ್ತಗೊಳಿಸುವ ಹೊಸ ವಾದವನ್ನು ಅದು ಮುಂದಿಡುತ್ತದೆ. ಎಂದರೆ, ದಕ್ಷಿಣವೇ ಒಂದು ಹೊಸ ರಾಜಕೀಯ ಕಲ್ಪನೆಯಾಗುತ್ತದೆ.

ಈಗ ಹೀಗೊಂದು ದಕ್ಷಿಣದೆಡೆಗಿನ ಪಯಣ ಶುರುವಾಗಲೇಬೇಕಾದ ಅನಿವಾರ್ಯತೆಯನ್ನು ಗ್ರಹಿಸಿ 'ದಕ್ಷಿಣಾಯನ' ಚಾಲನೆಗೊಂಡಿದೆ.

ದಕ್ಷಿಣಾಯನ ಹೊರಟವರಲ್ಲಿ ಜಿ. ಎನ್. ದೇವಿ ಕೂಡಾ ಒಬ್ಬರು. ಖ್ಯಾತ ಭಾಷಾಶಾಸ್ತ್ರಜ್ಞರು ಹಾಗೂ ವಿಮರ್ಶಕರಾದ ದೇವಿ ಆದಿವಾಸಿ ಸಂಸ್ಕೃತಿ ಕುರಿತು ವಿಸ್ತೃತ ಅಧ್ಯಯನ ನಡೆಸಿ ಆದಿವಾಸಿ ಅಕಾಡೆಮಿ ಶುರು ಮಾಡಿದವರು. 2010ರ ಭಾಷಾ ಗಣತಿ ನೇತೃತ್ವ ವಹಿಸಿಕೊಂಡವರು. ಆದಿವಾಸಿ ಸಮುದಾಯದ ಕುರಿತು ಮಾಡಿದ ಅವರ ಗಮನಾರ್ಹ ಕೆಲಸಗಳನ್ನು ಪರಿಗಣಿಸಿ 2014ರಲ್ಲಿ ಪದ್ಮಶ್ರೀ ನೀಡಲಾಗಿತ್ತು. ಕಲ್ಬುರ್ಗಿ ಹತ್ಯೆಯ ನಂತರ ಹಾಗೂ ಅದರ ಆಸುಪಾಸು ದೇಶಾದ್ಯಂತ ನಡೆದ ಸೌಹಾರ್ದ ಕದಡುವ ಘಟನೆಗಳನ್ನು ವಿರೋಧಿಸಿ ತಮ್ಮ ಪ್ರಶಸ್ತಿಯನ್ನು ವಾಪಸು ನೀಡಿದರು.

ಈಗ್ಗೆ ಮೂರು ತಿಂಗಳ ಹಿಂದೆ ಮಹಾರಾಷ್ಟ್ರ, ಗುಜರಾತ್, ಗೋವಾ ಮತ್ತು ಕರ್ನಾಟಕದ ಕೆಲವು ಚಿಂತಕರು ದೇವಿ ಅವರ ನೇತೃತ್ವದಲ್ಲಿ 'ದಕ್ಷಿಣಾಯನ' ಎಂಬ ತಿರುಗಾಟ ಕೈಗೊಂಡರು. ಅವರೆಲ್ಲ ಪುಣೆ, ಕೊಲ್ಹಾಪುರ ಮತ್ತು ಧಾರವಾಡಗಳಲ್ಲಿ ಹಂತಕರಿಂದ ಕೊಲೆಯಾದ ನರೇಂದ್ರ ಧಾಬೋಲ್ಕರ್, ಗೋವಿಂದ ಪಾನ್ಸರೆ ಮತ್ತು ಎಂ. ಎಂ. ಕಲ್ಬುರ್ಗಿ ಅವರ ಕುಟುಂಬ ವರ್ಗವನ್ನು ಭೇಟಿಯಾದರು. ಆ ಮೂರೂ ಸ್ಥಳಗಳಲ್ಲಿ ಅವರೊಡನೆ ದೊಡ್ಡ ಸಂಖ್ಯೆಯ ಲೇಖಕರು, ಕಲಾವಿದರು, ಹೋರಾಟಗಾರರು ಕೈಜೋಡಿಸಿ ಈ ವಿಷಯ ಕುರಿತು ಸಾರ್ವಜನಿಕ ಚರ್ಚೆ ನಡೆಸಿದರು. ಈ ತಿರುಗಾಟದ ಕೊನೆಗೆ 'ದಕ್ಷಿಣಾಯನ' ಹೊರಟವರು ಜನವರಿ 30ರಂದು ಗುಜರಾತಿನ ದಂಡಿಯಲ್ಲಿ ಸಮಾವೇಶಗೊಳ್ಳುವುದೆಂದು, 'ಸರ್ವ ಭಾಷಾ ಸಂವಾದ'ವನ್ನು ಅಲ್ಲಿ ಮುಂದುವರೆಸುವುದೆಂದೂ ನಿರ್ಧರಿಸಿದರು.

ಸಂಘಟಕರು ನೀಡಿರುವ ಮಾಹಿತಿಯಂತೆ ದಂಡಿ ಸಮಾವೇಶವು ವೈವಿಧ್ಯತೆ, ಬಹುತ್ವ, ಸಮಗ್ರತೆ ಮತ್ತು ಸದ್ಭಾವನೆಯನ್ನು ಗೌರವಿಸುವ ಸೃಜನಶೀಲ ಮತ್ತು ಕ್ರಿಯಾಶೀಲ ಮನಸುಗಳ ಸ್ವಯಂ ಇಚ್ಛೆಯ ಅಭಿವ್ಯಕ್ತಿ. ಅದು ಯಾವುದೇ ಸಂಸ್ಥೆಯಿಂದ ಧನಸಹಾಯ ಪಡೆದು ಮಾಡುತ್ತಿರುವುದಲ್ಲ. ಇದನ್ನು ಯಾವುದೇ ರಾಜಕೀಯ ಪಕ್ಷ ನಡೆಸುತ್ತಿಲ್ಲ, ಅದು ಯಾವುದೇ ರಾಜಕೀಯ ಪಕ್ಷದ ವಿರುದ್ಧವೂ ಅಲ್ಲ. ಈ ಕಾಲವನ್ನು, ಮಾನವತ್ವವನ್ನು ಮತ್ತು ನೆಲವನ್ನು ಬಾಧಿಸುತ್ತಿರುವ ಪ್ರಸಕ್ತ ಸಮಸ್ಯೆಗಳ ಕುರಿತ ವಿಶಾಲ ದೃಷ್ಟಿಕೋನದ ಚರ್ಚೆ



ನಡೆಯಲೆನ್ನುವುದೇ ಇದರ ಉದ್ದೇಶ. ಇದು ಪ್ರತಿಭಟನಾ ಸಮಾವೇಶವಲ್ಲ. ಈ ಕಾಲಕ್ಕೆ ಅವಶ್ಯವಾಗಿರುವ ರಚನಾತ್ಮಕ ಕ್ರಿಯೆ ಮತ್ತು ಸಂವಾದವನ್ನು ಸೂಕ್ಷ್ಮ ಮನಸುಗಳ ಜೊತೆ ಏರ್ಪಡಿಸುವುದು ಇದರ ಉದ್ದೇಶ. ಭಾರತದ ಇತ್ತೀಚಿನ ಚರಿತ್ರೆಯಲ್ಲಿ ಅತ್ಯಂತ ಸ್ಫೂರ್ತಿದಾಯದ ಸಂಕೇತವಾದ; ನಾಗರಿಕ ಅಸಹಕಾರ ಎಂಬ ನಿಶ್ಶಸ್ತ್ರ ಪ್ರತಿರೋಧದ ಪ್ರಯೋಗ ನಡೆಸಲ್ಪಟ್ಟ 'ದಂಡಿ' ಎಂಬ ಸ್ಥಳವನ್ನು ಅಹಿಂಸಾತತ್ವವನ್ನು ನೆಚ್ಚುವವರೆಲ್ಲರ ಸಮಾವೇಶಕ್ಕಾಗಿ ಆಯ್ದುಕೊಳ್ಳಲಾಗಿದೆ.

ರೂಪಕದ ಭಾಷೆಯಲ್ಲಿ ಹೇಳಬೇಕೆಂದರೆ ಅಹಿಂಸೆ-ನಿರ್ಭಯತೆ-ಪ್ರೇಮತತ್ವದಲ್ಲಿ ನಂಬಿಕೆಯಿಟ್ಟಿರುವವರೆಲ್ಲ ಸೇರಿ ಮಾಡುವ ಒಂದು ಸಾಮೂಹಿಕ ಪ್ರಾರ್ಥನೆ ಇದು. ಸಂಘಟಕರಲ್ಲೊಬ್ಬರಾದ ಗಣೇಶ ದೇವಿ ಅವರು ದಕ್ಷಿಣಾಯನ ಕುರಿತು ಹೀಗೆ ಹೇಳುತ್ತಾರೆ:

"ಆಗಸ ದಟ್ಟ ಕಾರ್ಮೋಡಗಳಿಂದ ಕವಿದ ಕಾಲ ದಕ್ಷಿಣಾಯನ. ಅದು ದೀರ್ಘ ರಾತ್ರಿಗಳನ್ನೂ, ಸಂಕ್ಷಿಪ್ತ ದಿನಗಳನ್ನೂ ಹೊಂದಿದ ಕಾಲ. ಅದು ದಕ್ಷಿಣದೆಡೆಗಿನ ನಡಿಗೆಯನ್ನು ಸೂಚಿಸುತ್ತದೆ. ನಮ್ಮ ಕಾಲದಲ್ಲಿ ದಕ್ಷಿಣ… ದಾರಿ ಎಂದರೆ ಸುಲಭದ ಆರೋಹಣದ ದಾರಿಗಳ ಬಿಟ್ಟು ದೇಶಕಾಲಗಳಿ… ಅನ್ವಯವಾಗುವ ಹೊಸ ಮಾರ್ಗಗಳನ್ನು ಶೋಧಿಸುವುದು.

ದಕ್ಷಿಣಾಯನ ಸಿನಿಮಾ, ರಂಗಭೂಮಿ, ಸಾಹಿತ್ಯ ಕಲೆಗಳ ನಡು… ಸೇತುವೆಯಾಗಬೇಕೆಂಬ ಆಶಯದಿಂದ ಶುರುವಾದ ಚಳವಳಿ. ಪ್ರತಿರೋಧಕ್ಕ… ನಿರ್ಭಯ ಅಭಿವ್ಯಕ್ತಿ ಹೊಂದಲು ಇದು ಪ್ರೇರೇಪಿಸುತ್ತದೆ. ಮನುಷ್ಯ ಘನ… ಹಾಗೂ ಬೌದ್ಧಿಕ ಪಾವಿತ್ರ್ಯವನ್ನುಳಿಸುವ ಸಲುವಾಗಿ ಸೂಕ್ಷ್ಮ ಮನಸುಗಳಿ… ಕೊಟ್ಟ ಕರೆ ಇದು.

ಸಹಿಷ್ಣುತೆ ಮತ್ತು ಸಂವಾದವನ್ನು ಒಪ್ಪುವ ಕ್ರಿಯಾಶೀಲ ಅಭಿವ್ಯಕ್ತಿಗಾಗಿ… ಹೊಸ ಹುಡುಕಾಟ ದಕ್ಷಿಣಾಯನ. ಸಮಾನತೆ, ನ್ಯಾಯಪರತೆ ಹಾಗೂ… ಭಿನ್ನತೆ ಕುರಿತ ಗೌರವ ಹೊಂದಿರುವ ಪ್ರಗತಿಪರ ಚಿಂತನೆಗಳನ… ಕಾಪಿಟ್ಟುಕೊಳ್ಳುವ ಪ್ರಯತ್ನ ಇದು.

ಜಾತಿ, ವರ್ಗ, ಕುಲ, ಲಿಂಗ, ಭಾಷೆ, ಸ್ವರೂಪ ಎಂಬಿತ್ಯಾ… ಅಸ್ಮಿತೆಗಳಾಚೆ ಚಲಿಸುವ; ಗಡಿಗೆರೆಗಳಾಚೆ ಕಲ್ಪನಾಶಕ್ತಿಯನ್ನು ವಿಸ್ತರಿಸುವ… ಸಿದ್ಧಾಂತ, ಪಕ್ಷಪಾತಿ ಸಂಸ್ಥೆಗಳು, ಸಂಘಟನೆ, ಚಳವಳಿಗಳಿಂದ ಮನಸನ… ಮುಕ್ತಗೊಳಿಸುವ ಧ್ವನಿಯ ಹುಡುಕಾಟ ಇದು.

ಭೂಮಿ ನಮಗೆ ಸೇರಿದ್ದಲ್ಲ, ನಾವು ಭೂಮಿಗೆ ಸೇರಿದವರ… ಎಂದು, ಎಲ್ಲರೂ ಪವಿತ್ರ ಎಂದು ಈ ಚಳವಳಿ ಪ್ರತಿಪಾದಿಸುತ್ತದೆ."

ಇದನ್ನು ಒಂದು ಸಮಾವೇಶಕ್ಕಷ್ಟೆ ಸೀಮಿತಗೊಳಿಸಬಾರದ… ಎನ್ನುವುದು ಅವರ ಅಭಿಪ್ರಾಯ. ದಂಡಿ ಕಾರ್ಯಕ್ರಮದ ನಂತರವ… 'ಸರ್ವ ಭಾಷಾ ಸಂವಾದ'ವು ಚಿಂತನೆ, ಆತ್ಮನಿರೀಕ್ಷಣೆ ಹಾಗೂ ಚರ್ಚೆಯನ… ಅನೇಕ ರಾಜ್ಯಗಳ ನಗರ, ಪಟ್ಟಣಗಳಲ್ಲಿ ಮಾರ್ಚ್ 12ರಿಂದ ಏಪ್ರಿಲ್ 6ರವರೆಗೆ - ಅದು ಗಾಂಧಿ ಕೈಗೊಂಡ ದಂಡಿಯಾತ್ರೆಯ ಅವಧಿಯ ದಿನಗಳ… - ಹಮ್ಮಿಕೊಳ್ಳಬಯಸುತ್ತದೆ. ಆ ಮೂಲಕ ಸೃಜನಶೀಲ ಅಭಿವ್ಯಕ್ತಿಗೆ ಒದಗಿರು… ಆತಂಕಗಳ ಅರ್ಥಮಾಡಿಕೊಳ್ಳುತ್ತ ಸಮಗ್ರತೆಯ, ಬಂಧುತ್ವದ ಬೆಸುಗೆಗ… ಗಟ್ಟಿಗೊಳಿಸಬಯಸುತ್ತದೆ.

ಕರ್ನಾಟಕದಲ್ಲಿಯೂ ಇಂಥ ಸಂಚಲನ ಸಂಭವಿಸುತ್ತಿರುವ ಕಾಲ ಇದಾಗಿದ… ಜನವರಿ 30ರಂದು ಕರ್ನಾಟಕ ಕೋಮು ಸೌಹಾರ್ದ ವೇದಿಕೆಯು 'ಸಹಬಾಳ್ವೆಯ ಸಾಗರ' ಸಮಾವೇಶ ಏರ್ಪಡಿಸುತ್ತಿದೆ. ಸಂಗಾತಿಗಳೇ, ನೀವು ಒಂದೋ ವಿವಿಧ ಧರ್ಮ, ಜಾತಿ, ಭಾಷೆ, ಸಿದ್ಧಾಂತಗಳು ಸಂಗಮಿಸುವ ರಾಷ್ಟ್ರೀಯ… ಸಮಾವೇಶವಾಗಿರುವ 'ಸಹಬಾಳ್ವೆಯ ಸಾಗರ'ದತ್ತ ಮಂಗಳೂರಿಗೆ ಚಲಿ… ಅಥವಾ ಸಾಗರ ತಡಿಯ ದಂಡಿಗೆ ಸರ್ವಭಾಷಾ ಸಂವಾದಕ್ಕಾದರೂ ಬನ್ನಿ.

ಒಟ್ಟಾರೆ, ಇದು 'ದಕ್ಷಿಣಾಯನ ಕಾಲ', ಮರೆಯದಿರಿ..

● ಡಾ.ಎಚ್.ಎಸ್.ಅನುಪಮಾ, ಕವಲ…

ಬಿಲ್ಲೂ ಪಾಲು ಪಡೆಯುವ ಮತ್ತು ನೀಚ ಪುರುಷನಿಂದ
ೀವನ ಪಡೆಯುವ ಹಕ್ಕನ್ನೂ ಮುಸ್ಲಿಂ ಮಹಿಳೆ
ಪಡೆದ್ದಾಳೆ.

ಮದಿನಾ ಬಳಿಯ ಉಹುದ್ ಬೆಟ್ಟದಲ್ಲಿ ಖುರೈಶ
ಗದವರು ಮತ್ತು ಆದೇತಾನೆ ಬೆಳೆಯುತ್ತಿದ್ದ ಇಸ್ಲಾಂ
ದ ಅನುಯಾಯಿಗಳ ಮಧ್ಯೆ ಯುದ್ಧವಾಯಿತು.
ಯುದ್ಧದಲ್ಲಿ ಪೈಗಂಬರರ 70 ಅನುಯಾಯಿಗಳು
ತ್ರರಾದರು. ಆಗ ಬದುಕುಳಿದ ಇಸ್ಲಾಂ ಧರ್ಮದ
ಯಾಯಿಗಳು ಕಡಿಮೆ ಇದ್ದರು. ಆದರೆ ವಿಧವೆಯರ
ಹೆಚ್ಚಾಗಿತ್ತು. ಹುತಾತ್ಮರ ವಿಧವೆಯರ ಮತ್ತು
ಥಮಕ್ಕಳ ಪ್ರಶ್ನೆ ಎದುರಾಯಿತು. ಈ ಯುದ್ಧದ
ರ ಬಂದ ಕುರಾನಿನ ನಾಲ್ಕನೇ ಸೂರಾದಲ್ಲಿ
ಪತ್ನಿತ್ವದ ವಿಚಾರ ಮೊದಲ ಬಾರಿಗೆ ಗೋಚರಿಸಿತು.
ವೆಯರು ಮತ್ತು ಯುದ್ಧದಲ್ಲಿ ಸೆರೆಸಿಕ್ಕ ಮಹಿಳೆಯರು
ರವಯುತ ಜೀವನ ಸಾಗಿಸಲು ಸಾಧ್ಯವಾಗುವ
ಶದಿಂದ ನ್ಯಾಯಪಾಲನೆಯೊಂದಿಗೆ ನಾಲ್ಕರವರೆಗೆ
ಪತ್ನಿತ್ವವನ್ನು ಜಾರಿಗೆ ತರಲಾಯಿತು. ಒಂದು ವೇಳೆ
ದುವೆಯಾಗದೆ ವಿಧವೆಯರನ್ನು ಮತ್ತು ತಬ್ಬಲಿಗಳನ್ನು
ಗಿ ನೋಡಿಕೊಂಡರೆ ಕುರಾನ್ ಪ್ರಕಾರ ಆತ ಆದರ್ಶ
ಮನಾಗುವನು. ಕುರಾನ್ ದೃಷ್ಟಿಯಲ್ಲಿ ಏಕಪತ್ನಿತ್ವವೇ
ರ್ಶವಾಗಿದೆ. ಇಸ್ಲಾಂ ಧರ್ಮದಲ್ಲಿ ಹೀಗೆ ಅನಾಥರಾದ
ಳೆಯರ ಮತ್ತು ಅವರ ಮಕ್ಕಳ ಯೋಗಕ್ಷೇಮಕ್ಕಾಗಿ
ಪತ್ನಿತ್ವ ಜಾರಿಗೆ ಬಂದಿತು ಹೊರತಾಗಿ ಪುರುಷರ
ದ ಚಪಲತೆಗಾಗಿ ಅಲ್ಲ.

ದೇವರು ಅನುಮತಿ ನೀಡಿದ ಎಲ್ಲವುಗಳಲ್ಲಿ ಆತ
ವವಾಗಿ ತಿರಸ್ಕರಿಸುವುದೆಂದರೆ ತಲಾಖ್ ಎಂದು
ಂಬರರು ಹೇಳಿದ್ದಾರೆ. 'ಯಾರು ತಮ್ಮ ಹೆಂಡಂದಿರ
ಕರುಣೆಯುಳ್ಳವರಾಗಿರುತ್ತಾರೋ ಅವರೇ ನಮ್ಮೊಳಗಿನ
ರು' ಎಂದು ತಿಳಿಸಿದ್ದಾರೆ.

ಒಂದೇ ಮಾನವಕುಲ

'ಓ ಜನರೇ! ನಿಮ್ಮನ್ನು ಒಬ್ಬ ಪುರುಷ ಮತ್ತು
ಸ್ತ್ರೀಯಿಂದ ನಾವು ಸೃಷ್ಟಿಸಿದೆವು. ಪರಸ್ಪರರನ್ನು ನೀವು
ರುತಿಸುವಂತಾಗಲೆಂದು ನಿಮ್ಮನ್ನು ಅನೇಕ ಜನಾಂಗ
ಗಿಯೂ ವಂಶಗಳಾಗಿಯೂ ಮಾಡಿದೆವು' ಎಂದು
ತ್ರ ಕುರಾನ್‌ನಲ್ಲಿ ಹೇಳಲಾಗಿದೆ.

ಮನುಷ್ಯರು ವಿವಿಧ ಧರ್ಮಗಳಲ್ಲಿ, ಜಾತಿಮತ ಪಂಥ
ತ್ತು ವರ್ಗಗಳಲ್ಲಿ ಹರಿದು ಹಂಚಿಹೋಗಿದ್ದಾರೆ. ಅವರವರ
ಲೆಯ ಪ್ರಕಾರ ಅವರು ಕೆಲ ಸಂಪ್ರದಾಯ ಮತ್ತು



ಆಚರಣೆಗಳನ್ನು ಹೊಂದಿರುತ್ತಾರೆ. ಆದರೆ ಕೊನೆಗೂ ವ್ಯಕ್ತಿಯೊಬ್ಬ ಗೌರವಕ್ಕೆ ಪಾತ್ರನಾಗುವುದು ತನ್ನ ಹಿನ್ನೆಲೆಯ ಕಾರಣದಿಂದ ಅಲ್ಲ, ಆತ ಯಾವ ರೀತಿ ಬದುಕುತ್ತಿದ್ದಾನೆ ಎಂಬುದರ ಮೇಲೆ. ಯಾರ ಹಿನ್ನೆಲೆ ಏನೇ ಇರಲಿ, ಒಳ್ಳೆಯವರು ಒಳ್ಳೆಯವರೇ; ಕೆಟ್ಟವರು ಕೆಟ್ಟವರೆ.

ಯಾವುದೇ ಜಾತಿ ಧರ್ಮದವರಿರಲಿ, ಒಳ್ಳೆಯವರು ಒಂದಾಗಿ ಬದುಕಬೇಕು. ದುಷ್ಟಶಕ್ತಿಗಳನ್ನು ಒಂದಾಗಿ ಎದುರಿಸಬೇಕು. ಅಂದಾಗ ಮಾತ್ರ ಒಳ್ಳೆಯವರು ಈ ಸಮಾಜದ ನಾಯಕರಾಗಿರಲು ಸಾಧ್ಯ. ಇಲ್ಲದ್ದಿದರೆ ದುಷ್ಟಶಕ್ತಿಗಳು ಧರ್ಮದ ಹೆಸರಿನಲ್ಲಿ ಜನರನ್ನು ಬೇರ್ಪಡಿಸುತ್ತವೆ. ಧರ್ಮದ ಹೆಸರಿನಲ್ಲಿ ನಾಯಕತ್ವ ವಹಿಸುತ್ತವೆ. ತಮ್ಮ ಧರ್ಮಗಳಲ್ಲಿನ ಒಳ್ಳೆಯವರು ತಮ್ಮನ್ನು ಬೆಂಬಲಿಸುವಂಥ ಅನಿವಾರ್ಯ ವಾತಾವರಣ ಸೃಷ್ಟಿ ಮಾಡುತ್ತವೆ. ಗರ್ವದಿಂದ ತಮ್ಮ ಧರ್ಮದ ಬಗ್ಗೆ ಮಾತನಾಡಲು ಪ್ರಾರಂಭಿಸುತ್ತವೆ. ಜನರಲ್ಲಿ ಗೊಂದಲ ಸೃಷ್ಟಿಸುತ್ತವೆ. ಹೀಗೆ ಜನರನ್ನು ಒಡೆದು ಆಳುವ ಶಕ್ತಿಯನ್ನು ಪಡೆಯುತ್ತವೆ.

ಕೋಮುವಾದ ಅಂದರೆ ಏನು? ಎಂದು ಪ್ಯಾಲೆಸ್ತೀನ್ ಮಹಿಳೆಯೊಬ್ಬಳು ಮುಹಮ್ಮದ್ ಪೈಗಂಬರರಿಗೆ ಕೇಳಿದಳು. 'ನಿನ್ನ ಜನಾಂಗದವರು ತಪ್ಪು ಮಾಡುತ್ತಿದ್ದಾಗ್ಯೂ ನೀನು ಅವರಿಗೆ ಸಹಾಯ ಮಾಡಿದರೆ ಅದು ಕೋಮುವಾದ' ಎಂದು ಪೈಗಂಬರರು ಉತ್ತರಿಸಿದರು. ಎತ್ತಿ ಕಟ್ಟಬೇಕಾಗಿರುವುದು ತಮ್ಮ ತಮ್ಮ ಧರ್ಮದವರನ್ನಲ್ಲ, ಸತ್ಯವನ್ನು ಎಂದು ಪೈಗಂಬರರು ಸೂಚಿಸಿದ್ದಾರೆ.

ಹಜರತ್ ಮುಹಮ್ಮದ್ ಪೈಗಂಬರರು ತಮ್ಮ ಕೊನೆಯ ಹಜ್ ಯಾತ್ರೆಯ ನಂತರ ಮಕ್ಕಾ ಸಮೀಪದ ಅರಫಾ ಮೈದಾನದಲ್ಲಿ ಯಾತ್ರಿಕರಿಗೆ ವಿದಾಯ ಹೇಳುವಾಗ ಆಡಿದ ಈ ಕೊನೆಯ ಮಾತು ಮಾನವ ಜನಾಂಗಕ್ಕೆ ಅನುಪಮ ಕೊಡುಗೆಯಾಗಿದೆ.

'ಬರುವ ವರ್ಷ ನಿಮ್ಮನ್ನು ಕಾಣುವೆನೊ ಇಲ್ಲವೊ ಗೊತ್ತಿಲ್ಲ. ಅದಕ್ಕಾಗಿ ಓ ಜನರೇ ನನ್ನ ಮಾತುಗಳ ಕಡೆ ಗಮನವಿಡಿ. ಅಧರ್ಮವಾದ ಪದ್ಧತಿಗಳೆಲ್ಲ ನನ್ನ ಪದತಲದಲ್ಲಿ ನಿರ್ನಾಮಗೊಂಡಿವೆ. ಅರಬರು ಅರಬರಲ್ಲದವರಿಗಿಂತ ಹೆಚ್ಚಿನವರಲ್ಲ, ಅರಬರಲ್ಲದವರು ಅರಬರಿಗಿಂತ ಹೆಚ್ಚಿನವರಲ್ಲ. ನೀವೆಲ್ಲ ಆದಂನ ಮಕ್ಕಳು. ಆದಂನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. .... ನಿಮ್ಮ ಗುಲಾಮರು! ನೀವು ಉಣ್ಣುವಂಥ ಆಹಾರ ಅವರಿಗೆ ಕೊಡಿ. ನೀವು ಉಡುವಂಥ ಬಟ್ಟೆ ಅವರಿಗೆ ಕೊಡಿ. ಅಜ್ಞಾನ ಕಾಲದ ರಕ್ತಪಾತಮಯವಾದ ಬದ್ಧದ್ವೇಷವನ್ನು ನಿಷೇಧಿಸಲಾಗಿದೆ.

ನೀವು ನಿಮ್ಮ ಹೆಂಡಂದಿರೊಡನೆ ವ್ಯವಹರಿಸುವಾಗ ಅಲ್ಲಾಹನನ್ನು ಜ್ಞಾಪಿಸಿಕೊಳ್ಳಿರಿ. ನಿಮಗೆ ಅವರ ಮೇಲೆ ಹಕ್ಕಿದೆ ಅವರಿಗೆ ನಿಮ್ಮ ಮೇಲೆ ಹಕ್ಕಿದೆ. ಸತ್ಯವಾಗಿಯೂ ನ್ಯಾಯತೀರ್ಮಾನದ ದಿನದವರೆಗೆ ಪ್ರತಿಯೊಬ್ಬರ ರಕ್ತ, ಆಸ್ತಿ ಮತ್ತು ಪ್ರತಿಷ್ಠೆಗಳು ಅತಿಕ್ರಮಣಕ್ಕೀಡಾಗದಂಥವು ಎಂಬುದನ್ನು ನೀವು ತಿಳಿಯಲೇ ಬೇಕು.'

ಆಸೆಗಳ ವಿರುದ್ಧ ಜೇಹಾದ್

ನಮ್ಮ ಆಸೆಆಮಿಷಗಳ ವಿರುದ್ಧ ಹೋರಾಡುವುದೇ ನಿಜವಾದ ಜೇಹಾದ್ (ಧರ್ಮಯುದ್ಧ) ಎಂದು ಪೈಗಂಬರರು ಸಾರಿದರು. ನಿರಕ್ಷರತೆ, ಬಡತನ ಮತ್ತು ತಮ್ಮೊಳಗಿನ ಅವಗುಣಗಳ ವಿರುದ್ಧ ಜನಸಮುದಾಯ ಹೋರಾಡುವುದಕ್ಕೆ ಅವರು ಜೇಹಾದ್ ಎಂದು ಕರೆದರು.

ದೇವಾ ನನ್ನನ್ನು ಯಾವಾಗಲೂ ಬಡತನದಲ್ಲೇ ಇಡು ಎಂದು ಪೈಗಂಬರರು ಪ್ರಾರ್ಥಿಸುತ್ತಿದ್ದರು. ಅವರು ಗುಂಪಿನಲ್ಲಿ ಗುರುತಿಸಲಿಕ್ಕೆ ಸಾಧ್ಯವಾಗದಷ್ಟು ಸರಳವಾಗಿದ್ದರು. ಅವರ ಬಟ್ಟೆ ಬಡವರು ಧರಿಸುವ ಬಟ್ಟೆಯಾಗಿತ್ತು. ಅವರು ಎಂದೂ ಹೊಟ್ಟೆತುಂಬ ಊಟ ಮಾಡಲಿಲ್ಲ. ತನ್ನ ನೆರೆಯವನು ಉಪವಾಸವಿದ್ದಾಗ ಹೊಟ್ಟೆತುಂಬ ಉಣ್ಣುವವನು ಮುಸ್ಲಿಮನಲ್ಲ ಎಂದು ಅವರು ಹೇಳಿದರು.

ಒಬ್ಬ ಮನುಷ್ಯನನ್ನು ಅನ್ಯಾಯವಾಗಿ ಕೊಂದವನು ಸಮಸ್ತ ಮಾನವ ಕುಲವನ್ನು ಕೊಂದಂತೆ. ಒಬ್ಬನಿಗೆ ಜೀವದಾನ ಮಾಡಿದವನು ಸಮಸ್ತ ಮಾನವ ಕುಲಕ್ಕೆ ಜೀವದಾನ ಮಾಡಿದಂತೆ ಎಂದು ಅವರು ಸಾರಿದರು. ಎದುರು ಬಂದ ಬಡವರಿಗೆ ಮತ್ತು ಮಕ್ಕಳಿಗೆ ಅವರು ತಾವೇ ಮೊದಲು ಸಲಾಂ ಮಾಡುತ್ತಿದ್ದರು. ಕೂಲಿಗಳು ಕೆಲಸ ಮುಗಿಸಿ ಬೆವರು ಒರೆಸಿಕೊಳ್ಳುವ ಮೊದಲೇ ಅವರಿಗೆ ಕೂಲಿ ಕೊಟ್ಟು ಕಳಿಸಿರಿ ಎಂದು ಅವರು ತಿಳಿಸಿದರು.

'ಒಳ್ಳೆಯ ಒಂದು ನುಡಿ ಹಾಗೂ ಕ್ಷಮೆಯು ಮನ ನೋಯಿಸುವ ದಾನ ಧರ್ಮಕ್ಕಿಂತ ಉತ್ತಮ. ಅಲ್ಲಾಹನು ನಿರಪೇಕ್ಷನೂ ಸಹನಶೀಲನೂ ಆಗಿರುತ್ತಾನೆ' ಎಂದು ಕುರಾನಿನ 2ನೇ ಸೂರಾದ 236ನೇ ಆಯತ್‌ನಲ್ಲಿ ಹೇಳಲಾಗಿದೆ.

'ತುಳಿತಕ್ಕೊಳಗಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ' ಎಂದು 28ನೇ ಸೂರಾದ 5 ಮತ್ತು 6ನೇ ಆಯತ್‌ಗಳಲ್ಲಿ ಹೇಳಲಾಗಿದೆ.

ಯುದ್ಧದ ಸಂದರ್ಭದಲ್ಲಿ ಕೂಡ ಇಸ್ಲಾಂ ಶಾಂತಿ ಮತ್ತು ಜೀವನಾವಶ್ಯಕ ವಸ್ತುಗಳ ಮಹತ್ವವನ್ನು ಸಾರುತ್ತದೆ. ಮೊದಲನೇ ಖಲಿಫಾ ಹಜರತ್ ಅಬೂಬಕರ್ ಅವರು ಸಿರಿಯಾಕ್ಕೆ ಕಳುಹಿಸಿದ ಸೇನಾ ತುಕಡಿಗೆ ನೀಡಿದ ಆದೇಶ ಹೀಗಿದೆ: 'ನಿಮ್ಮ ವಿಜಯವು ಮಹಿಳೆಯರ ಮತ್ತು ಮಕ್ಕಳ ರಕ್ತದಿಂದ ಕಳಂಕಿತವಾಗದಿರಲಿ. ಮರಗಳನ್ನು ನಾಶಮಾಡದಿರಿ, ಹೊಲಗಳನ್ನು ಸುಡದಿರಿ. ಫಲಭರಿತ ಮರಗಳನ್ನು ಕಡಿಯದಿರಿ. ಸಾಕುಪ್ರಾಣಿಗಳಿಗೆ ಕಿರುಕುಳ ಕೊಡಬೇಡಿರಿ. ಕೊಟ್ಟ ಮಾತಿಗೆ ಮತ್ತು ಆಶ್ವಾಸನೆಗೆ ಭಂಗ ತರದಿರಿ. ಧಾರ್ಮಿಕ ವ್ಯಕ್ತಿಗಳು ತಮ್ಮದೇ ಆದ ವಿಧಿವಿಧಾನದಲ್ಲಿ ದೇವಮಾರ್ಗದಲ್ಲಿ ಸೇವೆ ಸಲ್ಲಿಸುತ್ತಿರಬಹುದು. ಅವರನ್ನು ಅವರಷ್ಟಕ್ಕೇ ಬಿಟ್ಟು ಬಿಡಿ. ಅವರನ್ನು ವಧಿಸದಿರಿ. ಅವರ ಮಠ-ಮಂದಿರಗಳನ್ನು ಹಾಳುಗೆಡವದಿರಿ.'

ಅದೇ ಸಿರಿಯಾದಲ್ಲಿ ಇಂದು ಏನು ನಡೆಯುತ್ತಿದೆ? ಇಸ್ಲಾಂ ಹೆಸರಿನಲ್ಲಿ ಅನ್ಯಾಯ, ಅತ್ಯಾಚಾರ ಮಾಡುತ್ತಿರುವ ಉಗ್ರರು ಮುಸ್ಲಿಮರೆ?

● ರಂಜಾನ್ ದರ್ಗಾ

ವಿಫಲಗೊಂಡ ರೈತ ಓಲೈಕೆ

ರೈತರ ಫಲವತ್ತಾದ ಜಮೀನುಗಳನ್ನು ಹಸಿದ
ರ್ಪೊರೇಟುಗಳ ಕಾಲಬುಡಕ್ಕೊಪ್ಪಿಸಲು ಹೊರಟು
ಟ್ಟುಕೊಂಡ ಮೋದಿ ಸರ್ಕಾರದ ಭೂಸ್ವಾಧೀನ
ಗೊದೆಯ ಕತೆಯನ್ನು ಅರಿಯದವರಾರು? ಈ ಕರಾಳ
ಸೂದೆಗೆ ದೇಶಾದ್ಯಂತ ವ್ಯಾಪಕ ಪ್ರತಿರೋಧ ವ್ಯಕ್ತವಾದ
ನ್ನೆಲೆಯಲ್ಲಿ ಅದನ್ನು ಹಿಂತೆಗೆದುಕೊಳ್ಳಬೇಕಾಗಿ ಬಂದ
ೕದಿ ಸರ್ಕಾರ ಆಚೆ ರೈತರನ್ನು ಓಲೈಸಲು ಹೊರಟು
ುಖಭಂಗಕ್ಕೀಡಾದ ಘಟನೆಯೂ ನಡೆದುಹೋಗಿದೆ.
ಯ ಹೀಗಿದೆ. ಸುಮಾರು ಒಂದು ವರ್ಷದ ಕೆಳಗೆ
ಸದ ಆದರ್ಶ ಗ್ರಾಮ" ಎಂಬ ಹೆಸರಿನಲ್ಲಿ ವಿನೂತನ
ೋಜನೆಯೊಂದಕ್ಕೆ ಚಾಲನೆ ನೀಡಲಾಯಿತು. ಎಲ್ಲವೂ
ಕೆಯಂತೆ ನಡೆದಿದ್ದರೆ ಇಷ್ಟರಲ್ಲಾಗಲೆ ಯೋಜನೆಯ
ದಲ ಹಂತ ಮುಗಿದು ಎರಡನೆ ಹಂತ
ರಂಭವಾಗಬೇಕಿತ್ತು. ಆದರೆ ಬಿಜೆಪಿ ಸದಸ್ಯನೊಬ್ಬನಿಂದಲೆ
ೋದಿಯ ಮುದ್ದಿನ ಯೋಜನೆ'ಯೆಂದು
ಕೊಂಡ ಈ ಕಾರ್ಯಕ್ರಮದ ಬಗ್ಗೆ ಇಂದು
ದ್ದು ಬಿಜೆಪಿಗರಿಗೇ ವಿಶ್ವಾಸ ಇಲ್ಲ ಎಂದಾಗಿದೆ!
ಕ್ಕೆ ಕಾರಣವೂ ಇಲ್ಲದಿಲ್ಲ.

ಈಗ ಒಂದಿಷ್ಟು ವಿವರಗಳನ್ನು ನೋಡೋಣ.
ಸ್ವಾರಸ್ಯಕರ ಕಥೆ ಆರಂಭವಾಗುವುದು 2014ರ
ಕ್ಟೋಬರ್ ತಿಂಗಳಿನಿಂದ. ಮೋದಿ ಸರ್ಕಾರ
ದಮೇಲೆ ಕೇಳಬೇಕೇ? ಕೂಡಲೆ ಹೊಸಾ
ೋಜನೆಯ ಕುರಿತು ಈಗ ಜನಸಾಮಾನ್ಯರಿಗೆ
ಪರಿಚಿತವಾಗಿಬಿಟ್ಟಿರುವ ಅಬ್ಬರದ, ಭಾರಿ
ಗದ್ದಲದ ಪ್ರಚಾರ ಪ್ರಾರಂಭವಾಯಿತು. ಹೊಸಾ
ೋಜನೆಯಡಿ ಪ್ರತಿಯೋರ್ವ ಸಂಸದ
ದೊಂದು ಹಳ್ಳಿಯನ್ನು ದತ್ತು ತೆಗೆದುಕೊಂಡು
16ರ ಒಳಗಾಗಿ ಅದನ್ನೊಂದು ಆದರ್ಶ
ಮವಾಗಿ ಪರಿವರ್ತಿಸಬೇಕು ಎಂದು
ಸಲಾಯಿತು. ಲೋಕಸಭಾ ಸದಸ್ಯರು ತಂತಮ್ಮ
ತ್ರದೊಳಗಿನ ಹಳ್ಳಿಯೊಂದನ್ನು
ಕೊಳ್ಳಬೇಕಾಗಿದ್ದರೆ ರಾಜ್ಯಸಭಾ ಸದಸ್ಯರು ತಮ್ಮ
ಜ್ಯದೊಳಗಿನ ಯಾವುದೇ ಹಳ್ಳಿಯನ್ನಾದರೂ
ಕೊಳ್ಳಬಹುದಿತ್ತು. ಪರಿಣಾಮವಾಗಿ "ಸಂಸದ
ದರ್ಶ ಗ್ರಾಮ"ದ ಮೊದಲ ಹಂತಕ್ಕೆ,
ಕಸಭೆಯ 543 ಸದಸ್ಯರ ಪೈಕಿ 499 ಮತ್ತು
ಜ್ಯಸಭೆಯ 245 ಸದಸ್ಯರ ಪೈಕಿ 198 ಮಂದಿ
ಸದರು ಆಕರ್ಷಿತರಾದರು. ಅವರೆಲ್ಲರೂ

ಒಡನೆಯೆ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಧಾವಿಸಿ ಹೆಸರು ನೋಂದಾಯಿಸಿಕೊಂಡರು. ಎಲ್ಲವೂ ಮೂಲ ವೇಳಾಪಟ್ಟಿ ಪ್ರಕಾರ ಸುಸೂತ್ರವಾಗಿ ನಡೆದಿರುತ್ತಿದ್ದರೆ 2015ರ ಡಿಸೆಂಬರ್ ಒಳಗಾಗಿ ಯೋಜನೆಯ ದ್ವಿತೀಯ ಹಂತಕ್ಕಾಗಿ ಇನ್ನೊಂದು ಹಳ್ಳಿಯ ಹೆಸರನ್ನು ಸೂಚಿಸಬೇಕಿತ್ತು. ಇವುಗಳನ್ನೆಲ್ಲ 2016ರ ಆರಂಭದಲ್ಲಿ ದತ್ತು ತೆಗೆದುಕೊಳ್ಳಬೇಕಾಗಿತ್ತು. ಆದರೆ ಮೊದಲ ಹಂತದಲ್ಲಾದ ಕಟು ಅನುಭವದ ಬಳಿಕ ಆ ಯೋಜನೆಯ ಹೆಸರೆತ್ತಿದರೆ ಸಾಕು, ರಹದಾರಿ ದೂರ ಹಾರುವ ಸಂಸದರಿಗೆ ಅದರ ಜೊತೆ ಯಾವ ಸಂಬಂಧವನ್ನು ಇಟ್ಟುಕೊಳ್ಳುವುದೂ ಬೇಡವಾಗಿದೆ. ಎರಡನೆ ಹಳ್ಳಿಯನ್ನು ದತ್ತು ತೆಗೆದುಕೊಳ್ಳಲು ಯಾವೊಬ್ಬ ಸಂಸದನೂ ಮುಂದೆ ಬರದ ಕಾರಣ ಗಡಬಡಾಯಿಸಿಕೊಂಡು ಎಚ್ಚೆತ್ತ ಗ್ರಾಮೀಣಾಭಿವೃದ್ಧಿ ಸಚಿವ ಚೌಧರಿ ಬಿರೇಂದರ್ ಸಿಂಗ್ ಇದೇ ತಿಂಗಳ ಆರಂಭದಲ್ಲಿ ಎರಡನೆ ಹಳ್ಳಿಯನ್ನು ದತ್ತು ಸ್ವೀಕಾರ ಮಾಡುವಂತೆ ಕೋರಿ ಪ್ರತಿಯೋರ್ವ ಸಂಸದನಿಗೂ ಪತ್ರ ಬರೆದ. ಮಾನ್ಯ ಮಂತ್ರಿಯ ಪತ್ರಕ್ಕೆ ತೀರಾ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. 543 ಲೋಕಸಭಾ ಸದಸ್ಯರ ಪೈಕಿ ಕೇವಲ 28 ಮಂದಿ ಮತ್ತು 245 ರಾಜ್ಯಸಭಾ ಸದಸ್ಯರ ಪೈಕಿ ಕೇವಲ 7 ಮಂದಿ ಉತ್ತರಿಸಿದ್ದಾರೆ.

ಸಂಸದರ ಪ್ರತಿಕ್ರಿಯೆಗಳು


ಕಮ್ಯೂನಿಸ್ಟ್ ಸಂಸದ ಡಿ. ರಾಜಾ ಆರಂಭದಲ್ಲೆ ಈ ಸ್ಕೀಮಿನ ಅಪಾಯವನ್ನರಿತು ಅದಕ್ಕೆ ಸೇರಿಕೊಳ್ಳಲು ನಿರಾಕರಿಸಿದ್ದರು.



ಅಸ್ಸಾಮಿನ ಸಿಲ್ಚಾರ್ ಕ್ಷೇತ್ರದ ಕಾಂಗ್ರೆಸ್ ಸಂಸದ ಸುಷ್ಮಿತಾ ದೇವ್ ಪ್ರಕಾರ ಈ ಯೋಜನೆಯಲ್ಲಿ ಕೆಲವು ಅಂತರ್ಗತ ದೋಷಗಳಿವೆ. ಇದಕ್ಕೆ ಬೇಕಾದ ಹಣಕಾಸಿಗೆಂದು ಪ್ರತ್ಯೇಕ ನಿಧಿಯನ್ನು ಸ್ಥಾಪಿಸಲಾಗಿಲ್ಲ, ಹೀಗಾಗಿ ಹಣಕಾಸಿನ ವ್ಯವಸ್ಥೆಯೆಲ್ಲಾ ಈಗಾಗಲೆ ನಿಗದಿಪಡಿಸಿರುವ ಬಜೆಟಿನಿಂದಲೆ ಆಗಬೇಕಾಗಿದೆ. ಇದರರ್ಥ ಏನಾಯಿತೆಂದರೆ ಸಂಸದನ ಕ್ಷೇತ್ರದ ಮಿಕ್ಕುಳಿದ ಹಳ್ಳಿಗಳಿಗೆ ಹಣಕಾಸಿನ ಕೊರತೆ ಎದುರಾಗುತ್ತದೆ.

ಜನತಾ ದಳ (ಯು) ಸಂಸದ ಅಲಿ ಅನ್ವರ್‌ಗಂತೂ ಈಗ ತನ್ನ ಕ್ಷೇತ್ರಕ್ಕೆ ಭೇಟಿ ನೀಡುವುದೆ ಕಷ್ಟಕರವಾಗಿ ಪರಿಣಮಿಸಿದೆ. ದತ್ತು ತೆಗೆದುಕೊಂಡ ಗ್ರಾಮಕ್ಕೆ ಹೋದರೆ ನಿರೀಕ್ಷೆಗಳನ್ನು ಮುಗಿಲೆತ್ತರ ಏರಿಸಿದ ಬಳಿಕ ಏನೂ ಆಗದಿರುವುದಕ್ಕೆ ಅಲ್ಲಿನ ಜನ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರಂತೆ. ಅಕ್ಕಪಕ್ಕದ ಗ್ರಾಮಗಳ ಜನರಿಗೂ ಸಿಟ್ಟು ಏಕೆಂದರೆ ತಮ್ಮ ಗ್ರಾಮಗಳಿಗಾಗಿದ್ದ ದುಡ್ಡನ್ನು ಮಾದರಿ ಗ್ರಾಮಕ್ಕೆ ಸುರಿಯಲಾಗಿದೆ ಎಂದು.

ಇವರೆಲ್ಲರೂ ಪ್ರತಿಪಕ್ಷಗಳ ಜನರೆಂದು ಇವರ



ಮಾತುಗಳನ್ನು ತಳ್ಳಿಹಾಕುವಂತಿಲ್ಲ. ಏಕೆಂದರೆ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಜಾರ್ಖಂಡ, ರಾಜಸ್ತಾನ ಮೊದಲಾದ ರಾಜ್ಯಗಳ ಬಿಜೆಪಿ ಸಂಸದರೂ ಗೋಳಾಡುತ್ತಿದ್ದಾರೆ! ಉತ್ತರ ಪ್ರದೇಶದ ಬಿಜೆಪಿ ಸಂಸದನೊಬ್ಬನ ಪ್ರಕಾರ ಆತ ದತ್ತು ತೆಗೆದುಕೊಂಡಿದ್ದ ಹಳ್ಳಿಯಲ್ಲಿ ಯಾವ ಬದಲಾವಣೆಯೂ ಕಂಡುಬಂದಿಲ್ಲವಂತೆ. ಇದರಿಂದಾಗಿ ಆತನ ಸ್ಥಾನ ದುರ್ಬಲವಾಗಿದೆಯಂತೆ.

"ಇದರಿಂದ ಏನೂ ಪ್ರಯೋಜನವಿಲ್ಲ, ಇದು ಜನರ ಕಣ್ಣಲ್ಲಿ ನಮ್ಮನ್ನು ಮೂರ್ಖರನ್ನಾಗಿಸುತ್ತದೆ" ಎಂದು ರಾಜಸ್ತಾನದ ಓರ್ವ ಬಿಜೆಪಿ ಸಂಸದ ಹೇಳುತ್ತಾನೆ.

ಕೇಂದ್ರದಲ್ಲಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದು ಕೇವಲ ಒಂದೂವರೆ ವರ್ಷ ಕಳೆಯುವಷ್ಟರಲ್ಲಿ ಹಲವಾರು ರಾಜ್ಯಗಳ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಬಿಜೆಪಿಗೆ ತೀವ್ರ ಹಿನ್ನಡೆಯಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಸಂಸದರ ಪ್ರತಿಕ್ರಿಯೆಗಳಲ್ಲಿ ಮುಂದಿನ ಮಹಾಚುನಾವಣೆಗಳ ಕುರಿತ ಚಿಂತೆ ಗೋಚರಿಸುತ್ತದೆ. ಇದರರ್ಥ ಏನಾಯಿತೆಂದರೆ ಈ ವಿಫಲ "ಸಂಸದ ಆದರ್ಶ ಗ್ರಾಮ" ಯೋಜನೆಯ ನೇರ ಪರಿಣಾಮ ಮತಗಟ್ಟೆಯ ಮೇಲಾಗಲಿರುವುದರ ಬಗ್ಗೆ ಅವರಿಗೆ ಭಯ ಶುರುವಾಗಿದೆ.

(ಆಧಾರ: scroll.in ನಲ್ಲಿ ಧೀರೇಂದ್ರ ಕೆ. ಝಾರವರ ಲೇಖನ)

ಹಿಂದೂಯಿಸಂನ ವಿಕೃತ ಮುಖಗಳ ಶೋಧ

ಪುಸ್ತಕ ಪರಿಚಯ

ಬಿ.ಶ್ರೀಪಾದ ಅವರ 'ಹಿಂದೂತ್ವ ರಾಜಕಾರಣ: ಅಂದು-ಇಂದು-ಮುಂದು' ಪುಸ್ತಕ ಚಿಂತನ ಪುಸ್ತಕ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಕೃತಿ ಪ್ರಸ್ತುತ ರಾಜಕೀಯ ನೆಲೆಯ ಬಹುಮುಖ್ಯ ಶೋಧದ ಹೊದಿಕೆಯಿಂದಾಗಿ ತೀವ್ರಾಸಕ್ತಿಯನ್ನು ಕೆರಳಿಸಿ ಒಂದು ಕಾದಂಬರಿಯಂತೆ ಹಿಡಿದಿಟ್ಟು ಓದಿಸಿಕೊಳ್ಳುತ್ತದೆ. ಭಾವ ತೀವ್ರತೆಯ ತುಟ್ಟತುದಿಗೆ ಇದೀ ಬರಹದ ನಡಿಗೆಯನ್ನು ಲೇಖಕರು ಕೊಂಡೊಯ್ಯಲಿಲ್ಲ, ಬದಲಾಗಿ ಚರಿತ್ರೆಯಾದಿಯಾಗಿ ಪ್ರಸ್ತುತದವರೆಗೂ ವಸ್ತುಸ್ಥಿತಿಯ ವಿಶ್ಲೇಷಣೆಗೆ ಒತ್ತು ಕೊಟ್ಟು ನಿರೂಪಿಸಿದ್ದಾರೆ. ಹಿಂದೂತ್ವದ ಇತಿಹಾಸಕ್ಕೆ ಇವತ್ತಿನ ತಲ್ಲಣಗಳನ್ನು ಬೆರೆಸಿ ಮುಂದೊದಗುವ ಅಪಾಯವನ್ನು ಹೆಕ್ಕಿ ತೋರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಕೃತಿ ಅತ್ಯಂತ ಮಹತ್ವದ್ದು.

ರಾಜಕೀಯ ಎನ್ನುವುದು ಪ್ರತಿ ನಡೆನುಡಿಯಲ್ಲೂ ಅಡಗಿರುತ್ತದೆ. ರಾಜಕೀಯವಿಲ್ಲದ ಯಾವ ಚಲನವಲನವನ್ನೂ ಇಂದು ನಿರೀಕ್ಷಿಸಲು ಸಾಧ್ಯವಿಲ್ಲ. ಇದು ಎಲ್ಲರ ಒಳಗೂ ಅವಿತು ಕುಳಿತಿರುತ್ತದೆ. ಆದರೆ ಒಬ್ಬೊಬ್ಬರ ಅಜೆಂಡಾ ಒಂದೊಂದು ರೀತಿಯಲ್ಲಿರುತ್ತದೆ. ಇಂತಹ ಅಜೆಂಡಾಗಳ ಹಿಂದು ಹಿಂದೂತ್ವದ ಒಳಮೈ ಹೊರಮೈ ಉದ್ದಕ್ಕೂ ಚಾಚಿ ನಿಂತಿದೆ. ಈ ಎಲ್ಲ ಮುಖಗಳ ಅನಾವರಣವನ್ನು ಈ ಕೃತಿ ಆಧಾರಸಹಿತ ಹಿಡಿದಿಡುವ ರೀತಿ ನಿಜಕ್ಕೂ ಬೆರಗುಗೊಳಿಸುತ್ತದೆ. ಒಂದು ಸಂಶೋಧನಾತ್ಮಕ ನೆಲೆಯಲ್ಲಿ ಹೊರಟ ಈ ಕೃತಿ ತಾನು ಹೇಳುತ್ತಿರುವ ವಿಷಯವನ್ನು ಮನದಟ್ಟಾಗುವ ರೀತಿ ಕಟ್ಟಿಕೊಟ್ಟಿದೆ.

ದಲಿತರು ಮತ್ತು ಅಲ್ಪಸಂಖ್ಯಾತರು ಇಂದು ತನ್ನ ಮುಂದಿನ ಎರಡು ಕಣ್ಣುಗಳ ಜೊತೆ ಹಿಂದೆ ಎರಡು ಕಣ್ಣುಗಳನ್ನು ಇಂದು ಹಾಕಿಕೊಳ್ಳಬೇಕಿದೆ. ಇಷ್ಟೇ ಅಲ್ಲದೆ ತಮ್ಮೆರಡೂ ಕಿವಿಗಳ ನೇರಕ್ಕೆ ಮತ್ತೆರಡು ಕಣ್ಣುಗಳನ್ನು ಜೋಡಿಸಿಕೊಳ್ಳಬೇಕಿದೆ. ಏಕೆಂದರೆ ಇಂದು ಶತ್ರುವಿನ ರೂಪ ಯಾವ ದಿಕ್ಕಿನಿಂದ ಯಾವ ರೀತಿಯಲ್ಲಿ ನುಗ್ಗುತ್ತದೆ ಎಂಬುದನ್ನು ಊಹಿಸಲಿಕ್ಕೆ ಕಷ್ಟವಾಗಿದೆ. ಒಂದು ಕಡೆ ಜಾತಿ, ಧರ್ಮ. ಮತ್ತೊಂದು ಕಡೆ ಕೋಮುವಾದ, ಬಂಡವಾಳಶಾಹಿತ್ವ. ಇನ್ನೊಂದು ಕಡೆ ಭಯೋತ್ಪಾದನೆ, ಮತಾಂಧತೆ. ಮಗದೊಂದು ಕಡೆ ತ್ರಿಕರಣಗಳು (ಜಾಗತೀಕರಣ, ಖಾಸಗೀಕರಣ, ಉದಾರೀಕರಣ), ಮಠಗಳು, ಮೌಢ್ಯಗಳು. ಇವೆಲ್ಲವುಗಳ ವಿರುದ್ಧ ಏಕಕಾಲದಲ್ಲಿ ಹೋರಾಡಬೇಕಾದ ಅನಿವಾರ್ಯತೆ ಇಂದು ಇವರಿಬ್ಬರ ಹೆಗಲ ಮೇಲೆ ಕುಳಿತಿದೆ. ಇಷ್ಟೆಲ್ಲ ಕಣ್ಣುಗಳ ಮೂಲಕ ಈ ಕೃತಿ ಹಿಂದೂಯಿಸಂನ ವಿಕೃತ ಕೃತ್ಯಗಳನ್ನು ಬಯಲಿಗೆಳೆದಿದೆ.

ದುರದೃಷ್ಟವಶಾತ್ ಈ ಎಲ್ಲ ನೆಲೆಗಳನ್ನು ಹಿಂದೂತ್ವ ಎನ್ನುವ ಸನಾತನ ಸಂಸ್ಥೆಯೊಂದು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡಿದೆ. ತನ್ನದೀ ಏಕತ್ವ ಸಂಸ್ಕೃತಿಯನ್ನು ಬಿತ್ತಲು ಯಾವ ಯಾವ ನೆಲೆಯಲ್ಲಿ ಎಷ್ಟೆಷ್ಟು ಸಾಧ್ಯವೋ ಅಷ್ಟೆಲ್ಲ ನೆಲೆಗಳಲ್ಲಿ ತನ್ನ ಕೈಗಳನ್ನು ಚಾಚುತ್ತಿದೆ. ಇದಕ್ಕೆ ಶಿಕ್ಷಣ ಮತ್ತೊಂದು ಅಸ್ತ್ರವಾಗಿ ಈಗ ಇವರ ಕೈಗೆ ದೊರೆತಿದೆ. ಇದರೊಂದಿಗೆ ರಾಜಕೀಯ ಅಧಿಕಾರ ತನ್ನೆಲ್ಲ ನೆಲೆಗಳನ್ನು ಬಿತ್ತಲು ಮುಖ್ಯ ಭೂಮಿಕೆಯಾಗಿ ಸಿದ್ಧಗೊಂಡಿದೆ. ಇದು ಇವತ್ತಿನ ರಾಜಕೀಯ ಬೆಳವಣಿಗೆಗಳನ್ನು ಗಮನಿಸಿದರೆ ನಿಜವೆನಿಸುತ್ತದೆ.

"ಕೋಮುವಾದವೆಂದರೆ ಅದು ಒಂದು ಐಡೆಂಟಿಟಿ ರಾಜಕೀಯ. ದ್ವೇಷದ ಹಗೆತನದ ರಾಜಕೀಯ. ಇಲ್ಲಿ ಈ ಐಡೆಂಟಿಟಿಯು ಸ್ಪಷ್ಟವಾಗಿ ಧಾರ್ಮಿಕ ನೆಲೆಯನ್ನು ಅವಲಂಬಿಸುತ್ತದೆ. ಈ ಕೋಮುವಾದವು 'ನಾವು' ಮತ್ತು 'ಅವರು' ಎಂದು ಎರಡು ಧರ್ಮಗಳ ನಡುವೆ ಸ್ಪಷ್ಟವಾದ ಗೆರೆಯನ್ನು ಎಳೆಯುತ್ತದೆ. ಕೋಮುವಾದ ಶಕ್ತಿಗಳು ಬಲಿಷ್ಠಗೊಂಡಂತೆ ಈ ಗೆರೆಯು ಒಂದು ಗೋಡೆಯಾಗಿ ಬೆಳೆಯುತ್ತ ಹೋಗುತ್ತದೆ. ಈ ಕೋಮುವಾದವು ತನ್ನ ಧಾರ್ಮಿಕ ಶ್ರೇಷ್ಠತೆಯನ್ನು ವೈಭವೀಕರಿಸುತ್ತಲೇ ಅನ್ಯ ಧರ್ಮ ಮತ್ತು ಅನ್ಯಧರ್ಮೀಯರನ್ನು ದ್ವೇಷಿಸುತ್ತಾ ಬಹುಸಂಖ್ಯಾತವಾದವನ್ನು ಸಾರ್ವಜನಿಕವಾಗಿ ಬಿತ್ತುತ್ತಿರುತ್ತದೆ. ಚಿಂತಕರು ಇಂಡಿಯಾದಲ್ಲಿ ಹಿಂದೂ ಕೋಮುವಾದವನ್ನು ಫ್ಯಾಸಿಸ್ಟ್‌ನ ಮತ್ತೊಂದು ಮುಖವೆಂದೇ ಬಣ್ಣಿಸುತ್ತಾರೆ" ಈ ಮಾತುಗಳು ಕೋಮುವಾದದ ನೆಲೆಗಳನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಇದಕ್ಕೆ ಪೂರಕವಾದ ಸಂಗತಿಗಳು ಕೃತಿಯ ಉದ್ದಕ್ಕೂ ತೆರೆದುಕೊಂಡಿವೆ. ಕೋಮವಾದದ ಕರಾಳತೆಯಲ್ಲಿ ಕಗ್ಗೊಲೆಯಾದವರ ಕಂಬನಿ ಅಕ್ಷರಗಳಾಗಿವೆಯೇನೋ ಎಂಬಂತೆ ಕೃತಿ ನಿರೂಪಿತಗೊಂಡಿದೆ.

'ಆರೆಸ್ಸೆಸ್ ಮತ್ತು ಸಂಘ ಪರಿವಾರದ ಬೆಳವಣಿಗೆಯ ಬೀಜಸ್ವರೂಪವೇ ದ್ವೇಷದ ಸಾಂಸ್ಕೃತಿಕ ರಾಜಕೀಯ' ಇದನ್ನು ಅರ್ಥಮಾಡಿಕೊಂಡರೆ ಇಂದಿನ ನಡೆಯೂ ಇದರ ಸುತ್ತಲೇ ಸುತ್ತುತ್ತಿದೆಯೇನೋ ಎನಿಸುತ್ತದೆ. ಏಕೆಂದರೆ ಇಂದೂ ಕೂಡ ಇದೇ ಪ್ರಕ್ರಿಯೆ ಮುಂದುವರಿದಿದೆ. ಈ ಪ್ರಕ್ರಿಯೆಗಳು ಇಂದು ನೆಲೆ ನಿಂತಿರುವ ಬಗೆಯನ್ನು ಈ ಕೃತಿ ಸಮಂಜಸವಾಗಿ ನಿರೂಪಿಸಿದೆ. ಇದರೊಂದಿಗೆ ಗುಜರಾತ್ ಹಿಂದೂಯಿಸಂನ ಪ್ರಯೋಗಶಾಲೆಯಾಗಿರುವ ಬಗೆ, ಪತ್ಯಗಳನ್ನು ಕೇಸರೀಕರಣಗೊಳಿಸಿರುವ ಹಿಂದಿನ ಉದ್ದೇಶ, ಕಾರ್ಪೊರೇಟ್‌ವಲಯ ಹಿಂದೂಯಿಸಂಗೆ ಪೂರಕವಾಗಿರುವ ರೀತಿ, ಗೋಹತ್ಯೆ ನಿಷೇಧದ ಹಿಂದಿನ ಹುನ್ನಾರ, ಆರೆಸ್ಸೆಸ್ ಮುಂದೆ ರಾಜಕೀಯ ಪಕ್ಷವಾಗಿ ಬೆಳೆದು ಅಧಿಕಾರ ಹಿಡಿಯಲು ನಡೆಸಿದ ಕಸರತ್ತು, ಪತ್ರಿಕೋದ್ಯಮ ಮತ್ತು ದೃಶ್ಯಮಾಧ್ಯಮದ ಜಗತ್ತನ್ನು ಸನಾತನವಾದಿಗಳು ಆಳುವ ಬಗೆ, ವ್ಯಾಪಾರ-ವಹಿವಾಟು-ಬಂಡವಾಳ ಇವುಗಳು ಸನಾತನವಾದಿಗಳ ಕೈಸೇರಿರುವ ಉದ್ದೇಶ, ಮೋದಿಯವರ ಹಿಂದಿನ ಅಪಾಯದ ನಡೆ, ರಾಮಮಂದಿರ ನಿರ್ಮಾಣದ ಹಿಂದಿನ ಕುತಂತ್ರ ಇವೆಲ್ಲವೂ ಲೇಖಕರ ಬತ್ತಳಿಕೆಯಿಂದ ಉದ್ವೇಗದ ಒತ್ತಡಕ್ಕೆ ಒಳಗಾಗದೆ ನಿರೂಪಣೆಗೊಂಡಿವೆ. ಈ ಮೂಲಕ ಭಾರತದ ಮತ್ತೊಂದು ಮಗ್ಗುಲಿನ ಇತಿಹಾಸವನ್ನು ಓದುಗರಿಗೆ ತೆರೆದಿಡುತ್ತದೆ.


ಭಾರತದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಎಲ್ಲ ಕ್ಷೇತ್ರಗಳನ್ನು ತನ್ನ ಹತೋಟಿಗೆ ತೆಗೆದುಕೊಳ್ಳಲು ಈ ಹಿಂದೂಯಿಸಂ ಬಯಸುತ್ತದೆ. ಇದಕ್ಕೆ ತಕ್ಕನಾದ ತನ್ನದೇ ಆದ ತಂತ್ರಗಳನ್ನು ಹೆಣೆಯುತ್ತದೆ. ಈ ತಂತ್ರಗಳನ್ನು ಆದಷ್ಟೂ ಕಾರ್ಯಗತಗೊಳ್ಳಲು ನಿರಂತರ ಶ್ರಮಿಸುತ್ತದೆ. ಇದು ಇದರ ಮುಖ್ಯ ಅಜೆಂಡಾ. ತನ್ನ ಕಾರ್ಯ ಸಾಧನೆಗೆ ಯಾವ ಬೆಲೆ ತೆತ್ತಾದರೂ ಸರಿಯೇ ಇದು ಅದನ್ನು ನೆರವೇರಿಸುತ್ತದೆ. ಅದು ಕೊಲೆಯಾಗಿ ರಬಹುದು, ಸಂಸ್ಕೃತಿ ಹೆಸರಿನ ದೌರ್ಜನ್ಯವಾಗಿರಬಹುದು, ಇಲ್ಲವೆ ಆರೋಪಗಳ ಮೂಲಕ ಪ್ರಚಾರಪಡಿಸುವುದಿ ರಬಹುದು... ಏನಾದರೂ ಸರಿ ತನ್ನ ಹಿಂದೂತ್ವದ ಉದ್ದೇಶ ಸಫಲವಾಗಬೇಕು.

ಈ ಮತೀಯವಾದಿಗಳ ಪ್ರಕಾರ ಭಾಷೆ ಎಂದರೆ ಅದು ಕೇವಲ ಸಂಸ್ಕೃತ ಮತ್ತು ಹಿಂದಿ. ಒಂದನ್ನು ದೇವಭಾಷೆಯೆಂದು, ಮತ್ತೊಂದನ್ನು ರಾಷ್ಟ್ರಭಾಷೆಯೆಂದು ನಂಬಿಸಲು ಇನ್ನಿಲ್ಲದ ಕಸರತ್ತನ್ನು ಇಂದಿಗೂ ಮಾಡುತ್ತಲೇ ಬರುತ್ತಿದ್ದಾರೆ. ಹೀಗೆ ನಂಬಿಸುತ್ತಲೇ ಇಂದಿನವರೆಗೂ ಇದೇ ಭಾಷೆಯಲ್ಲಿ ರಚಿತವಾದ ಮನುಸ್ಮೃತಿಯನ್ನು ತಮ್ಮ ಗುಪ್ತ ಅಜೆಂಡಾವನ್ನಾಗಿ ಮಾಡಿಕೊಂಡಿದ್ದಾರೆ. ಇದನ್ನೇ ಇಂದಿಗೂ ಬಿತ್ತಲು ಇನ್ನಿಲ್ಲದ ಕಸರತ್ತು ನಡೆಸುತ್ತಾ ಸಾಗುತ್ತಿದ್ದಾರೆ. ಇದು ಈ ಮತೀಯವಾದಿಗಳ ಹೆಗ್ಗಳಿಕೆ.

'ಸನಾತನ ಧರ್ಮ ತನ್ನ ವ್ಯವಸ್ಥೆಯಲ್ಲಿ ದಲಿತರನ್ನು ಊರ ಹೊರಗಿಡಬಯಸುತ್ತದೆ. ಆದರೆ ತನ್ನ ಕಾರ್ಯಕರ್ತರು ಮತ್ತು ಸಂಚಾಲಕರ ಮೂಲಕ ದಲಿತರಲ್ಲಿ ನಾಯಕತ್ವದ ಸ್ಥಾನವನ್ನು ಕೊಡುತ್ತೇವೆಂದು, ಸಾರ್ವಜನಿಕವಾಗಿ ಒಂದು ಸ್ಪೇಸ್ ನಿರ್ಮಾಣ ಮಾಡಿಕೊಡುತ್ತೇವೆಂದು ತಳಸಮುದಾಯಗಳನ್ನು ಸೆಳೆಯುವಲ್ಲಿ ಸಂಘ ಪರಿವಾರ ಯಶಸ್ಸನ್ನು ಸಾಧಿಸಿದೆ.' ಹೀಗೆ ಹೇಳುವುದರ ಮೂಲಕ ಲೇಖಕರು ದಲಿತರಿಗೆ ಮತ್ತು ಸಂಘಪರಿವಾರದವಗಿರುವ ಅಂತರವನ್ನು ಅನೇಕ ಘಟನೆಗಳ ಮೂಲಕ ನಿರೂಪಿಸುತ್ತಾರೆ.

1925 ರ ವಿಜಯದಶಮಿಯಂದು ಪ್ರಾರಂಭವಾದ ಈ ಆರೆಸ್ಸೆಸ್ ಇವತ್ತಿನ ತನಕ ನಿರಂತರ ದ್ವೇಷ ಮನೋಭಾವವನ್ನು ಮಡಿಲಲ್ಲಿ ಕಟ್ಟಿಕೊಂಡು ಬರುತ್ತಲೇ ಇದೆ. ಇದಕ್ಕೆ ಉದಾಹರಣೆಯೆಂಬಂತೆ ದೇಶದ ಉದ್ದಗಲಕ್ಕೂ ಧರ್ಮದ ಹೆಸರಿನಲ್ಲಿ ಅನ್ಯಧರ್ಮೀಯರ ಮೇಲೆ ನಡೆದ ಸರಣಿ ಕೊಲೆಗಳನ್ನು ಈ ಕೃತಿ ಉಲ್ಲೇಖಿಸುತ್ತದೆ. ಹೈದರಾಬಾದ್, ಜಬ್ಬಲಪುರ, ಅಲಿಘರ್, ಮೀರತ್. ಜೆಮ್‌ಶೆಡ್‌ಪುರ, ರೂರ್ಕೆಲಾ, ರಾಂಚಿ, ಕರಿಂಗಂಜ್, ಗುಜರಾತ್, ದೆಹಲಿ, ವಾರಣಾಸಿ, ಸಂಭಾಲ್, ಮೊರದಾಬಾದ್, ಸೊಲ್ಲಾಪುರ, ಬಾಂಬೆ ಮುಂತಾದವುಗಳ ಕಡೆ ನಡೆದ ಮಾರಣಹೋಮಗಳನ್ನು ಕಾರಣಸಹಿತವಾಗಿ ಈ ಪುಸ್ತಕದಲ್ಲಿ ನಿರೂಪಿಸಲಾಗಿದೆ.

'ಇತಿಹಾಸದಲ್ಲಿ ದಾಖಲಾಗಿರುವ ಮಾಹಿತಿಗಳ ಪ್ರಕಾರ ತನ್ನ ಹುಟ್ಟಿನ ವರ್ಷ 1925 ರಿಂದ 1947 ರವರೆಗೂ ಆರೆಸ್ಸೆಸ್ ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಲೇ ಇಲ್ಲ, ಆದರೆ ಹಿಂದೂ ರಾಷ್ಟ್ರೀಯತೆಯ ಪರಿಕಲ್ಪನೆಯನ್ನು ಬಳಸಿಕೊಂಡು ಆರೆಸ್ಸೆಸ್ ತನ್ನನ್ನು ತಾನು 'ಅಪ್ರತಿಮ ದೇಶಪ್ರೇಮಿ' ಎಂದು ಬಿಂಬಿಸಿಕೊಳ್ಳಲು ಸತತವಾಗಿ ಕಳೆದ ಎಂಬತ್ತು ವರ್ಷಗಳ ಕಾಲ ಪರಿಶ್ರಮ ಪಟ್ಟಿದೆ.' ಈ ದ್ವಂದ್ವ ನಿಲುವುಗಳು ಸಂಘಪರಿವಾರದ ಇಬ್ಬಂದಿತನಕ್ಕೆ ಕನ್ನಡಿ ಹಿಡಿದಿವೆ. "ಈ ಕ್ವಿಟ್‌ಇಂಡಿಯಾ ಚಳವಳಿಯಲ್ಲಿ ಭಾಗವಹಿಸಬೇಡಿ, ಪ್ರಭುತ್ವದೊಂದಿಗೆ ಸಹಕರಿಸಿ. ಎರಡನೇ ಮಹಾಯುದ್ಧದಲ್ಲಿ ಭಾಗವಹಿಸಿ. ಆ ಮೂಲಕ ಯುದ್ಧ ನೈಪುಣ್ಯತೆಯನ್ನು ಪಡೆದುಕೊಳ್ಳಿ. ನಮ್ಮ ಗುರಿ ಅಖಂಡ ಹಿಂದೂರಾಷ್ಟ್ರ." ಇದು ಸಾವರ್ಕರ್ ಹೇಳಿದ ಮಾತು. ಇದು ದೇಶಕ್ಕಾಗಿ ನಾವು ಎನ್ನುವ ಸಂಘಪರಿವಾರದ ಮಾತು. ಈ ನೆಲೆಯೇ ಹೇಳುತ್ತದೆ ಇವರಿಗೆ ದೇಶ ಮುಖ್ಯವೋ ಅಥವಾ ತಾವು ನಂಬಿರುವ ಹಿಂದೂ ಸಿದ್ಧಾಂತ ಮುಖ್ಯವೋ ಎಂದು!



ಪುಸ್ತಕ-ಹಿಂದೂತ್ವ ರಾಜಕಾರಣ: ಅಂದು-ಇಂದು-ಮುಂದು
ಲೇಖಕರು - ಬಿ. ಶ್ರೀಪಾದ
ಪ್ರಕಾಶನ - ಚಿಂತನ ಪುಸ್ತಕ, ಬೆಂಗಳೂರು

ಮತಾಂತರದ ಬಗ್ಗೆ ಕೆಟ್ಟ ಪೂರ್ವಾಗ್ರಹಪೀಡಿತರಾಗಿ ಇಂದಿಗೂ ವ್ಯವಸ್ಥಿತ ಪಿತೂರಿ ನಡೆಸುವ ಇವರು ದಲಿತರನ್ನು ಈ ಕೆಟ್ಟ ದೃಷ್ಟಿಯಿಂದಲೇ ಇಂದಿಗೂ ನೋಡುತ್ತಿದ್ದಾರೆ. ಸನಾತನ ವ್ಯವಸ್ಥೆಗೆ ಭದ್ರಬುನಾದಿ ಹಾಕಿಕೊಂಡ ಇವರು ದಲಿತರು ಮತಾಂತರವಾದರೆ ಅದು ನಮ್ಮ ಧರ್ಮಕ್ಕಾದ ಕೇಡು ಎಂದೇ ಭ್ರಮಿಸುತ್ತಾರೆ. ಈ ಹಿನ್ನೆಲೆಯಿಂದಾಗಿಯೇ ದಲಿತರು ಮುಸ್ಲಿಂ ಧರ್ಮಕ್ಕೆ ಅಥವಾ ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರವಾದರೆ ಒಡಲಲ್ಲಿ ಬೆಂಕಿ ಬಿದ್ದಂತೆ ಕುಣಿದಾಡುತ್ತಾರೆ. ಹೇಗಾದರೂ ಮಾಡಿ ವಾಪಸ್ ಕರೆತರಬೇಕೆಂದು 'ಘರ್ ವಾಪಸಿ' ಎಂಬ ರಣತಂತ್ರವನ್ನು ರೂಪಿಸುತ್ತಾರೆ. ಇವರಿಗೆ ದಲಿತರು ಹಿಂದೂ ಧರ್ಮದಲ್ಲಿ ಹಂದಿ ನಾಯಿಗಳಿಗಿಂತ ಕಡೆಯಾಗಿ ಬದುಕಿದರೆ ಏನೂ ಅನಿಸುವುದಿಲ್ಲ, ಆದರೆ ಬೇರೆ ಧರ್ಮಕ್ಕೆ ಮತಾಂತರವಾದರೆ ಏನೇನೋ ಅನಿಸಲು ಪ್ರಾರಂಭವಾಗುತ್ತದೆ. ಇದೆಲ್ಲದರ ಸುಳಿವು ಈ ಕೃತಿಯಲ್ಲಿದೆ.

ಇತಿಹಾಸವನ್ನೂ ತಮಗಿಷ್ಟ ಬಂದಂತೆ ಮತೀಯವಾದಿಗಳು ನಿರೂಪಿಸುತ್ತಾರೆ. ಇದಕ್ಕೆ ವಿರುದ್ಧ ನಿಂತ ಎಲ್ಲವನ್ನು ಬುಡ ಸಮೇತ ಕೀಳಲು ಮುಂದಾಗುತ್ತಾರೆ. ಭಾರತದ ಪ್ರಮುಖ ಇತಿಹಾಸವನ್ನು ಎಡಪಂಥೀಯ ನೆಲೆಯಲ್ಲಿ ಕಟ್ಟಿಕೊಟ್ಟ ಇತಿಹಾಸಕಾರರ ಇತಿಹಾಸವನ್ನು 1999-2004 ರ ಅವಧಿಯಲ್ಲಿ ಇದ್ದಕ್ಕಿದ್ದಂತೆ ಪಠ್ಯಗಳಿಂದ ಕೈಬಿಡಲಾಯಿತು. ಆಗ ಕೇಂದ್ರದಲ್ಲಿ ಇದ್ದದ್ದು ಬಿಜೆಪಿ ಸರ್ಕಾರ. ಶಿಕ್ಷಣಮಂತ್ರಿಯಾಗಿದ್ದವರು ಆರೆಸ್ಸೆಸ್ ಸ್ವಯಂಸೇವಕ ಮುರಳೀ ಮನೋಹರ ಜೋಷಿ. ಇವರು ತನ್ನ ಅವಧಿಯಲ್ಲಿ ಮಾಡಿದ ಅದ್ಭುತ ಕೆಲಸವೆಂದರೆ ರೊಮಿಲಾ ಥಾಪರ್, ಬಿಪಿನ್‌ಚಂದ್ರ, ಯಶ್‌ಪಾಲ್, ಸತೀಶ್ ಚಂದ್ರ, ಆರ್.ಎಸ್.ಶರ್ಮ, ಅವರ ಪಠ್ಯಗಳನ್ನು ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳಿಂದ ಕೈಬಿಟ್ಟದ್ದು. ಏಕೆಂದರೆ ಇವರೆಲ್ಲ ಇತಿಹಾಸದ ಮೂಲಕ ಈ ದೇಶದ ಬಹುಸಂಸ್ಕೃತಿಯ ವಸ್ತುಸ್ಥಿತಿಯನ್ನು ಹಿಡಿದಿಟ್ಟಿದ್ದರು. ಇದನ್ನು ಅರಗಿಸಿಕೊಳ್ಳಲಾಗದ ಸಂಘಿಗಳು ಇದನ್ನು ಪಠ್ಯಪುಸ್ತಕದಿಂದಲೇ ಎತ್ತಂಗಡಿ ಮಾಡಿದರು. ಇದು ಇವರ ದೊಡ್ಡ ಸಾಧನೆ!

ತನ್ನ ಉದ್ದೇಶ ಸಾಧನೆಯಲ್ಲಿ ಅಂಬೇಡ್ಕರ್ ದೊಡ್ಡ ತೊಡಕು ಎಂಬುದು ಸಂಘ ಪರಿವಾರಕ್ಕೆ ಬಹುಬೇಗ ಅರಿವಾಗಿತ್ತು. ಅದಕ್ಕಾಗಿ ಅದು ಅಂಬೇಡ್ಕರ್ ಅವರನ್ನು ನಿರಂತರ ದ್ವೇಷಿಸುತ್ತಾ ಬಂತು. ಇದು ಹಿಂದೂ ಕೋಡ್ ಬಿಲ್ ಚರ್ಚೆಯಲ್ಲಿ ಯಾವ ಎಗ್ಗಿಲ್ಲದೆ ಜಗತ್ತಿನೆದುರು ತೆರೆದುಕೊಂಡಿತು. ತನ್ನ ಜೀವನದುದ್ದಕ್ಕೂ, ಅಂಬೇಡ್ಕರ್ ಸನಾತನವಾದಿಗಳ ನಿಲುವನ್ನು ರಾಜಿರಹಿತವಾಗಿ ಖಂಡಿಸುತ್ತಲೇ ಬಂದರು. ಇದು ಇಂದಿಗೂ ದಲಿತರನ್ನು ಎಚ್ಚರಿಕೆಯ ನೆಲೆಯಲ್ಲಿ ಕೊಂಡೊಯ್ಯುತ್ತಲೇ ನಡೆಯುತ್ತಿದೆ. ಇಂದು ಈ ಎಚ್ಚರಿಕೆಯ ನೆಲೆ ಅರಿತ ಸಂಘ ಪರಿವಾರದವರು ಅಂಬೇಡ್ಕರ್ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಮುಂದಾಗಿದೆ. ಆ ಮೂಲಕ ದಲಿತರನ್ನು ಓಟ್ ಬ್ಯಾಂಕ್ ಮಾಡಿಕೊಳ್ಳುವ ಕಸರತ್ತು ನಡೆಸಿದೆ. ಇಷ್ಟೇ ಅಲ್ಲದೆ ತನ್ನ ಹಿಂದೂತ್ವ ಅಜೆಂಡಾವನ್ನು ಇವರ ಮೂಲಕವೇ ಸಾಧಿಸಲು ಇನ್ನಿಲ್ಲದ ಕಸರತ್ತನ್ನು ನಡೆಸುತ್ತಿದೆ. ಇದು ಬಹುಮುಖ್ಯವಾಗಿ ದಲಿತರಿಗೆ ಅರ್ಥವಾಗಬೇಕಿದೆ. ಇಲ್ಲದಿದ್ದರೆ ಪಗಡೆಯಾಟದಲ್ಲಿ ಬರೀ ಕಾಯಿಯಾಗಲು ಇವರ ಜೀವವೇ ಮುಡಿಪಿಟ್ಟಂತಾಗುತ್ತದೆ.

'ಪ್ರತಿದಿನ ಮುಂಜಾನೆ ಅತ್ಯಂತ ಆತಂಕ ಮತ್ತು ಭಯದಿಂದ ಬಾಗಿಲನ್ನು ತೆರೆಯಬೇಕಾದಂತಹ ಸಂದಿಗ್ಧತೆ ಮತ್ತು ದುಸ್ಥಿತಿಯಲ್ಲಿರುವ ಇಂಡಿಯಾದ ಮುಸ್ಲಿಮರು ಪ್ರತಿ ಕ್ಷಣವೂ ತಮ್ಮ ರಾಷ್ಟ್ರೀಯತೆ ಮತ್ತು ದೇಶಪ್ರೇಮವನ್ನು ಸಾಬೀತುಪಡಿಸುವಲ್ಲಿ ಬದುಕಬೇಕಾದಂತಹ ದುರಂತ ದಲ್ಲಿದ್ದಾರೆ' ಎಂದು ಬರೆಯುವ ಲೇಖಕರು ಮುಸ್ಲಿಮರ ಸಮಗ್ರ ಬದುಕನ್ನು ಇಲ್ಲಿ ವಿಶ್ಲೇಷಿಸಿದ್ದಾರೆ. ಅವರ ಶೈಕ್ಷಣಿಕ ಗುಣಮಟ್ಟ, ಅವರ ನಡುವಿನ ವೈರುಧ್ಯ, ಆರ್ಥಿಕ ಮಟ್ಟ, ಸಾಮಾಜಿಕ ವಸ್ತುಸ್ಥಿತಿ ಎಲ್ಲವನ್ನು ಅಂಕಿ ಅಂಶಗಳ ಸಮೇತ ವಿಸ್ತರಿಸಿದ್ದಾರೆ. ಇದರೊಂದಿಗೆ ಮುಸ್ಲಿಮರೊಂದಿಗೆ ಅಂಬೇಡ್ಕರ್ ವಾದಿಗಳೊಂದಿಗೆ ಹೋರಾಡಲು ದಲಿತರನ್ನೇ ತಯಾರು ಮಾಡಬೇಕು. ದಲಿತ ಹೆಣ್ಣುಮಕ್ಕಳನ್ನು ಶಾಶ್ವತ ಲೈಂಗಿಕ ಕಾರ್ಯಕರ್ತೆಯರಾಗಿ ರುವಂತೆ ಮಾಡಬೇಕೆಂಬುದು ಸಂಘ ಪರಿವಾರದ ಹುನ್ನಾರ. ಈ ತಂತ್ರಕ್ಕೆ ದಲಿತರೇ ಬಲಿಯಾಗುತ್ತಿರುವ ದುರಂತವನ್ನು ಲೇಖಕರು ಹಿಡಿಹಿಡಿಯಾಗಿ ತೆರೆದಿಟ್ಟಿದ್ದಾರೆ.

ಒಟ್ಟಿನಲ್ಲಿ ಹಿಂದೂಯಿಸಂನ ಎಲ್ಲ ವಿಕೃತ ಮುಖಗಳನ್ನು ಈ ಕೃತಿ ಮೇಲಿನ ಅಂಶಗಳ ಮೂಲಕ ಬಯಲಿಗೆಳೆದಿದೆ. ಮುಂದುವರಿದು ಸೆಕ್ಯುಲರ್ ತತ್ವಗಳಲ್ಲಿ ನಂಬಿಕೆ ಇಟ್ಟವರ ಒಗ್ಗೂಡುವಿಕೆ ಮತ್ತು ಬಹುಸಂಸ್ಕೃತಿಯ ಜನಪರ ರಾಜಕಾರಣದ ಮಾದರಿ ಕಟ್ಟಬೇಕಾದ ಅನಿವಾರ್ಯತೆಯನ್ನು ಸೂಚಿಸುವುದರ ಮೂಲಕ ತನ್ನದೇ ಆದ ಪರ್ಯಾಯಗಳನ್ನೂ ಲೇಖಕರು ಇಲ್ಲಿ ವಿಶ್ಲೇಷಿಸಿದ್ದಾರೆ. ಇಂದು ಭಾರತದಾದ್ಯಂತ ತಲ್ಲಣ ಉಂಟುಮಾಡಿದ ರೋಹಿತ್ ವೇಮುಲಾನ ಸಾವು, ದಲಿತರ ಮೇಲಿನ ಸರಣಿ ದೌರ್ಜನ್ಯಗಳು, ಕೋಮು ದಳ್ಳುರಿಗಳು ಇವೆಲ್ಲವುಗಳ ಹಿನ್ನೆಲೆಯಲ್ಲಿ ಹಿಂದೂತ್ವದ ಬೇರುಗಳನ್ನು ಸಮಗ್ರವಾಗಿ ಅರಿತುಕೊಳ್ಳಬೇಕಾದರೆ ಈ ಕೃತಿಯನ್ನು ಓದಲೇಬೇಕಾದ ಅನಿವಾರ್ಯತೆ ಓದುಗರ ಮೇಲಿದೆ.

● ಡಾ.ಎಚ್.ಡಿ. ಉಮಾಶಂಕರ



ಯೋಗೇಶ್ ಮಾಸ್ಟರ್


ಪುರಾಣದ ಹೂರಣ

ಅಯ್ಯಪ್ಪ ಯಾರು?

ಪೌರಾಣಿಕ ಕಥೆ

ಪಂದಳದ ರಾಜ ರಾಜಶೇಖರ ಪಂಪಾ ನದಿಯ ತಟದಲ್ಲಿರುವ ಕಾಡಿನಲ್ಲಿ ಬೇಟೆಯಾಡುತ್ತಿದ್ದಾಗ, ನದಿಯ ತಟದಲ್ಲಿ ಮಲಗಿರುವ ಶಿಶುವನ್ನು ಕಂಡ. ಅದನ್ನು ತೆಗೆದುಕೊಳ್ಳುವುದೋ ಬೇಡವೋ ಎಂಬ ದ್ವಂದ್ವದಲ್ಲಿರುವಾಗಲೇ ಅಲ್ಲಿಗೆ ಸನ್ಯಾಸಿಯ ರೂಪದಲ್ಲಿ ಬಂದ ಗಸ್ತ್ಯ ಮುನಿವರರು ಮಗುವನ್ನು ತೆಗೆದುಕೊಳ್ಳಲು ...ಸಿದರು, ಕಂಠದಲ್ಲಿ ಮಣಿ (ಗಂಟೆ) ಇರುವುದನ್ನು ಸೂಚಿಸಿ ಮಣಿಕಂಠ ಎಂದು ಹೆಸರಿಸಿದರು ಮತ್ತು ಆ ಮಗುವು ಹನ್ನೆರಡು ವರ್ಷಗಳಾದ ಬಳಿಕ ತಾನು ಭೂಮಿಗೆ ಬಂದಿರುವಂತಹ ಮಹೋದ್ದೇಶವು ಅರ್ಥವಾಗುವುದು ...ದೂ ತಿಳಿಸಿದರು. ರಾಜ ಮಗುವನ್ನು ತನ್ನ ಅರಮನೆಗೆ ತೆಗೆದುಕೊಂಡು ಹೋದ. ರಾಣಿ ಮತ್ತು ರಾಜ ಇಬ್ಬರೂ ಮಕ್ಕಳಿಲ್ಲದೇ ನೊಂದಿದ್ದು, ಶಿವನಲ್ಲಿ ಪ್ರಾರ್ಥಿಸುತ್ತಿದ್ದರು.





...ನರಿಗೆ ಮಗುವು ದೊರಕಿದಾಗ ಇಡೀ ಪಂದಳ ರಾಜ್ಯವು ಉತ್ತರಾಧಿಕಾರಿ ರಾಜಕುಮಾರನನ್ನು ಪಡೆದ ಸಂಭ್ರಮದಲ್ಲಿ ...ಲಾಡಿತು. ಬಾಲಕನೋ ಬಹಳ ಚುರುಕಾಗಿದ್ದು ವೇದಗಳನ್ನು ಅಧ್ಯಯನ ಮಾಡಿದ, ಎಲ್ಲಾ ಸಮರಕಲೆಗಳಲ್ಲಿ ...ರಂಗತನಾದ. ಅವನ ಗುರುಗಳಿಗೆಲ್ಲಾ ಅನ್ನಿಸಿತ್ತು ಇವನು ...ವೀ ಬಾಲಕನೆಂದು.

ಅವನ ವಿದ್ಯಾಭ್ಯಾಸವು ಪೂರ್ಣವಾದ ಮೇಲೆ ಗುರುದಕ್ಷಿಣೆಯನ್ನು ಸಲ್ಲಿಸಲು ಮಣಿಕಂಠ ಮುಂದಾದ. ...ತೆಯೇ ಗುರುವಿಗೆ ಅವನ ಶಕ್ತಿಯ ಬಗ್ಗೆ ಅರಿವಿದ್ದ ...ರಣ ತನ್ನ ಮೂಕಮಗನಿಗೆ ಮಾತು ತರಿಸಲು ಕೇಳಿಕೊಂಡ. ...ತೆಯೇ ಮಣಿಕಂಠ ಗುರುಸುತನಿಗೆ ಮಾತನ್ನು ...ಯಪಾಲಿಸಿ ಈ ತನ್ನ ದಿವ್ಯಶಕ್ತಿಯು ರಹಸ್ಯವಾಗಿಯೇ ...ರುವಂತೆ ಕೇಳಿಕೊಂಡ.

ಆ ಹೊತ್ತಿಗೆ ರಾಣಿಯು ತಾನೂ ಒಂದು ಗಂಡು ಮಗುವಿಗೆ ಜನ್ಮವಿತ್ತಿದ್ದಳು. ಅವನ ಹೆಸರು ರಾಜರಾಜನ್. ...ದರೆ ರಾಜಶೇಖರನಿಗೋ ಮಣಿಕಂಠನಿಗೆ ಪಟ್ಟಕಟ್ಟುವುದರಲ್ಲಿಯೇ ಒಲವು. ಅದಕ್ಕೆ ಸೂಕ್ತ ...ರಾರಿಯನ್ನು ಮಾಡಿಕೊಳ್ಳಲೂ ನಿಯೋಜಿಸಿದ. ಆದರೆ ...ರಕ್ಕೆ ಮಂತ್ರಿಯು ಸಮ್ಮತಿಸಿರಲಿಲ್ಲ, ಮಣಿಕಂಠನ ಕೊಲ್ಲಲು ...ಕಾದುದನ್ನೆಲ್ಲಾ ಮಾಡಿ, ಅವೆಲ್ಲವೂ ವಿಫಲವಾಗಿ ಕಡೆಗೆ ...ಣಿಯ ಬಳಿಗೆ ಹೋದ. ಅವಳಿಗೆ ಹುಟ್ಟಿರುವ ಮಗುವಿಗೇ ಪಟ್ಟಕಟ್ಟುವುದು ಸರಿಯೆಂದೂ, ಕಾಡಿನಲ್ಲಿ ದೊರಕಿರುವ ಮಗುವಿಗೆ ಪಟ್ಟಕಟ್ಟುವುದು ಬೇಡವೆಂದೂ ಮನವೊಲಿಸಿದ. ...ನ ಮಾತಿಗೆ ಮರುಳಾದ ರಾಣಿಯು ತಲೆನೋವೆಂದು ...ಸುತ್ತಾ ಮಲಗಿ, ಅವರು ಹೇಳಿಕೊಟ್ಟ ಹಾಗೆ ...ಜವೈದ್ಯನು, ಆ ತಲೆನೋವಿಗೆ ಹುಲಿಯ ಹಾಲನ್ನು ...ಷಧಿಯಾಗಿ ತರಬೇಕೆಂದೂ ಹೇಳಿಸಲ್ಪಡುತ್ತಾನೆ. ಅವರ ...ಚೇನೆಂದರೆ ಶೂರ ಬಾಲಕ ಮಣಿಕಂಠ ಕಾಡಿಗೆ ಹೋದಾಗ ...ಲ್ಲಿ ಕ್ರೂರಪ್ರಾಣಿಗಳಿಗೆ ಬಲಿಯಾಗುತ್ತಾನೆ, ಆ ರೀತಿ ...ಣಿಯ ಮಗನಿಗೆ ಪಟ್ಟದ ದಾರಿ ಸರಾಗವಾಗುತ್ತದೆ ...ದು.

ರಾಜಶೇಖರ ಸಂಚನ್ನು ಅರಿಯದಿದ್ದರೂ ಮಣಿಕಂಠನನ್ನು ...ಹಿಂಸಲು ಒಪ್ಪುವುದಿಲ್ಲ, ಆದರೆ ಮಣಿಕಂಠನಿಗೆ ತಾನು ...ದಿರುವ ಉದ್ದೇಶದ ಸಾಫಲ್ಯದ ಸಮಯ ...ದಿರುವುದನ್ನು ಮನಗಂಡು ಅವನು ತಾನೇ ರಾಜಶೇಖರನ ...ನವೊಲಿಸಿ ಕಾಡಿಗೆ ಹೋಗುತ್ತಾನೆ. ರಾಜಶೇಖರ ...ಕರನ್ನು ಮತ್ತು ಸೂಕ್ತ ರಕ್ಷಣೆ ವ್ಯವಸ್ಥೆಯೊಡನೆ ಕಳುಹಿಸಲು ...ತ್ತ ಮಾಡಿಕೊಳ್ಳುವಾಗ ಅದನ್ನು ನಿರಾಕರಿಸಿದ ಮಣಿಕಂಠ. ...ತ್ಯವಿರುವ ಆಹಾರ ಮತ್ತು ತೆಂಗಿನ ಕಾಯನ್ನೂ ಜೊತೆಗೆ ...ಯ್ಯಿಸಿದ. ಪರಮೇಶ್ವರನೇ ಕಳುಹಿಸಿದ ...ಚಭೂತಗಳೊಡನೆ ಮಣಿಕಂಠ ಕಾಡಿಗೆ ಬಂದ.

ಮಣಿಕಂಠ ತನ್ನ ದೈವೀ ಕರ್ತವ್ಯದಂತೆ ಕಾಡಿನಲ್ಲಿದ್ದ ...ಹಿಷಿಯ ಮುಖಾಮುಖಿಯಾದ. ಯುದ್ಧದಲ್ಲಿ ...ಹಿಷಿಯನ್ನು ದೇವಲೋಕದಿಂದ ಭೂಲೋಕಕ್ಕೆ ಎಸೆದ. ...ಳು ಅಳ್ಳುತಾ ನದಿಯ ದಂಡೆಗೆ ಬಿದ್ದಳು. ಅಳ್ಳುತಾ ...ಯಲ್ಲಿ ಅವಳಿಗೆ ಹೊಡೆದು, ಯುದ್ಧದ ಕೊನೆಯಲ್ಲಿ ಅವಳ ಎದೆಯ ಮೇಲೆ ಹತ್ತುವ ಮಣಿಕಂಠ ರೌದ್ರವಾಗಿ ಕುಣಿಯುತ್ತಾನೆ. ಆಗ ಮಹಿಷಿಗೆ ಇಂಥಾ ಪವರ್‌ಫುಲ್ ಡಾನ್ಸ್ ಮಾಡುವವನೆಂದರೆ ಇದು ಹರಿಹರನ ಪ್ರಾಡಕ್ಟೇ ಆಗಿರಬೇಕು ಎಂದು ಅರಿವಾಗಿ, ಶರಣಾಗಿ ಸಾಯುತ್ತಾಳೆ. ಮಣಿಕಂಠ ಮಾಡುವ ನೃತ್ಯವನ್ನು ಹರ ಮತ್ತು ಹರಿಯಿಬ್ಬರೂ ಕಾಲಕಟ್ಟಿ ಎಂಬ ಸ್ಥಳದಿಂದ ನೋಡುತ್ತಾರೆ.

ಕವಲನ್ ಎಂಬ ಮಹರ್ಷಿಯ ಮಗಳು ಲೀಲಾವತಿ ತನ್ನ ಪತಿಯಿಂದಲೇ (ದತ್ತಾತ್ರೇಯ) ಶಾಪಗ್ರಸ್ತಳಾಗಿ ಕರಂಬನ್‌ನ ಮಗಳಾಗಿ ಮಹಿಷಿಯ ಮುಖ ಹೊತ್ತು ಹುಟ್ಟಿರುತ್ತಾಳೆ. ಈಗ ಆ ಪೂರ್ವಜನ್ಮದಲ್ಲಿ ಧರ್ಮಶಾಸ್ತನಾಗಿದ್ದ ಮಹರ್ಷಿಯ ದಯದಿಂದ ಈಗ ಮೋಕ್ಷವನ್ನು ಹೊಂದುತ್ತಾಳೆ.

ನಂತರ ಮಣಿಕಂಠ ತನ್ನ ಪ್ರಯಾಣವನ್ನು ಕಾಡಿಗೆ ಮುಂದುವರಿಸುವಾಗ ಶಿವನೇ ಎದುರಾಗಿ ದೇವತೆಗಳ ಕೆಲಸವನ್ನು ಮಾಡಿಕೊಟ್ಟರೂ ಅವನ ಪ್ರೀತಿಯ ರಾಜಶೇಖರನಿಗೆ ಸಂತೋಷವಾಗುವ ಹಾಗೆ ಅರಮನೆಗೆ ಹಿಂದಿರುಗಿ ಹೋಗಲು ಸೂಚಿಸಿದ. ಇಂದ್ರನು ಹುಲಿಯಾಗಿ ಬರಲು ಮಣಿಕಂಠ ಅವನ ಮೇಲೇರಿದ. ಉಳಿದ ಹೆಣ್ಣು ದೇವತೆಯರು ಹೆಣ್ಣು ಹುಲಿಗಳಾಗಿ ಅವನನ್ನು ಅನುಸರಿಸಿದರು.

ಅರಮನೆಗೆ ಮಣಿಕಂಠ ಹುಲಿವಾಹನದಲ್ಲಿ ಬರಲು ಸಂಚು ಹೂಡಿದವರೆಲ್ಲ ಭಯಗೊಂಡು ತಮ್ಮ ತಪ್ಪನ್ನು ಒಪ್ಪಿಕೊಂಡರು. ಅವನ ದೈವೀ ಮೂಲವನ್ನು ಒಪ್ಪಿಕೊಂಡರು. ತಮ್ಮ ಮೋಕ್ಷಕ್ಕಾಗಿ ಮತ್ತು ರಾಜ್ಯದ ರಕ್ಷಣೆಗಾಗಿ ಅಲ್ಲಿಯೇ ನಿಲ್ಲಲು ಕೇಳಿಕೊಂಡರು. ಅದಕ್ಕೊಪ್ಪಿ ಮಣಿಕಂಠ ಅಂತರ್ಧಾನನಾದ. ರಾಜಶೇಖರ ತನ್ನ ಮುದ್ದಿನ ಮಗ ಮಣಿಕಂಠ ಬರದೇ ದುಃಖದಲ್ಲಿ ಅವನು ಬರುವವರೆಗೂ ಊಟ ಮಾಡುವುದಿಲ್ಲ ಎಂದು ಉಪವಾಸ ಮಲಗಿಬಿಟ್ಟ. ಆಗ ಮಣಿಕಂಠ ಅವನಿಗೆ ದರ್ಶನ ಕೊಟ್ಟ. ಮೋಕ್ಷಮಾರ್ಗವನ್ನು ಹೇಳಿಕೊಟ್ಟ. ತಾನೊಂದು ದೇವಸ್ಥಾನವನ್ನು ಕಟ್ಟಿಸಬೇಕೆಂದು ಕೇಳಿದ. ಅದರಂತೆ ಮಣಿಕಂಠನು ಒಂದು ಬಾಣವನ್ನು ಬಿಡಲು ಅದು ಶಬರಿಮಲೆಯ ಮೇಲೆ ಹೋಗಿಬಿದ್ದಿತು. ಅಲ್ಲಿ ದೇವಾಲಯವನ್ನು ಕಟ್ಟಿಸಲಾಯಿತು. ಮಹಾವಿಷ್ಣುವಿನ ಅವತಾರವಾದ ಪರಶುರಾಮ ತಾನೇ ಸ್ವಾಮಿ ಅಯ್ಯಪ್ಪನ ವಿಗ್ರಹವನ್ನು ಸ್ಥಾಪಿಸಿದನು. ಅಲ್ಲಿಗೆ ಪಂದಳ ರಾಜಕುಮಾರ, ಮಣಿಕಂಠನಾದ ಅಯ್ಯಪ್ಪನ ಕಥೆ ಮುಗಿಯಿತು.

ಐತಿಹಾಸಿಕ ಕಥೆ

ಸುಮಾರು ಹತ್ತು ತಲೆಮಾರುಗಳ ಹಿಂದಿನ ಕಥೆ.

ಅಯ್ಯಪ್ಪನ್ ಎಂಬ ಹೆಸರಿನಿಂದ ನಮಗೆಲ್ಲಾ ತಿಳಿದಿರುವ ಅವನ ಮೂಲ ಹೆಸರು ಅಯ್ಯನ್. ಅವನು ವೆಲ್ಲಲಾರ್ ಕುಲದವನು. ಪಂದಳ ರಾಜವಂಶಕ್ಕೆ ಅವನೊಬ್ಬ ಸೇನಾಧಿಪತಿ. ಅವನು ತನ್ನ ಹಿರಿಯ ಸಂಬಂಧಿಯೊಡನೆ (ಸೋದರ



ಮಾವ?) ಏರುಮೇಲಿಯ ಪೆರಿಸ್ಸೆರಿ ಪಿಳ್ಳೈಯಲ್ಲಿ (ಕೋಟ್ಟಾಯಂ ಜಿಲ್ಲೆ, ಕೇರಳ) ಇದ್ದ.

ಶಬರಿಮಲೆಯನ್ನು ಉದಯನನ್ ಎಂಬಾತನು ಆಕ್ರಮಣ ಮಾಡಿದಾಗ ಇದೇ ಅಯ್ಯನ್ ಶೌರ್ಯ ಸಾಹಸಗಳಿಂದ ಹೋರಾಡಿ, ಅವನ ಸೋಲಿಸುವಲ್ಲಿ ಮಹತ್ತರ ಪಾತ್ರ ವಹಿಸಿದ್ದ. ಉದಯನನ್ ಶಬರಿಮಲೆಯ ಶಾಸ್ತ ದೇವಾಲಯವನ್ನೂ ಕೆಡವಿ ಹಾಕುವ ಪ್ರಯತ್ನವನ್ನು ಮಾಡಿದ್ದ ಅದೇ ಸಮಯದಲ್ಲಿ (800 ವರ್ಷಗಳ ಹಿಂದೆ) ಪಾಂಡ್ಯರ ರಾಜವಂಶವು ತಮಿಳುನಾಡಿನಿಂದ ಕೇರಳಕ್ಕೆ ವಲಸೆ ಬಂದಿತ್ತು. ಪಾಂಡ್ಯರಾಜನು ಶಾಸ್ತ ದೇಗುಲವನ್ನು ಅಯ್ಯನ್, ವಾವರ್, ಕಂಜಿರಾಪಲ್ಲಿಯ ಮುಸ್ಲಿಂ ಯುವಕರ, ಕಡುತಾ, ಚೆಂಗನೂರು, ಆಳಪುಳ ಮತ್ತು ಮುಳ್ಳುಕ್ಕೀರ್‌ನ ನಾಯರ್ ಯುವಕರ ನೆರವಿನಿಂದ ಮತ್ತೆ ಕಟ್ಟಿಸಿದನು.

ನಂತರ ನಡೆದ ಹೋರಾಟವೊಂದರಲ್ಲಿ ಅಯ್ಯನ್ ಅಥವಾ ಅಯ್ಯಪ್ಪನ್ ಹತ್ಯೆಯಾದ. ಅವನ ಹಿರಿಯ ಸಂಬಂಧಿ ಪೆರಿಸ್ಸೆರಿ ಪಿಳ್ಳೈ ಕೋಚಂಪಳಂ ಅಂದರೆ ಒಂದು ಸಣ್ಣ ಶಾಸ್ತ ದೇಗುಲವನ್ನು ಏರುಮೆಲಿ, ವಾವರ್‌ಪಲ್ಲಿ ಮಸೀದಿಯ ಎದುರು ಕಟ್ಟಿಸಿದ. ವಾವರ್ ಸ್ವಾಮಿಯ ನೆನಪಿನಲ್ಲಿ ಈ ವಾವರ್‌ಪಲ್ಲಿಯನ್ನು ಮುಸ್ಲೀಮರು ಕಟ್ಟಿಸಿದ್ದಂತೆ.

ಕಾಲಸರಿದಂತೆ, ಅಯ್ಯಪ್ಪನ್‌ನ ಅವಸಾನದ ತರುವಾಯ ಜನರು ಅವನು ಶಾಸ್ತಸ್ವಾಮಿಯ ಅವತಾರವೇ ಎನ್ನತೊಡಗಿದರು. ಅಂತೆಯೇ ಪೂಜಿಸತೊಡಗಿದರು. ನಂತರ ಅಯ್ಯಪ್ಪನೂ ಮತ್ತು ಶಾಸ್ತನೂ ಸಮಾನ ಹೆಸರುಗಳೇ ಆಗಿಬಿಟ್ಟವು.

ಇನ್ನೂ ಕೆಲವು ಮೂಲಗಳು ಹೇಳುವುದೇನೆಂದರೆ ಅಯ್ಯಪ್ಪನ್ ಓರ್ವ ಬ್ರಾಹ್ಮಣನ ಮಗನೆಂದು. ಆದರೆ ನಲಂಕಲ್ ಕೃಷ್ಣಪಿಳ್ಳೈಯವರು ತಮ್ಮ ಪುಸ್ತಕವಾದ "ಮಹಾಶೇಖ್ರಾಗಲಕ್ಕುಮುಂಪಿಲ್"ನಲ್ಲಿ ಹೇಳುವಂತೆ, ಬ್ರಾಹ್ಮಣರು ಅಯ್ಯಪ್ಪನ್ ಅಥವಾ ಅಯ್ಯನ್ ಎಂದು ಹೆಸರಿಸುವುದಿಲ್ಲ.

ಇನ್ನು ಪ್ರಾಚೀನ "ಎಲವಾರ್ ಸೇವಾಂಪಟ್ಟು"ನಲ್ಲಿ ಸ್ಪಷ್ಟಪಡಿಸುವಂತೆ, ಅಯ್ಯನ್ ಎಂಬುವ ಹೆಸರು ವೆಲ್ಲಲಾರ್ ಕುಲಂಗೆ ಸೇರಿದ್ದು, ಪುತೆಂವೀಡು ಎಂದು ಕರೆಯಲ್ಪಡುವ ವೆಲ್ಲಾಲ ಮನೆಯು ಇಂದಿಗೂ ಏರುಮೆಲಿಯಲ್ಲಿದೆ. ಸುಮಾರು ಮುನ್ನೂರು ವರ್ಷಗಳ ಹಿಂದಿನ ಪಾಳೀಗೋಡೆಯ ಮಣ್ಣಿನ ಮನೆಯು ಪೆರಿಸ್ಸೆರಿ ಪಿಳ್ಳೈಯದೇ ಎಂದು ಹೇಳುತ್ತಾರೆ. ಅಯ್ಯಪ್ಪನ್ ಉಪಯೋಗಿಸಿದ ಖಡ್ಗವೆಂದು ಒಂದು ಹಳೆಯ ಕತ್ತಿಯನ್ನೂ ತೋರುತ್ತಾರೆ.


ಇದು ಐತಿಹಾಸಿಕವೆಂದು ಹೇಳಲಾಗುವ ವರ್ಷನ್.

ಅಯ್ಯಪ್ಪನದು ತಮಿಳು ಮೂಲವೆಂದು ಹೇಳಲಾಗುವ ಅನೇಕ ಆಧಾರಗಳನ್ನು ಬಲ್ಲವರು ನೀಡುತ್ತಾರೆ. ಪ್ರಾಚೀನ ತಮಿಳಿನಲ್ಲಿ "ಅಯ್ಯನ್" ಎನ್ನುವುದು ಗೌರವ ಸೂಚಕ ಪದ. ಹಾಗೆಯೇ ಅಪ್ಪನ್ ಎಂದರೆ ತಂದೆ. ಹಿರಿಯಪ್ಪ ಅಥವಾ ಮಾನ್ಯತೆಯುಳ್ಳ ತಂದೆ ಎಂಬರ್ಥವನ್ನು ಗುರುತಿಸಬಹುದು. ಮತ್ತೊಂದು ಆಸಕ್ತಿದಾಯಕ ವಿಷಯವೆಂದರೆ ಅಯ್ಯಪ್ಪನ್ ತಮಿಳಿನ ಪ್ರಾಚೀನ ಪಂಗಡಗಳಲ್ಲಿ ಗ್ರಾಮ (ರಕ್ಷಕ) ದೇವತೆಯೂ ಹೌದು. ನೈಸರ್ಗಿಕ ವಿದ್ಯಮಾನಗಳನ್ನೇ ಅಯ್ಯಪ್ಪನ್ ಎಂದು ಪ್ರತಿಮಾರೂಪದಿಂದ ನೋಡಿರುವುದೇ ಹೊರತು ಬೇರೆ ಯಾವ ಐತಿಹಾಸಿಕ ಪುರಾವೆಗಳನ್ನು ಹೊಂದಿಲ್ಲ ಎಂಬ ವಾದವೂ ಉಂಟು.

ಸ್ಕಂದ ಪುರಾಣದಲ್ಲಿ ದುರ್ಗೆಯೇ ಧರ್ಮಶಾಸ್ತನಾಗಿ ಪುರುಷರೂಪದಿಂದ ಜನ್ಮ ತಳೆದಿದ್ದು ಎಂದೂ ಹೇಳುತ್ತಾರೆ.

ಮತ್ತೊಂದು ಐತಿಹಾಸಿಕ ನಿರೂಪಣೆ

ಪಂದಳ ರಾಜವಂಶದ ಬೇರು ತಮಿಳುನಾಡಿನಲ್ಲಿದೆ. ಪಂದಳದ ವಂಶಸ್ಥರು ಮಧುರೈಯ ಪಾಂಡ್ಯವಂಶಜರು. ದೆಹಲಿಯ ಸುಲ್ತಾನನಾದ ಅಲ್ಲಾವುದ್ದೀನ್ ಖಿಲ್ಜಿಯ ದಂಡನಾಯಕನಾದ ಮಲ್ಲಿಕಾಫರ್‌ನ ಎದುರಿಸಿ ಸೋತು ಇಂದಿನ ಕೇರಳಭಾಗಕ್ಕೆ ಈ ಪಾಂಡ್ಯರು ಎರಡು ಗುಂಪುಗಳಾಗಿ ವಲಸೆ ಬಂದರು. ಒಂದು ಗುಂಪು ಕೊಟ್ಟಯಂ ಜಿಲ್ಲೆಯ ಪುಂಜಾರ್‌ನಲ್ಲಿ ನೆಲೆಸಿತು. ಹಾಗೆಯೇ ಮತ್ತೊಂದು ಪಂದಳಂನಲ್ಲಿ ನೆಲೆಸಿತು. ಇದು ಆಗಿದ್ದು ಕ್ರಿಸ್ತಶಕ 1202ರಲ್ಲಿ. ನಂತರ ಪಂದಳ ರಾಜ್ಯವನ್ನು ಸ್ಥಾಪಿಸಲು ವೆನಾಡಿನ ಅರಸ ಸಹಾಯ ಮಾಡಿದ. ಅದರ ಸುತ್ತಳತೆ ಸುಮಾರು ಸಾವಿರ ಚದರ ಮೈಲುಗಳು. ಪಂದಳದ ಕ್ಷತ್ರಿಯ ರಾಜವಂಶಜರು ಭಾರ್ಗವ ಗೋತ್ರಕ್ಕೆ ಸೇರಿದವರು. ಭಾರ್ಗವ ಎಂದರೆ ಪರಶುರಾಮ. ಕೇರಳದ ಇನ್ನಿತರ ಕ್ಷತ್ರಿಯ ರಾಜವಂಶಗಳು ವಿಶ್ವಾಮಿತ್ರ ಗೋತ್ರಕ್ಕೆ ಸೇರಿದವರು.



ಜಾತ್ಯತೀತ ನಿಲುವನ್ನು ಹೊಂದಿದ್ದ ಪಂದಳ ರಾಜಮನೆತನದವರು ಕಡಕ್ಕಾಡ್‌ನಲ್ಲಿ ಮುಸ್ಲಿಮರು ಮಸೀದಿಯನ್ನು, ಕುಡಸ್ಸನದ್‌ನಲ್ಲಿ ಕ್ರೈಸ್ತರು ಚರ್ಚನ್ನು ಕಟ್ಟಿಕೊಳ್ಳಲೂ ಸಹಕರಿಸಿದರು. ಹಾಗೆಯೇ ಬೌದ್ಧ ಅನುಯಾಯಿಗಳಿಗೂ ಅನುವು ಮಾಡಿಕೊಟ್ಟಿದ್ದರು.

ಈ ಶಬರಿಮಲೈಯ ವ್ರತಾಚರಣೆಗಳಿಗೆ, ತೀರ್ಥಯಾತ್ರೆಗೆ ಸಂಬಂಧಪಟ್ಟಂತೆ ಯಾವಾಗ ಅದು ಪ್ರಾರಂಭವಾಗಿರಬಹುದೆಂಬುದಕ್ಕೆ ಸರಿಯಾದ ಮಾಹಿತಿಗಳಿಲ್ಲ. ಆದರೆ ದೇವಾಲಯವು ನಿರ್ಮಾಣವಾದ ಮೇಲೆ ಸುಮಾರು ಮುನ್ನೂರು ವರ್ಷಗಳೇ ದೇವಸ್ಥಾನವು ಅರಣ್ಯಗರ್ಭದಲ್ಲಿ ಮುಳುಗಿದ್ದು, ಜನರಿಂದ ದೂರವಾಗಿದ್ದಿತ್ತೆನ್ನುತ್ತಾರೆ. ಮುಂದಿನ ತಲೆಮಾರಿನ ರಾಜನೊಬ್ಬ ಶಬರಿಮಲೆಯ ಸಾಂಪ್ರದಾಯದ ಹಾದಿಯನ್ನು ಸಂಶೋಧಿಸಿದ. ಅವನಿಗೆ ಅನೇಕ ಮಂದಿ ಅನುಯಾಯಿಗಳಿದ್ದರು. ಅವರಲ್ಲಿ ವಾವರ್ ವಂಶಸ್ಥರೂ ಕೂಡ. ಅವರು ಏರುಮಲೈಯ ಪೆಟ್ಟ ತುಳ್ಳಾಳನ್ನು ಕೇಂದ್ರವಾಗಿಸಿಕೊಂಡರು. ಅವನ ಅನುಯಾಯಿಗಳು ಶಬರಿಮಲೆಯನ್ನು ಸಂದರ್ಶಿಸುವ ಪರಿಪಾಠವನ್ನಿಟ್ಟುಕೊಂಡರು. 1821ರಲ್ಲಿ ಪಂದಳಂ ತಿರುವನಂತಪುರಕ್ಕೆ ಸೇರ್ಪಡೆಯಾಯಿತು. ಶಬರಿಮಲೆಯೂ ಸೇರಿದಂತೆ ನಲವತ್ತೆಂಟು ದೇವಾಲಯಗಳು ತಿರುವನಂತಪುರಕ್ಕೆ ಸೇರಿತು. ಶಬರಿಮಲೆಯಲ್ಲಿ ವಿಗ್ರಹದ ಪ್ರತಿಷ್ಠಾಪನೆಯಾಗಿದ್ದೇ 1910ರಲ್ಲಿ. 1971ರ ನಂತರ ದೇವಾಲಯವು ಜನಪ್ರಿಯವಾಯಿತು. ಇಂದಿಗೆ ಈ ಮಟ್ಟದಲ್ಲಿದೆ.

ಆರಾಧನಾ ಪದ್ಧತಿ


ಇನ್ನು ಶಬರಿಮಲೆಯ ಆರಾಧನಾ ಪದ್ಧತಿಯನ್ನು ಗಮನಿಸಿ ನೋಡಿದರೆ, ಅದರಲ್ಲಿ ಶೈವ, ಶಾಕ್ತ, ವೈಷ್ಣವ, ಬೌದ್ಧ ಮತ್ತು ಜೈನ; ಈ ಐದು ಪರಂಪರೆಗಳ ಛಾಯೆಗಳನ್ನು ಗುರುತಿಸಬಹುದು.

ಜೊತೆಗೆ ಅಯ್ಯಪ್ಪನು ಬೌದ್ಧರ ಶಾಸ್ತನೇ? ಸ್ವಾಮಿಯೇ ಶರಣಂ ಅಯ್ಯಪ್ಪನಿಗೂ, ಶರಣಂ ಗಚ್ಛಾಮಿಗೂ ಏನಾದರೂ ಸಂಬಂಧವಿದೆಯೇ? ನೋಡೋಣ.



ಪೇಜಾವರರಿಗೆ ಬುದ್ಧಿಗೇಡಿ ಶೂದ್ರರ ಜಯಘೋಷ

ಹಿಂದಿನ ಎರಡು ತಿಂಗಳಿನಿಂದ ಪೇಜಾವರರಿಗೆ ಪೌರ ಸನ್ಮಾನ, ಗುರುವಂದನೆ, ತುಲಾಭಾರ, ಪಾದಪೂಜೆ, ಮೆರವಣಿಗೆ- ಇವೇ ಸುದ್ದಿಗಳು ಸ್ಥಳೀಯ ಬೆಳಗಿನ ಎಲ್ಲಾ ಪತ್ರಿಕೆಗಳಲ್ಲೂ ತುಂಬಿದ್ದರಿಂದ ಕನ್ನಡ ದಿನಪತ್ರಿಕೆ ಓದಲು ಮನಸ್ಸೇ ಬರುತ್ತಿರಲಿಲ್ಲ. ಪರ್ಯಾಯ ಮಹೋತ್ಸವದ ಪ್ರಚಾರಕ್ಕಾಗಿ ಮತ್ತು ಫಂಡ್ ಕಲೆಕ್ಷನ್ನಿಗಾಗಿ ನಡೆಯುವ ಈ ಸಮಾರಂಭಗಳ ಸಚಿತ್ರ ಸುದ್ದಿಗಳ ಬಗ್ಗೆ ಸಾಮಾನ್ಯ ಜನರಿಗೆ ಆಸಕ್ತಿಯಿರಲಿಲ್ಲ. ಆದರೂ ಇಲ್ಲಿಯ ಎಲ್ಲಾ ಬೆಳಗಿನ ಪತ್ರಿಕೆಗಳ ಸಂಪಾದಕ ವರ್ಗ ವೈದಿಕರಾಗಿದ್ದರಿಂದ ಓದುಗರಿಗೆ ಬೇಡವಿದ್ದರೂ ಅದೇ ಪೇಜಾವರರ ಸುದ್ದಿಯನ್ನು ತುರುಕುತ್ತಿದ್ದರು.



ಪರ್ಯಾಯಕ್ಕೆ ಮುಂಚಿನ ಮಂಗಳವಾರ ಪೇಜಾವರರು ಮೊದಲು ಮುಲ್ಕಿಯ ಬಪ್ಪನಾಡು ದುರ್ಗಾಪರಮೇಶ್ವರಿ ದೇವಳಕ್ಕೆ ಭೇಟಿ ನೀಡಿ ಅಲ್ಲಿ ದೇವಿಗೆ ಕೇವಲ ಆರತಿ ಮಾಡಿ ನಂತರ ಆಶೀರ್ವಚನ ನೀಡಿದರು. ಆದರೆ ದೇವಿಯ ತೀರ್ಥ ಪ್ರಸಾದ ಸ್ವೀಕರಿಸಲಿಲ್ಲ. ಆಮೇಲೆ ಅಲ್ಲಿಯೇ ಹತ್ತಿರದಲ್ಲಿದ್ದ ವೆಂಕಟರಮಣ ದೇವಸ್ಥಾನಕ್ಕೆ ಹೋಗಿ ಅಲ್ಲಿ ವೈಷ್ಣವ ದೇವರ ತೀರ್ಥಪ್ರಸಾದ ಸ್ವೀಕರಿಸಿ ನಂತರ ಆಶೀರ್ವಚನ ನೀಡಿದರು. ದುರ್ಗಾದೇವಿಯ ಪ್ರಸಾದ ಅವರಿಗೆ ಯಾಕೆ ವರ್ಜ್ಯವಾಯಿತು ಎಂದು ಅವರೇ ಹೇಳ ಬೇಕು. ದೇವರಲ್ಲಿಯೇ ಹೀಗೆ ಭೇದಭಾವ ಮಾಡುವವರು ಇನ್ನು ಮಾನವರಲ್ಲಿ ಭೇದಭಾವ ಮಾಡದೇ ಇರುತ್ತಾರೆಯೇ?

ಕೆಲತಿಂಗಳ ಹಿಂದೆ ಪೇಜಾವರರು ಉಡುಪಿಯ ದಲಿತರ ಕೇರಿಗೆ ಹೋಗಿದ್ದಾಗ ಅಲ್ಲಿಯ ದೇವರಿಗೆ ಕೈಸಹ ಮುಗಿಯದಿರುವ ಬಗ್ಗೆ ಪತ್ರಕರ್ತರು ಕೇಳಿದಾಗ ಪೇಜಾವರ ಹೇಳಿದ್ದೇನೆಂದರೆ- ತಾನು ಉಡುಪಿ ಕೃಷ್ಣನ ಸಹಿತ ಯಾವುದೇ ದೇವರಿಗೆ ಕೈ ಮುಗಿಯುವುದಿಲ್ಲ ಮತ್ತು ಪೂಜೆ ಸಹ ಮಾಡುವುದಿಲ್ಲ, ಕೇವಲ ತಮ್ಮ ಗುರುಗಳಿಗೆ (ಮಧ್ವಾಚಾರ್ಯರಿಗೆ) ಮಾತ್ರ ತಾನು ಪೂಜೆ ಮಾಡುವುದು ಮತ್ತು ಕೈಮುಗಿಯುವುದು ಎಂದು. ಆದರೆ ಪರ್ಯಾಯದ ಮರುದಿನದ ಪತ್ರಿಕೆಯಲ್ಲಿ ಅವರು ಕೃಷ್ಣನ ಮೂರ್ತಿಗೆ ಪೂಜೆ ಮಾಡುವ ಮತ್ತು ಕೈ ಮುಗಿಯುವ ಚಿತ್ರಗಳು ರಾರಾಜಿಸುತ್ತಿದ್ದವು. ಇದುವೇ ಈ ವ್ಯಕ್ತಿಯ ಆಷಾಢಭೂತಿತನ.


ತ್ರಿಮತಸ್ಥ ಬ್ರಾಹ್ಮಣರು ಒಂದಾಗಬೇಕು, ಮದುವೆ ಸಂಬಂಧ ಬೆಳೆಸಬೇಕು ಎಂದು ಕರೆ ಕೊಡುವ ಪೇಜಾವರರು ಎಲ್ಲಾ ಹಿಂದೂ ಜಾತಿಗಳು ಒಂದಾಗಬೇಕು ಮದುವೆ ಸಂಬಂಧ ಬೆಳೆಸಬೇಕು ಎಂದು ಅಪ್ಪಿತಪ್ಪಿಯೂ ಕರೆ ಕೊಡುವುದಿಲ್ಲ.

ಹಣ ಮುಖ್ಯವಲ್ಲ ಭಕ್ತಿ ಶ್ರದ್ಧೆ ಮುಖ್ಯ ಎಂದು ಬೋಧಿಸುವ ಪೇಜಾವರರು ಇಲ್ಲಿಯ ಯುಪಿಸಿಎಲ್ ವಿದ್ಯುತ್ ಕಂಪನಿಯ ಮೇಲೆ ಒತ್ತಡ ಹೇರಿ ಐವತ್ತು ಲಕ್ಷ ದೇಣಿಗೆ ಪಡೆದಿದ್ದಾರೆ ಮತ್ತು ಅದಕ್ಕೆ ಬದಲಾಗಿ ಈ ಆದಾಣಿ ಕಂಪನಿಯ ಮೂರು ಪಟ್ಟು ವಿಸ್ತರಣಾ ಯೋಜನೆಗೆ ಇಲ್ಲಿಯ ಜನರು ವಿರೋಧ ವ್ಯಕ್ತಪಡಿಸದಂತೆ ನೋಡಿಕೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರಂತೆ. ಪರ್ಯಾಯದ ಮರುದಿನ ಟೆಲಿಕಾಮ್ ಕಳಂಕಿತ ನೀರಾ ರಾಡಿಯಾ ಎಂಬ ದಿಲ್ಲಿಯ ಪವರ್ ಬ್ರೋಕರಳನ್ನು ಮಠಕ್ಕೆ ಕರೆಸಿ ಅವಳಿಗೆ 'ಭಕ್ತ ಮೀರಾ' ಎಂಬ ಬಿರುದು ಕೊಟ್ಟು ಪೇಜಾವರರು ವಿಶೇಷ ಸನ್ಮಾನ ಮಾಡಿರುವ ಫೋಟೋಗಳೂ ಪತ್ರಿಕೆಗಳಲ್ಲಿ ಬಂದಿವೆ. ದಿಲ್ಲಿಯಲ್ಲೂ ಒಂದು ಉಡುಪಿ ಮಠದ ಶಾಖೆಯಿದ್ದು ಅದರ ಆಡಳಿತ ನೀರಾ ರಾಡಿಯಳ ಕೈಯಲ್ಲಿದ್ದು ಅದು ದಿಲ್ಲಿಯ ರಾಜಕಾರಣಿಗಳಿಗೆ ಮತ್ತು ಉದ್ಯಮಿಗಳಿಗೆ ಸ್ವಿಸ್ ಬ್ಯಾಂಕ್ ಆಗಿದೆ ಎಂಬ ಆರೋಪಗಳಿವೆ. ಅದಕ್ಕಾಗಿ ಈ ರಾಡಿಯಾ ಉಡುಪಿ ಮಠಕ್ಕೆ ಅಷ್ಟು ಹತ್ತಿರ ಎನ್ನಲಾಗುತ್ತಿದೆ. ಏಳೆಂಟು ತಿಂಗಳ ಹಿಂದೆ ಆಂಧ್ರದ ರೆಡ್ಡಿಯೊಬ್ಬ ಬಂದು ತಾನು ಉಡುಪಿ ಮಠಕ್ಕೆ ಆರು ನೂರು ಕೋಟಿ ರೂಪಾಯಿ ದಾನ ಕೊಡುವುದಾಗಿ ಸಾರ್ವಜನಿಕ ಸಭೆಯಲ್ಲಿ ಪೇಜಾವರರಿಗೆ ವಾಗ್ದಾನ ಮಾಡಿ ಅವರಿಂದ ದೊಡ್ಡ ಸನ್ಮಾನ ಹಾಗೂ ಕಾಣಿಕೆ ಪಡೆದಿದ್ದನು ಹಾಗೂ ಆ ಹಣವನ್ನು ಬೆಂಗಳೂರಿನಲ್ಲಿ ಒಂದು ಮೆಡಿಕಲ್ ಕಾಲೇಜು ಕಟ್ಟಿಸಲು ಬಳಸುವುದಾಗಿ ಪೇಜಾವರರು ಘೋಷಿಸಿದ್ದರು. ಆ ಆರುನೂರು ಕೋಟಿ ರೂಪಾಯಿ ನಂತರ ಏನಾಯಿತು ಎಂದು ಯಾರಿಗೂ ಗೊತ್ತಿಲ್ಲ.

ಪರ್ಯಾಯದ ಮುನ್ನಾ ದಿನ ಬೆಳಗ್ಗೆ ಒಂಬತ್ತು ಗಂಟೆಗೆ ಪರ್ಯಾಯದ ವಿಧಿ ಸುರುವಾಗಬೇಕಿತ್ತು. ಆದರೆ ಪೇಜಾವರರು ಅದನ್ನು ಸ್ವಲ್ಪ ವಿಳಂಬ ಮಾಡಿ ಈ ನಡುವೆ ಮಣಿಪಾಲಕ್ಕೆ ಧಾವಿಸಿ ಅಲ್ಲಿ ಮಾಜಿ ಬಿಜೆಪಿ ಶಾಸಕ ರಘುಪತಿ ಭಟ್ಟನ ನೂರು ಕೋಟಿ ರೂಪಾಯಿಯ ಕಂಟ್ರೀ-ಇನ್-ಸ್ವೀಟ್ಸ್ ಎಂಬ ಚತುರ್-ತಾರಾ (4 ಸ್ಟಾರ್) ಹೊಟೇಲ್ ಉದ್ಘಾಟಿಸಿ ಬಂದರು. ಈ ರಘುಪತಿ ಭಟ್ಟ ಕೇವಲ ಒಂದೇ ಅವಧಿಗೆ ಶಾಸಕನಾಗಿದ್ದು ಹೆಂಡತಿಯ ಆತ್ಮಹತ್ಯೆ ಹಾಗೂ ಸೆಂಟ್‌ಮೇರಿ ದ್ವೀಪದಲ್ಲಿ ರೇವ್ ಪಾರ್ಟಿ ಮತ್ತು ಮುಂಬೈಯ ರಾಸಲೀಲೆ ವಿಡಿಯೋಗೇ ಪ್ರಸಿದ್ಧನಾಗಿ ದ್ದವನಿಗೆ ನೂರು ಕೋಟಿ ರೂಪಾಯಿ ಹೇಗೆ ಬಂತು ಎಂದು ಯಾರಿಗೂ ಗೊತ್ತಿಲ್ಲ. ಅದಕ್ಕೇ ಹೇಳುವುದು ಕಾಂಗ್ರೆಸ್‌ನವರು ಅರವತ್ತು ವರ್ಷದಲ್ಲಿ ಮಾಡಲಾಗದ್ದನ್ನು ಬಿಜೆಪಿಯವರು ಕೇವಲ ಐದೇ ವರ್ಷದಲ್ಲಿ ಮಾಡಿದರು ಎಂದು.

ಈ 4-ಸ್ಟಾರ್ ಹೋಟೆಲಿನಲ್ಲಿ ಮಾಂಸಾಹಾರ, ಶರಾಬು ಹಾಗೂ ವಿದೇಶಿಗಳಿಗೆ ಗೋಮಾಂಸ ಸಿಗಲಿದೆಯಂತೆ. ಇಂತಹ ಹೋಟೆಲನ್ನು ಪೇಜಾವರರು ಅವಸರವಸರವಾಗಿ ಪರ್ಯಾಯದ ನಡುವೆಯೇ ಉದ್ಘಾಟಿಸಿದ್ದು ಅವರು ಜನರಿಗೆ ಬೋಧಿಸುವ ಸಾತ್ವಿಕ ಆಹಾರದ ತತ್ವಗಳನ್ನೇ ಅಣಕಿಸುವಂತಿದೆ. ಲೋಕಾಯುಕ್ತ ಭಾಸ್ಕರ್ ರಾವ್ ಕಳಂಕಿತರಲ್ಲ ಅವರು ರಾಜೀನಾಮೆ ಕೊಡುವ ಅಗತ್ಯವೇ ಇಲ್ಲ ಎಂದು ದೊಡ್ಡ ಕಾನೂನುಪಂಡಿತನಂತೆ ಸಲಹೆ ಕೊಟ್ಟವರೂ ಇದೇ ಪೇಜಾವರರು. ಇಂತಹವರನ್ನೂ ಯಾರೋ ಒಬ್ಬ ಮೂರ್ಖ ರಾಜಕಾರಣಿ ನಡೆದಾಡುವ ದೇವರೆಂದು ಕರೆದಿದ್ದಾನೆ, ಇನ್ನೊಬ್ಬ ಮಹಾ ತಪಸ್ವಿ ಎಂದಿದ್ದಾನೆ, ಮತ್ತೊಬ್ಬ ಮಗುವಿನಂತಹ ಮನಸ್ಸಿನ ಸಂತ ಎಂದಿದ್ದಾನೆ. ಒಬ್ಬಳು ಪೆದ್ದಿ ಇದು ಸಹಸ್ರಮಾನದ ವೈಭವ ಎಂದಿದ್ದಾ[ಳೆ]. ಸಮಯಸಾಧಕರ ಸಂತೆಯಲ್ಲಿ ಒಬ್ಬನ ಬೆನ್ನು ಇನ್ನೊ[ಬ್ಬ] ಕೆರೆಯುತ್ತಾ ಒಬ್ಬರಿಗೊಬ್ಬರು ಬಿರುದುಗಳನ್ನು ಕೊಡುತ್ತಿದ್ದ[ರೆ] ಬುದ್ಧಿಗೇಡಿ ಶೂದ್ರರು ಜಯಘೋಷ ಹಾಕಿದ್ದೇ ಹಾಕಿದ[್ದು].

-ವೀರಪ್ಪ ಡಿ.ಎನ್., ಮಂಗಳೂರು



ಇದುವೇ ವೈದಿಕ ಧರ್ಮದ ಒಳಸುಳಿ

ಪುತ್ತಿಗೆ ಸುಗುಣೇಂದ್ರ ಶ್ರೀಗಳು ಸಾಗರಲ್ಲೋಂಘ[ನ] ಮಾಡಿದ್ದಾರೆ ಮತ್ತು ವಿದೇಶ ಪ್ರಯಾಣ ಮಾಡಿದ್ದಾ[ರೆ] ಎಂಬ ಕಾರಣಕ್ಕೆ ಕಳೆದ ಹಲವಾರು ವರ್ಷಗಳಿಂ[ದ] ಉಡುಪಿಯ ಅಷ್ಟಮಠಗಳಲ್ಲಿ ತೀರಾ ಸಂಪ್ರದಾಯಸ್ಥರಾ[ದ] ಇತರ ಮಠಗಳ ಯತಿಗಳು ಪುತ್ತಿಗೆ ಶ್ರೀಗಳನ್[ನು] ವಿರೋಧಿಸುತ್ತಲೇ ಬಂದಿದ್ದಾರೆ. ಅವರ ಪರ್ಯಾಯ ಸರ[ದಿ] ಬಂದಿದ್ದಾಗ ಅವರಿಗೆ ಕೃಷ್ಣನ ಪೂಜಾಕಾರ್ಯವನ್[ನು] ವಹಿಸಿಕೊಳ್ಳಲು ಇವರು ಬಿಡಲಿಲ್ಲ. ಆದರೆ ಇದೇ ಮಠಾಧೀಶರು ಪರಶುರಾಮನನ್ನು ವಿಷ್ಣುವಿನ ಆರನೇ ಅವತಾರ ಎಂದು ಆರಾಧಿಸುತ್ತಾರೆ. ವಿಷ್ಣು ಪುರಾಣ[ದ] ಪ್ರಕಾರ ಪರಶುರಾಮ ಇಡೀ ವಿಶ್ವವನ್ನು 21 ಬಾರಿ ಸು[ತ್ತಿ] ಸಪ್ತಸಾಗರ ದಾಟಿ ಹೋಗಿ ಸಪ್ತ ಖಂಡಗಳಲ್ಲಿ ಇ...

ದೊರೆ ಯಾರಾದರೇನು ಆಟ-ಅಧಿಕಾರವೆಲ್ಲ ಇನ್ನು ಶಕುನಿಯದ್ದೇ..

ನಾನಿನ್ನೂ ಸೆಟ್‌ಟಾಪ್ ಬಾಕ್ಸ್ ಹಾಕಿರದ ಕಾರಣ ನನ್ನ ಟಿವಿಯಲ್ಲಿ ಯಾವ ನ್ಯೂಸ್ ಚಾನೆಲ್‌ಗಳೂ ಇಲ್ಲ, ಆ ಕಾರಣ ಪೇಜಾವರರ 'ತಿಕಹಾಸಿಕ' ಪರ್ಯಾಯ (ಅರ್ಥಾತ್ ಹೊಸ ಮಣೆಯಲ್ಲಿ ಕುಂಡಿಯೂರಿ ಕುಳಿತುಕೊಳ್ಳುವ ಕಾರ್ಯಕ್ರಮ) ವನ್ನು ಕಣ್ತುಂಬಿಸಿಕೊಳ್ಳೋ ಭಾಗ್ಯ ನನಗೊದಗಲೇ ಇಲ್ಲ. ಅಂತೂ ಉಡುಪಿಯಲ್ಲಿ ಹಾಸ್ಯಾಸ್ಪದ 'ಐತಿಹಾಸಿಕ' ಘಟನೆಯೊಂದು ಮುಗಿದೇಬಿಟ್ಟಿತು. ಇನ್ನು ಬರೀ ಬೋರೇ ಬೋರು.

ಕಾಂಗ್ರೆಸ್‌ನ "ವೇಸ್ಟ್ ಬಾಡಿ" ಆಸ್ಕರಣ್ಣನ (ಈ ಫರ್ನಾಂಡಿಸ್ ಇಲ್ಲಿನ ಜನರ ಓಟಿನ ಋಣಕ್ಕೆ ಆಗಾಗ ಧೋಖಾ ಬಗೆಯುತ್ತಿದ್ದರೆ ಕರಾವಳಿಯ ಇನ್ನೊಬ್ಬ ಫರ್ನಾಂಡಿಸ್ ಅರ್ಥಾತ್ ಜಾರ್ಜ್ ಫರ್ನಾಂಡಿಸ್ ಇಲ್ಲಿನ ಜನರ ಓಟಿನ ಹಂಗಿಲ್ಲದೆಯೂ ಕೊಂಕಣ ರೈಲಿನಂತಹ ಕೊಡುಗೆಯನ್ನು ನೀಡಿದ್ದರು ಹಾಗಾಗಿ ಮೇಲಿನ ಈ ಬಿರುದು) ಕೃಪೆಯಿಂದ ಸರಕಾರದ ಮೇಲೆ ಪ್ರಭಾವ ಬಳಸಿ ಜನರ ಕೋಟಿಗಟ್ಟಲೆ ಹಣವನ್ನು ಕಳ್ಳ ಕೂಟದ ನಾಟಕವಾದ ಪರ್ಯಾಯವೆಂಬ ಢೋಂಗಿ ಕಾರ್ಯಕ್ರಮಕ್ಕೆ ನುಂಗಿದ ಉಡುಪಿಯ ವಿಪ್ರ ಪಡೆ ಪೇಜಾವರನೆಂಬ ಕುತಂತ್ರಿಯ ಅಧಿಕಾರದಲ್ಲಿ ಇನ್ನಷ್ಟು ದೋಚಲು ಸ್ಕೆಚ್ ಮಾಡಿಕೊಳ್ಳುತ್ತಿವೆ. ಸಾಹಿತ್ಯದ ಗಂಧಗಾಳಿಯೂ ಇಲ್ಲದ ದೇವಸ್ಥಾನಗಳಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವ ಕುಖ್ಯಾತಿಯ ಮಂಗಳೂರಿನ 'ಕಲ್ಕೂರ' ಪಡೆ ತಮ್ಮ ಗುರುಗಳಾದ ಪೇಜಾವರನ ಪರ್ಯಾಯದ ಪ್ರಚಾರದ ಗುತ್ತಿಗೆಯನ್ನು ಸ್ವಯಂ ವಹಿಸಿಕೊಂಡು ಮೊದಲಿಂದಲೂ ಅದನ್ನು 'ನಾಡ ಹಬ್ಬ'ವೆಂದು ಬಿಂಬಿಸುತ್ತಲೇ ಬಂದಿತ್ತು. ಮೂಲತಃ ಪ್ರಸಿದ್ಧ ಜಾಹೀರಾತು ಬಳಗವಾದ ಈ ಗುಂಪು ಪೇಜಾವರ ಹಾಗು ಆತನ ತಿಕ್ಕಲು ಪರ್ಯಾಯವನ್ನು ಬಣ್ಣ ಹಚ್ಚಿ ಐತಿಹಾಸಿಕವೆಂದು ಇದ್ದ ಬದ್ದ ಮಾಧ್ಯಮಗಳಲ್ಲೆಲ್ಲ ಸಾರಿ ಹೇಳುವುದರೊಂದಿಗೆ ವಿವಿಐಪಿಗಳನ್ನೆಲ್ಲ ಬರುವಂತೆ ಆಹ್ವಾನಿಸಿತ್ತು, ಆದರೆ, ಔಟ್‌ಡೇಟೆಡ್ ಅಡ್ವಾಣಿ, ಮಧುಮಗಳು ಸೋಬಕ್ಕ, ಕೋಡಂಗಿ ಸದಯ್ಯ ನಂತವರು ಇದಕ್ಕೆ ಬಂದರೇ ವಿನಃ ಸಿಯೆಂ ಸಿದ್ದರಾಮಯ್ಯ ಬಾರದೇ ಬಹಳ ಒಳ್ಳೆಯ ಕೆಲಸವನ್ನೇ ಮಾಡಿದರು.

ಪರ್ಯಾಯ ಪೀಠ ಏರುವ ಮೊದಲು ಸಂದರ್ಶನವೊಂದರಲ್ಲಿ ಪೇಜಾವರರು ತಮ್ಮ ಹಳೆಯ ಸ್ಟೈಲಿನಲ್ಲಿ 'ಬಾಬ್ರಿ ಮಸೀದಿ ಧ್ವಂಸ ನನಗೆ ಸಂಬಂಧಿಸಿಲ್ಲ, ನಾನದನ್ನು ಮೊದಲಿನಿಂದಲೂ ವಿರೋಧಿಸುತ್ತಾ ಬಂದಂತವನು. ಅದು ಅಚಾತುರ್ಯದಿಂದ ಘಟಿಸಿತೇ ಹೊರತು ಮಸೀದಿಗೆ ಹಾನಿ ಮಾಡಬೇಡಿರೆಂದು ನಾನಲ್ಲಿ ಮೈಕ್ ಹಿಡಿದು ಕೂಗಿ ಕೂಗಿ ಹೇಳುತಲಿದ್ದೆ' ಎಂದಿದ್ದರು. ಇಲ್ಲಿ ಒಂದು ವಿಚಾರ- ಬಾಬ್ರಿ ಮಸೀದಿ ಧ್ವಂಸ ಆಕಸ್ಮಿಕ ವಿಚಾರವಲ್ಲ ಅನ್ನೋದು ಸುಳ್ಳೆಂದು ಯಾವತ್ತೋ ಸಾಬೀತಾದಂತಹ ಸಂಗತಿ. ಗಾಂಧಿ ಹತ್ಯೆ ಮತ್ತು ಗೋದ್ರಾ ಘಟನೆಯಂತೆ ಇದೂ ಕೂಡ ಯೋಜಿತವಾದ ಪ್ಲಾನೇ ಆಗಿತ್ತು, ಅದಕ್ಕಾಗಿ ತಾಲೀಮುಗಳು ನಡೆದಿದ್ದವು, ಪಡೆಗಳು ಸಿದ್ಧಗೊಂಡಿದ್ದವು. ಕಾರಣಾಂತರದಿಂದ ಒಂದು ಪಡೆಗೆ ಅನಾನುಕೂಲ ಎದುರಾದರೆ ಇನ್ನೊಂದು ಪಡೆ ಕಾರ್ಯಾಚರಣೆ ನಡೆಸುವಂತೆ ಸಿದ್ಧಗೊಳಿಸಲಾಗಿತ್ತು, ಅಧಿಕಾರ ಹಿಡಿದ ಪ್ರಧಾನ ಹಾಗು ಮುಖ್ಯಮಂತ್ರಿ ಮತ್ತು ಮಾಮೂಲಿ ಕೆಲಮಂತ್ರಿಗಳು ಅಲ್ಲದೇ ಪೊಲೀಸ್ ಅಧಿಕಾರಿಗಳಿಗೆಲ್ಲ ಈ ಕುರಿತಾಗಿ ನಿರ್ದಿಷ್ಟ ಮುನ್ಸೂಚನೆ ನೀಡಲಾಗಿತ್ತೆಂಬುವುದೆಲ್ಲ ರುಜುವಾತಾದಂತಹ ಸಂಗತಿ. ಇಷ್ಟಿದ್ದೂ ಕೂಡ ರಾಮಜನ್ಮಭೂಮಿ ಬಗ್ಗೆ ಆಗಾಗ ಮಾತನ್ನಾಡುವ, ವಿಎಚ್‌ಪಿ ಮುಖಂಡರೂ ಆಗಿರುವ ಹಾಗು ಸ್ಥಳದಲ್ಲಿ ಪಾಲ್ಗೊಳ್ಳಲೂ ಬರುವಂತಹ ಮುಖ್ಯ ವ್ಯಕ್ತಿಯೆನಿಸಿರುವ (ಕನಸು ನನಸಾಗುವ ಸಂಭ್ರಮವನ್ನು ಕಣ್ತುಂಬಿಕೊಳ್ಳಲು) ಪೇಜಾವರರಿಗೆ ಈ ವಿಚಾರ ಮೊದಲೇ ತಿಳಿದಿರಲಿಲ್ಲವೆಂದರೆ ಅದನ್ನು ನಂಬಲು ಸಾಧ್ಯವೇ? ಎಲ್ಲಾ ಆಗಿ ನಂತರ ಅದು ನನಗೆ ಗೊತ್ತೇ ಇಲ್ಲ ಎನ್ನುವ ಚಾಳಿ ಪೇಜಾವರರಿಗೆ ಹೊಸತಲ್ಲ ಬಿಡಿ. ಅವರನ್ನುವಂತೆ ಪೇಜಾವರರಿಗೆ ಮುಸಲ್ಮಾನರ ಬಗ್ಗೆ ಕಳಕಳಿ ಇದ್ದದ್ದು ನಿಜಕ್ಕೂ ಹೌದಾದರೆ ಆ ಬಗ್ಗೆ ಬಹಿರಂಗವಾಗಿ ಕ್ಷಮೆ ಕೇಳಲಿ ನೋಡುವಾ. ಅದು ಅವರಿಂದ ಆದೀತೆ? ಉಹುಂ.

ಪೇಜಾವರರಿಗೆ ಮಡಿವಂತಿಕೆಯೂ ಬೇಕು ಶೂದ್ರರ ಬೆಂಬಲವೂ ಬೇಕು. ಇದೀಗ ಧನವಂತರಾಗಿರುವ ಶೂದ್ರರನ್ನು ದೂರೀಕರಿಸಲು ಪೇಜಾವರರಿಗೆ ಸಾಧ್ಯವಿಲ್ಲ, ಇಷ್ಟವೂ ಇಲ್ಲ. ಕಳೆದ ಸಂಚಿಕೆಯಲ್ಲಿ ಶ್ರೀಯುತ ಪ್ರವೀಣ್ ಶೆಟ್ಟರು ಹೇಳಿರುವಂತೆ ಬಂಟ ಜನಾಂಗವನ್ನು ಇದೀಗ ಹೆಚ್ಚು ಆಕರ್ಷಿಸಲಾಗುತ್ತಿದೆ. ಗುತ್ತಿನ ಮನೆ ಗತ್ತಿನ ಮನೆಗಳೆಲ್ಲ ಅವರ ನಾಟಕದ ಒಂದು ಪರದೆಗಳೇ ವಿನಹ ಬೇರೇನಲ್ಲ. ಪರ್ಯಾಯಕ್ಕೂ ಮುನ್ನ ಬಂದಂತಹ ಶೂದ್ರರ ಹೊರೆಕಾಣಿಕೆ ಮೆರವಣಿಗೆಯಲ್ಲಿ ಎದ್ದುಕಾಣುವ ಹೊರೆಯ ಗುಂಪೊಂದಿತ್ತು, ಅದು ಬ್ಯಾಂಕೊಂದರ ಟೀ ಶರ್ಟ್ ಧರಿಸಿದ ಮೂಟೆ ಹೊತ್ತವರ ಗುಂಪು. ಬ್ಯಾಂಕಿನ ಎಜಿಎಮ್ ಆದ ಮಹಿಳೆಯೊಬ್ಬರು 25 ಕೆಜಿಯ ಈ ಅಕ್ಕಿ ಮೂಟೆಯನ್ನು ಹೊತ್ತು 2 ಕಿಮೀ ನಡೆದು ಪೇಜಾವರ ಮಠಕ್ಕೆ ಅರ್ಪಿಸಿದ್ದರು. (ಸ್ವತಃ ಬ್ರಾಹ್ಮಣರೇ ಆದ ಕಾರಂತರ ಅಣ್ಣ ಕೋಲ ಕಾರಂತರು ಈ ಉಡುಪಿ ಮಠದವರನ್ನು ಬಿಟ್ಟಿಯಾಗಿ ಉಂಡು ಮಠದ ಸುತ್ತ ಠಳಾಯಿಸುವ ಉಂಡಾಡಿಗಳು ಎಂದು ಕರೆದಿದ್ದರು) ಇಂತವರೆಲ್ಲ ಇರುವಾಗ ಪ್ರಗತಿಪರರ ಮಾತೆಲ್ಲ ಬರಿಯ ಅರಣ್ಯ ರೋದನವೆನಿಸದೆ ಇರದೇ?



ಸಿದ್ದರಾಮಯ್ಯ ಬಾರದೇ ಇದ್ದರೂ ದಲಿತರಾದ ಸಚಿವ ಆಂಜನೇಯ ಪೇಜಾವರರನ್ನು ನಡೆದಾಡುವ ದೇವರೆಂದು ಕರೆದರೆ ಇನ್ನೊಂದು ಕಡೆ ರೋಹಿತ್ ವೇಮುಲರ ದುರಂತಕ್ಕೆ ಕಾರಣರಾದ ಎಬಿವಿಪಿಗಳ ವಿರುದ್ಧ ದಲಿತರೆಲ್ಲ ಸೇರಿ ಚಳವಳಿಗಿಳಿದರೆ ಆವತ್ತು ಪೇಜಾವರ ಕೃಪೆಗೆ ರೋಮಾಂಚನಗೊಂಡು ಇಂದಿಗೂ ಆ ನೆಟ್ಟಗಿನ ರೋಮಗಳನ್ನು ಹಾಗೆಯೇ ಉಳಿಸಿಕೊಂಡಿರುವ (ಮೈಕೆಲ್ ಜಾಕ್ಸನ್‌ನನ್ನು ಮುಟ್ಟಿದ ಹುಡುಗಿಯೊಬ್ಬಳು ಕೆಲ ಸಮಯ ಆ ಫಿಂಗರ್ ಪ್ರಿಂಟ್ ಹೋಗಬಾರದೆಂದು ಸ್ನಾನವನ್ನೇ ಮಾಡಲಿಲ್ಲವಂತೆ) ದಲಿತ ಸ್ವಾಮಿಯೊಬ್ಬ ದಾವಣಗೆರೆಯಲ್ಲಿ ಇದೇ ಪುಂಡ ದಲಿತ ವಿರೋಧಿ ಎಬಿವಿಪಿಯ 25ನೇ ರಾಜ್ಯ ಸಮ್ಮೇಳನವನ್ನು ಉದ್ಘಾಟಿಸಹೋಗುತ್ತಾನೆ. ಇದು ಪೇಜಾವರರ ತಾಕತ್ತು ಮತ್ತು ಖದರ್?!!

ಪರ್ಯಾಯವನ್ನು ಇಡೀ ಹಿಂದೂ ಸಮುದಾಯದ ಹಬ್ಬ ಎನ್ನುವಂತೆ ಬಿಂಬಿಸಿಕೊಂಡ ಪೇಜಾವರನಿಗೆ ಕೊನೆಗೂ ತನ್ನದೇ ಮಠದ ಎಲ್ಲಾ ಯತಿಗಳನ್ನು ಒಟ್ಟಿಗೆ ಕೂಡಿಸಿಕೊಳ್ಳಲು ಆಗಲೇ ಇಲ್ಲ. ತನ್ನದು ಬೆನ್ನಿಗೆ ತಾಗಿದಂತಹ ಹೊಟ್ಟೆಯಾದರೂ ಹಸಿವು ಮಾತ್ರ ದೊಡ್ಡದೆಂದು ತೋರಿಸಿಕೊಳ್ಳಲು ನೀರಾ ರಾಡಿಯಾಳಂತಹ 420 ಗಿರಾಕಿಯನ್ನು ಖುದ್ದು ಕರೆದು ಸನ್ಮಾನಿಸಿದ ಪೇಜಾವರ ಸ್ವಾಮಿ ಸ್ಥಳೀಯ ಜನರಿಗೆ ಯುಪಿಸಿಎಲ್ ಕಂಪೆನಿಯ ವಿರುದ್ಧ ತನ್ನ ಸಾತ್ ಇದೆಯೆಂದು ತೋರಿಸಿಕೊಳ್ಳುತ್ತಲೇ ತಿಂಗಳುಗಳ ಹಿಂದೆ ಅದಾನಿಯನ್ನು ಮಠಕ್ಕೆ ಕರೆಸಿಕೊಂಡು ಸನ್ಮಾನಿಸಿ ಇದೀಗ ಪರ್ಯಾಯಕ್ಕೆ 50 ಲಕ್ಷ ಆ ಕಂಪೆನಿಯಿಂದ ಪೀಕಿಕೊಂಡಿದ್ದಾನೆಂಬ ಸುದ್ದಿ ಎಲ್ಲೆಡೆ ಹರಡಿದೆ.

ಸ್ವಾರ್ಥಕ್ಕಾಗಿ ಏನನ್ನೂ ಮಾಡಲು ಹೇಸದ ಈ ಅಭಿನವ ಕೌಟಿಲ್ಯನ ಲೆಕ್ಕಾಚಾರ -ನಡೆಗಳು ಯಾವತ್ತಿದ್ದರೂ ನಿಗೂಢ. ಇಂತವರಿಗಿಂತ ನೇರವಾಗೇ ಅಕ್ರಮಗಳನ್ನು ಎಸಗುವ ರಾಜಕಾರಣಿಗಳೇ ಎಷ್ಟೋ ಮೇಲು.

-ಅವಿನಾಶ್ ಎಮ್.ಎಸ್. ನೆಲ್ಲಿಕಾರ



ಕ್ಷತ್ರಿಯರನ್ನು ಹುಡುಕಿ ಹುಡುಕಿ ಕೊಂದು ಹಾಕಿದನಂತೆ. ಆಗ ಆಫ್ರಿಕಾದಲ್ಲಿ ನೀಗ್ರೋ ಜನಾಂಗದ ಕಪ್ಪುಕಪ್ಪು ಅರೆಬೆತ್ತಲೆ ಕ್ಷತ್ರಿಯರು ಇದ್ದರಂತೆ. ನಮ್ಮದೇ ಏಷಿಯಾದಲ್ಲೂ ಚೀನಾ ಜಪಾನ್ ಇಂಡೋನೇಷಿಯಾದಲ್ಲೂ ಸಣ್ಣ ಚಿಂಕಿ ಕಣ್ಣಿನ ಚಪ್ಪಟೆ ಮೂಗಿನ ಹಳದಿ ಬಣ್ಣದ ಕ್ಷತ್ರಿಯರು ಇದ್ದರಂತೆ. ಇವರನ್ನೆಲ್ಲ ಪರಶುರಾಮ ಫಿನಿಷ್ ಮಾಡಿದನಂತೆ. ದಕ್ಷಿಣ ಅಮೆರಿಕಾಕ್ಕೂ ಕೊಲಂಬಸನಿಗಿಂತ ಮೊದಲೇ ಪರಶುರಾಮ ಹೋಗಿ ಅಲ್ಲಿಯ ಮಾಯಾ-ಇಂಕಾ-ಅಜ್ಟೆಕ್ ಜನಾಂಗದ ಕ್ಷತ್ರಿಯರನ್ನು ಕೊಚ್ಚಿ ಹಾಕಿ ಬಂದಿದ್ದನಂತೆ. ರಶಿಯಾ ಯುರೋಪಿನಲ್ಲಿ ಕೆಂಪು ಚರ್ಮದ ಕ್ಷತ್ರಿಯರನ್ನು ಪರಶುರಾಮ ಕೇವಲ ಒಂದು ಪಂಚೆ ಉಟ್ಟು ಹೋಗಿ ಕೊಂದು ಬಂದನಂತೆ. ಅರೇಬಿಯಾ ಇರಾಕ್ ಇರಾನ್ ದುಬೈಗೆ ಪರಶುರಾಮ ಒಂಟೆಯ ಮೇಲೆ ಹೋಗಿ ಅಲ್ಲಿಯ ಗಡ್ಡಧಾರಿ ಕ್ಷತ್ರಿಯರನ್ನು ಕೊಂದು ಬ್ಯಾರೆಲ್ ಗಟ್ಟಲೆ ರಕ್ತ ಹರಿಸಿದ್ದನಂತೆ. ನಂತರ ಅರಬಸ್ತಾನದ ಕ್ಷತ್ರಿಯರ ಈ ರಕ್ತವೇ ಭೂಮಿಯಡಿ ಸೋರಿ ಕ್ರೂಡ್ ಆಯಿಲ್ ಆಗಿ ಈಗ ಅದು ನಮಗೆ ಪೆಟ್ರೋಲ್ ಡೀಸೆಲ್ ರೂಪದಲ್ಲಿ ಲಭ್ಯವಾಗುತ್ತಿವೆ ಎಂಬುದು ಮೋದಿಯವರ ಕುವಿಜ್ಞಾನಿಗಳ ಸಂಶೋಧನೆ! ಉತ್ತರ ಧ್ರುವದಲ್ಲೂ ಎಸ್ಕಿಮೊ-ಕ್ಷತ್ರಿಯರು ಇದ್ದರಂತೆ. ಆ ರಕ್ತ ಹೆಪ್ಪುಗಟ್ಟುವ ಚಳಿಯಲ್ಲೂ ಪರಶುರಾಮ ಬರಿಮೈಯಲ್ಲಿ ಉತ್ತರ ಧ್ರುವಕ್ಕೆ ಹೋಗಿ ಎಸ್ಕಿಮೊ ಕ್ಷತ್ರಿಯರನ್ನೆಲ್ಲ ಕೊಂದನಂತೆ. ಹೀಗೆ ಏಳು ಖಂಡಗಳನ್ನು 21 ಬಾರಿ ಸುತ್ತಲು ಪರಶುರಾಮ ನೂರಾರು ಸಾರಿ ಸಮುದ್ರ ಉಲ್ಲಂಘನೆ ಹಾಗೂ ವಿದೇಶ ಪ್ರಯಾಣ ಮಾಡಿರಲೇಬೇಕು ಅಲ್ಲವೇ? ಹಾಗಾದರೆ ಪರಶುರಾಮನನ್ನು ಯಾಕೆ ವಿಷ್ಣುವಿನ ದಶಾವತಾರದಿಂದ ಹೊರಗೆ ಇಡಬಾರದು?

ಮೇಲಿನದೆಲ್ಲಾ ವಿಡಂಬನೆಯಾಯಿತು ಬಿಡಿ. ಆದರೆ ಅಷ್ಟ ಮಠಾಧೀಶರಲ್ಲಿ ಸ್ವಲ್ಪವಾದರೂ ವಿವೇಕ ವಿವೇಚನಾ ಶಕ್ತಿ ಇರುವಸ್ವಾಮಿಜಿ ಎಂದರೆ ಈ ಪುತ್ತಿಗೆ ಸುಗುಣೇಂದ್ರ ಸ್ವಾಮಿಗಳು. ಇವರಿಗೆ ಪೇಜಾವರರಂತೆ ಎರಡು ನಾಲಿಗೆಯಿಲ್ಲ, ದ್ವಂದ್ವ ವ್ಯಕ್ತಿತ್ವವೂ ಇಲ್ಲ. ಪೇಜಾವರರಂತೆ ಹಣ ಆಡಂಬರ ವೈಭವ ಸ್ವಪ್ರತಿಷ್ಠೆಯ ಮೋಹ ಪುತ್ತಿಗೆಯವರಿಗೆ ಇಲ್ಲ. ಪೇಜಾವರರು ತನ್ನ ಜಾತಿಯ ಅನುಕೂಲಕ್ಕೆ ತಕ್ಕಂತೆ ಶೂದ್ರ ಶಂಭೂಕ ಮತ್ತು ಇತರ ಪುರಾಣ ಕತೆಗಳನ್ನು ತಿರುಚಿದಂತೆ ಪುತ್ತಿಗೆ ಸ್ವಾಮಿಗಳು ಮಾಡುವುದಿಲ್ಲ. ಬಾಬ್ರಿ ಮಸೀದಿಯ ಗೊಮ್ಮಟದ ಮೇಲೆ ಏರಿ ಕುಡ್ಸೆವ್ ಕುಡ್ಸೆವ್ ಎಂದು ಪುತ್ತಿಗೇಶ್ರೀ ಕೂಗಲಿಲ್ಲ. ಪೇಜಾವರರಂತೆ ಪಕ್ಷ ರಾಜಕೀಯದಲ್ಲಿ ಕೈಯಾಡಿಸುವ ಚಾಳಿ ಮತ್ತು ಸ್ವಪ್ರಚಾರದ ವ್ಯಸನವೂ ಪುತ್ತಿಗೆಯವರಿಗಿಲ್ಲ. ಭಾರಿ ಟೆಲಿಕಾಮ್ ಹಗರಣದ ರೂವಾರಿ ನೀರಾ ರಾಡಿಯಾಳ ರಾಡಿ ಪುತ್ತಿಗೆಯವರಿಗೆ ಇನ್ನೂ ಮೆತ್ತಿಲ್ಲ. ಅದು ಪೇಜಾವರಶ್ರೀಗಳಿಗೆ ಮಾತ್ರ ಮೀಸಲು. ಇಷ್ಟಾದರೂ ಪುತ್ತಿಗೆಯವರು ಪೂಜಾ ಕಾರ್ಯಕ್ಕೆ ಅನರ್ಹರು. ಅವರು ವಿದೇಶಕ್ಕೆ ಹೋಗದೇ ಭಾರತದಲ್ಲಿಯೇ ಇದ್ದುಕೊಂಡು ಎಷ್ಟೇ ಕೆಟ್ಟ ಕೆಲಸ ಮಾಡಿದ್ದರೂ ಅದು ಮುಚ್ಚಿಹೋಗಿ ಅವರು ಪೂಜೆಗೆ ಅರ್ಹರಾಗುತ್ತಿದ್ದರು. ಇದುವೇ ವೈದಿಕ ಧರ್ಮದ ಒಳಸುಳಿ.

-ಆರ್. ಬಿ. ಶೆಣವ, ಮಂಗಳೂರು

ಮನುಷ್ಯರಾದವರು ರೋಹಿತ್‌ಗಾಗಿ ಮಿಡಿಯುತ್ತಾರೆ

ರೋಹಿತ್ ವೇಮುಲ ಅಸ್ಪೃಶ್ಯನೇ ಆಗಿರಲಿ ಅಥವಾ ಬ್ರಾಹ್ಮಣನೇ ಆಗಿರಲಿ, ಆತ ಅಂಬೇಡ್ಕರ್ ಐಡಿಯಾಲಜಿಯಲ್ಲಿದ್ದ, ಮೇಲಾಗಿ ಶೋಷಣೆಗೊಳಗಾಗಿದ್ದ, ಈ (ಅ)ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಷಡ್ಯಂತ್ರಕ್ಕೊಳಗಾಗಿ, ನೊಂದು ಸತ್ತ ಅಸಹಾಯಕ ... ಇಷ್ಟು ಸಾಕು ಮನುಷ್ಯರಾದವರು ಆತನಿಗಾಗಿ ಮಿಡಿಯಲು.

ದತ್ತಾತ್ರೇಯ ಅಸ್ಪೃಶ್ಯ/ದಲಿತನಾದರೂ ಆತ ತಪ್ಪು ಮಾಡಿದರೆ ನೀಚನೆ. ರೋಹಿತ್ ಬ್ರಾಹ್ಮಣನೇ ಆಗಲಿ, ಭೋವಿ, ವಡ್ಡರ್ ಆಗಲಿ, ಆತನ ಬಗ್ಗೆ ಇನ್ನೂ ಹೆಚ್ಚು ಹೆಮ್ಮೆಪಡುತ್ತಾರೆ ಜನ. ಜಾತಿ ನೋಡಿ ಎಷ್ಟು ಹೋರಾಡಬೇಕು, ಎಷ್ಟು ಗೌರವಿಸಬೇಕು, ಎಷ್ಟು ಅಳಬೇಕು, ಎಷ್ಟು ಶೋಷಿಸಬೇಕೆಂದು ಈ ದೇಶದ ದಲಿತರು/ಇತರೆ ಜಾತಿಯ ಮನುಷ್ಯತ್ವ ಇರೋ ಕೋಟ್ಯಾಂತರ ಜನ ಯಾರೂ ಕಲಿತಿಲ್ಲ, ಸೊ, ನೀವು ಇದನ್ನ ಕಲಿಸಬೇಡಿ ಅವರಿಗೆ.

ಇವರು ಹೇಳೋದೇನಂದ್ರೆ "ಸತ್ತವರು ಯಾವ ಜಾತಿಯವನಾಗಿರ್ತಾನೊ, ಅದೇ ಜಾತಿಯವರೆ ಅಳಬೇಕು, ಪ್ರಶ್ನಿಸಬೇಕು. ಬೇರೆ ಯಾರು ಅಳಬಾರ್ದು, ಪ್ರಶ್ನಿಸಬಾರದು" ಅಂತ. ರೋಹಿತನ ಪರ ನೂರಾರು ಜಾತಿಧರ್ಮದ ಜನ ದೇಶದುದ್ದಕ್ಕೂ ಮತ್ತು ವಿದೇಶೀ ವಿದ್ಯಾರ್ಥಿಗಳು ಸಹ ಧ್ವನಿ ಎತ್ತಿದ್ದಾರೆ.

ಇನ್ನೊಂದು ವಿಷಯ: ರೋಹಿತ್ ಸಿಗರೇಟು ಮತ್ತು ಬಿಯರ್ ಕುಡಿಯೋ ಫೋಟೊಗಳನ್ನು ಆತನೇ ಫೇಸ್‌ಬುಕ್‌ನಲ್ಲಿ ಮುಚ್ಚುಮರೆ ಇಲ್ಲದೆ ಹಾಕಿಕೊಂಡಿದ್ದಾನೆ. ಆದರೆ ಚೆಡ್ಡಿಗಳು ಅದೇ ಮಹಾಪಾಪ ಮಾಡಿದ ಅನ್ನೋತರ ಮಾತಾಡುತ್ತಿದ್ದಾರೆ. ಅವರ ಪ್ರಕಾರ ರೋಹಿತ್ ವಿಶ್ವವಿದ್ಯಾಲಯದಲ್ಲಿ ಕ್ಲಾಸ್ ನಡಿಬೇಕಾದ್ರೆ ಸ್ನೇಹಿತರೊಡನೆ ಸೇರಿ ನೀಲಿ ಚಿತ್ರ ನೋಡಬೇಕಿತ್ತಾ? ಗೆಳೆಯನ ಹೆಂಡ್ತೀನ ಹಿಡ್ಕೊಳ್ಳೋಕೆ ಹೋಗಬೇಕಿತ್ತಾ? ಆತನೇನು ಸ್ವಾಮೀಜಿ ಆಗಿ ಮಠ ಕಟ್ಕೊಂಡಿದ್ನಾ?

ಜೊತೆಗೆ 'ಮಂತ್ರಿ ಭಂಡಾರು ದತ್ತಾತ್ರೇಯ ಕೂಡ ಒಬ್ಬ ದಲಿತ ರೀ" ಅಂತಾರೆ.... ಇದರ ಅರ್ಥ ದಲಿತ ಒಬ್ಬ ದಲಿತನ ಸಾವಿಗೆ ಒಂದು ವೇಳೆ ಕಾರಣ ಆದ್ರೂ ದಲಿತರು ಕ್ಷಮಿಸಿ, ಸುಮ್ನೆ ಕೂಡಬೇಕು ಅಂತ! ಮಂತ್ರಿ ದತ್ತಾತ್ರೇಯ ದಲಿತನೇ ಆದ್ರೂ ಬಾಬಾಸಾಹೇಬರ ಐಡಿಯಾಲಜಿಯಿಂದ ಪ್ರಭಾವಕ್ಕೊಳಗಾಗಿದ್ದ ಮನು ಐಡಿಯಾಲಾಜಿಗೆ ಬಲಿಯಾದ ಒಬಿಸಿ ರೋಹಿತ್ ಮುಂದೆ ತುಂಬಾ ಚಿಕ್ಕವರಾಗಿಬಿಡ್ತಾರೆ.

-ಪ್ರಶಾಂತ್ ದಾಸಪ್ಪ, ನಿಲೋಗಲ್

ಕ್ಯಾನ್ಸರ್ ಮಹಾಮಾರಿಯನ್ನು ಗೆದ್ದುಬಂದು ಮತ್ತೆ ಹಲವು ಪಾತ್ರಗಳಲ್ಲಿ ಮಿಂಚುತ್ತಿದ್ದಾರೆ ಮನಿಷಾ ಕೊಯಿರಾಲಾ. ಈವರೆಗೂ ಬಾಲಿವುಡ್‌ನಲ್ಲೇ ಮಿಂಚುತ್ತಿದ್ದ ಈ ಮಿಂಚುಳ್ಳಿ ಸದ್ಯ ಕನ್ನಡ ಸಿನಿಮಾದಲ್ಲಿ ನಟಿಸಿದ್ದಾರೆ. ಇವರ ನಟನೆಯ ಕನ್ನಡದ 'ಗೇಮ್' ಚಿತ್ರವು ಇನ್ನಷ್ಟೇ ತೆರೆ ಕಾಣಬೇಕಿದೆ.

ನನ್ನದು ಸಕ್ಸಸ್‌ಫುಲ್ ಬಿಜಿನೆಸ್ ವುಮನ್ ಪಾತ್ರ: ಮನಿಷಾ



ನೇಪಾಳದ ಈ ಚೆಲುವೆ ಬಾಲಿವುಡ್‌ನಲ್ಲಿ ಮಿಂಚಿದ್ದೇ ಒಂದು ರೋಚಕ ಕತೆ. ಈಗಲೂ ಮನಿಷಾ ಕೊಯಿರಾಲಾ ಬಗ್ಗೆ ಹಲವು ಕತೆಗಳು ಕೇಳಿಬರುತ್ತವೆ. ಆದರೆ ಆ ಸ್ಟೋರಿಗಳಿಗಿಂತ ಭಿನ್ನವಾಗಿ ನಿಲ್ಲುತ್ತಾರೆ ಮನಿಷಾ. ಇವರು ಬಾಲಿವುಡ್‌ನಷ್ಟೇ ದಕ್ಷಿಣ ಭಾರತದ ಚಿತ್ರಗಳಲ್ಲೂ ಫೇಮಸ್. ಅದರಲ್ಲೂ 'ಬಾಂಬೆ' ಮತ್ತು 'ದಿಲ್ ಸೇ' ಸಿನಿಮಾಗಳನ್ನು ಯಾರೂ ಮರೆಯುವುದಕ್ಕೆ ಸಾಧ್ಯವಿಲ್ಲ. ಅಂತಹ ಮನಿಷಾ ಸದ್ಯ ಕನ್ನಡ ಸಿನಿಮಾದಲ್ಲೂ ನಟಿಸಿದ್ದಾಳೆ. ಆ ಸಿನಿಮಾದ ಕುರಿತು ನಿರೀಕ್ಷೆಯನ್ನೂ ಇಟ್ಟುಕೊಂಡಿದ್ದಾಳೆ. ಈ ಕುರಿತಾದ ಮಾತುಕತೆ ಇಲ್ಲಿದೆ.

* ಕನ್ನಡಕ್ಕೆ ಮೊದಲ ಬಾರಿಗೆ ಬಂದಿದ್ದೀರಿ. ಏನನಿಸುತ್ತಿದೆ?

ಎಲ್ಲರಿಗೂ ಗೊತ್ತಿರುವಂತೆ ಈಗಾಗಲೇ ನಾನು ದಕ್ಷಿಣ ಭಾರತದ ಹಲವು ಭಾಷೆಗಳ ಚಿತ್ರದಲ್ಲಿ ನಟಿಸಿದ್ದೇನೆ. ಹಾಗಾಗಿ ಕನ್ನಡ ಚಿತ್ರದಲ್ಲಿ ನಟಿಸುವಂತೆ ಕೇಳಿಕೊಂಡಾಗ ಏನೂ ಅನಿಸಲಿಲ್ಲ. ಆದರೆ ಪಾತ್ರದ ಬಗ್ಗೆ ಕೇಳಿದಾಗ ಥ್ರಿಲ್ ಆದೆ. ಅಲ್ಲದೇ ಕನ್ನಡ ಸಿನಿಮಾಗಳ ಬಗ್ಗೆ ಕೊಂಚ ತಿಳಿದುಕೊಂಡಿದ್ದೇನೆ. ಕೇಳಿಯೂ ಇದ್ದೇನೆ. ಇಂತಹ ರಂಗದಲ್ಲಿ ಅವಕಾಶ ಸಿಕ್ಕಿದ್ದು ಖುಷಿ ಆಗುತ್ತಿದೆ.

* ಕ್ಯಾನ್ಸರ್‌ನಿಂದಾಗಿ ಸಾವಿನ ಬಾಗಿಲು ತಟ್ಟಿದವರು ನೀವು. ಅದನ್ನು ನೆನಪಿಸಿಕೊಂಡರೆ ಈಗಲೂ ಭಯ ಅನಿಸುತ್ತಾ?

ಭಯ ಅಂತಲ್ಲ, ಅದು ನೆನಪಿಸಿಕೊಳ್ಳದೇ ಇರುವಂತಹ ಘಟನೆ. ಯಾವುದೇ ಕಾರಣಕ್ಕೂ ಭಯ ಪಡಬಾರದು ಅಂತ ತೀರ್ಮಾನಿಸಿದ್ದೆ. ಹಾಗೆಯೇ ನಡೆದುಕೊಂಡೆ. ಧೈರ್ಯಕ್ಕಿಂತ ಮತ್ತೊಂದು ಔಷಧಿ ಇಲ್ಲ ಅನ್ನುವುದು ನನ್ನ ಭಾವನೆ. ಎಂಥ ಕಾಯಿಲೆ ಇದ್ದರೂ ಮೊದಲು ನಾವು ಅದನ್ನು ಸ್ವೀಕರಿಸಲು ಕಲಿತುಕೊಳ್ಳಬೇಕು. ಆಮೇಲೆ ಟ್ರೀಟ್‌ಮೆಂಟ್ ತೆಗೆದುಕೊಳ್ಳಬೇಕು. ನನಗೆ ಕ್ಯಾನ್ಸರ್ ಇದೆ ಅಂದಾಗ ಇಡೀ ಕುಟುಂಬವೇ ನನ್ನ ಸಹಾಯಕ್ಕೆ ನಿಂತಿತು. ಅದರಲ್ಲೂ ಅಭಿಮಾನಿಗಳ ಹಾರೈಕೆ ದೊಡ್ಡದು. ಈ ಹೋರಾಟದಲ್ಲಿ ನಾನು ಗೆಲ್ಲಲಿಲ್ಲ. ಎಲ್ಲರೂ ಸೇರಿ ನನ್ನನ್ನು ಗೆಲ್ಲಿಸಿದರು.

* ಈ ಹಿಂದೆ ನೀವು ಮಡಿಕೇರಿಗೆ ಬಂದಾಗ ಸ್ಯಾಂಡಲ್‌ವುಡ್‌ನಲ್ಲಿ ಅವಕಾಶ ಸಿಕ್ಕರೆ ನಟಿಸುತ್ತೇನೆ ಎಂದು ಹೇಳಿದ್ದೀರಿ. ಆಗಲೇ ನಿಮಗೆ ಈ ಬಗ್ಗೆ ಸೂಚನೆ ಸಿಕ್ಕಿತ್ತಾ?

ಹಾಗೇನೂ ಇಲ್ಲ. ಪತ್ರಕರ್ತರು ಪ್ರಶ್ನೆ ಕೇಳಿದರು. ನಟಿಸುತ್ತೇನೆ ಅಂತ ಹೇಳಿದ್ದೆ. ಕಲಾವಿದರಿಗೆ ಭಾಷೆ ಮತ್ತು ಗಡಿ ಇಲ್ಲ. ಅವರಿಗೆ ನಟನೆಯಷ್ಟೇ ಮುಖ್ಯ. ಹೀಗಾಗಿ ಆ ಮಾತನ್ನು ಹೇಳಿದ್ದೆ. ಈಗ ಅದು ನಿಜವಾಗಿದೆ. ಅದು ಕೇವಲ ಕಾಕತಾಳೀಯ. ಗೇಮ್ ಸಿನಿಮಾದ ನಿರ್ದೇಶಕ ಎ.ಎಂ.ಆರ್.ರಮೇಶ್ ಅವರು ಸಿನಿಮಾದ ಕತೆ ಹೇಳಿದರು. ಅಲ್ಲದೇ ಪಾತ್ರದ ಕುರಿತೂ ವಿವರಿಸಿದರು. ನನಗೆ ಒಪ್ಪುವ ಪಾತ್ರ ಅದಾಗಿತ್ತು, ಹೀಗಾಗಿ ಒಪ್ಪಿಕೊಂಡೆ.

* ದಕ್ಷಿಣ ಭಾರತದ ಹಲವು ಚಿತ್ರಗಳಲ್ಲಿ ನಟಿಸಿದ್ದೀರಿ. ಆಗ ಕನ್ನಡ ಸಿನಿಮಾ ಬಗ್ಗೆ ಕೇಳಿದ್ದೀರಾ?

ನಾನು ಸುಳ್ಳು ಹೇಳುವುದಿಲ್ಲ, ನನಗೆ ಕನ್ನಡ ಇಂಡಸ್ಟ್ರಿ ಬಗ್ಗೆ ಏನೂ ಗೊತ್ತಿಲ್ಲ. ದಕ್ಷಿಣ ಭಾರತದ ಚಿತ್ರಗಳನ್ನು ಮಾಡುವಾಗ ಅಲ್ಪಸ್ವಲ್ಪ ತಿಳಿದುಕೊಂಡಿದ್ದೆ. ತಮಿಳು, ಮಲೆಯಾಳಂ ಸಿನಿಮಾ ಮಾಡುವಾಗ ಕೊಂಚ ಗೊತ್ತಿತ್ತು. ಆಯಾ ಇಂಡಸ್ಟ್ರಿಯಲ್ಲಿ ಕೆಲಸ ಮಾಡಿದಾಗ, ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯ ಆಗುತ್ತದೆ. ಈಗ ಸಿನಿಮಾ ಮಾಡುತ್ತಿದ್ದೇನೆ. ಖಂಡಿತಾ ತಿಳಿದುಕೊಳ್ಳುತ್ತೇನೆ.

* 'ಗೇಮ್' ಚಿತ್ರದಲ್ಲಿ ನಿಮ್ಮದು ಯಾವ ರೀತಿಯ ಪಾತ್ರ?

ಸಕ್ಸಸ್‌ಫುಲ್ ಬಿಸಿನೆಸ್ ವುಮನ್ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಆಗಲೇ ಆ ಪಾತ್ರದ ಬಗ್ಗೆ ನಿರ್ದೇಶಕರು ಹೇಳಿದ್ದಾರೆ. ಹೀಗಾಗಿ ನಾನು ಮತ್ತೆ ಪಾತ್ರದ ಬಗ್ಗೆ ವಿವರಿಸಲಾರೆ. ಪವರ್‌ಫುಲ್ ಪಾತ್ರವದು. ಆ ಪಾತ್ರದ ಹಿಂದೆ ರೋಚಕವಾದ ಕತೆ ಇದೆ. ಅದೇ ಸಿನಿಮಾದ ಜೀವಾಳ. ಅನುಭವಿ ಕೋ ಸ್ಟಾರ್ ಜತೆ ಕೆಲಸ ಮಾಡುತ್ತಿದ್ದೇನೆ. ಹೀಗಾಗಿ ಪಾತ್ರಕ್ಕೆ ಇನ್ನಷ್ಟು ತೂಕ ಬರಲಿದೆ.

* ಬೆಂಗಳೂರು ನಿಮಗೆ ಎಷ್ಟು ಹತ್ತಿರ?

ನಾನು ತುಂಬ ಸಲ ಬೆಂಗಳೂರಿಗೆ ಬಂದಿದ್ದೇನೆ. ಅಲ್ಲದೇ ಸಾಕಷ್ಟು ನನ್ನ ಫ್ರೆಂಡ್ಸ್ ಇಲ್ಲಿದ್ದಾರೆ. ಖುಷಿ ಕೊಡುವ ಊರುಗಳಲ್ಲಿ ಬೆಂಗಳೂರು ಒಂದು. ಅದೆಷ್ಟೋ ಸಲ ನನಗೆ ಥ್ರಿಲ್ ನೀಡಿದೆ.

* ನಟನೆಯ ಜತೆ ನಿರ್ಮಾಣಕ್ಕೂ ಇಳಿದವರು ನೀವು. ಆನಂತರ ನಿರ್ಮಾಣವನ್ನು ನಿಲ್ಲಿಸಿದ್ದು ಯಾಕೆ?

'ಪೈಸಾ ವಸೂಲ್' ನಂತರ ಮತ್ತೆ ನಿರ್ಮಾಣಕ್ಕೆ ಇಳಿಯಲಿಲ್ಲ. ಎಲ್ಲರಿಗೂ ಗೊತ್ತಿರುವಂತೆ ಆ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲಲಿಲ್ಲ. ಸದ್ಯ ಸಿನಿಮಾ ನಿರ್ದೇಶಿಸುವ ಕನಸಿದೆ. ಅದಕ್ಕೆ ಸೂಕ್ತ ಸಮಯ ಕೂಡಿ ಬರಬೇಕು.

* ಸಿನಿಮಾದ ಬಗ್ಗೆ ನಿಮ್ಮ ನಿರೀಕ್ಷೆ ಎಷ್ಟಿದೆ?

ಪ್ರತಿ ಪಾತ್ರ ಮಾಡಿದಾಗಲೂ ನಿರೀಕ್ಷೆ ಇದ್ದೇ ಇರುತ್ತದೆ. ನಾವು ಪ್ರೇಕ್ಷಕರ ಪ್ರತಿಕ್ರಿಯೆಗಾಗಿ ಕಾಯುವವರು. ಹೀಗಾಗಿ ಕನ್ನಡದ ಪ್ರೇಕ್ಷಕರು ಈ ಸಿನಿಮಾವನ್ನು ಹೇಗೆ ಸ್ವೀಕರಿಸುತ್ತಾರೆ ಅನ್ನುವ ಕುತೂಹಲವಂತೂ ಇದ್ದೇ ಇದೆ. ■



‘ರಿಕ್ಕಿ’ ಪ್ರತಿಕ್ರಿಯೆಗೆ ಸುಸ್ತಾದ ರಕ್ಷಿತ್

ಸಾಮಾಜಿಕ ಜಾಲತಾಣದಲ್ಲಿ ಭರ್ಜರಿ ಪ್ರಚಾರ ಪಡೆದಿದ್ದ ‘ರಿಕ್ಕಿ’ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಮಕಾಡೆ ಮಲಗಿದೆ. ಹೀಗಾಗಿ ರಕ್ಷಿತ್ ಶೆಟ್ಟಿ ಆತಂಕಗೊಂಡಿದ್ದಾರೆ. ಅವರ ನಿರೀಕ್ಷಿತ ‘ಉಳಿದವರು ಕಂಡಂತೆ’ ಸಿನಿಮಾ ಕೂಡ ನಿರ್ಮಾಪಕರಿಗೆ ನಷ್ಟವನ್ನುಂಟುಮಾಡಿತ್ತು. ಅಲ್ಲದೇ ‘ವಾಸ್ತು ಪ್ರಕಾರ’ ಕೂಡ ಬಾಕ್ಸ್ ಆಫೀಸ್‌ನಲ್ಲಿ ಸದ್ದು ಮಾಡಲಿಲ್ಲ. ಆದರೂ ‘ರಿಕ್ಕಿ’ ಬಗ್ಗೆ ಅಪಾರ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿತ್ತು. ಈ ಸಿನಿಮಾ ಕೂಡ ನಿರ್ಮಾಪಕರಿಗೆ ದುಡ್ಡು ತಂದುಕೊಟ್ಟಿಲ್ಲ. ಹೀಗಾಗಿ ಸಹಜವಾಗಿಯೇ ರಕ್ಷಿತ್ ಆತಂಕಗೊಂಡಿದ್ದಾರೆ. ಮುಂದಿನ ಸಿನಿಮಾ ಭವಿಷ್ಯದ ಬಗ್ಗೆ ಚಿಂತಿಸುತ್ತಿದ್ದಾರೆ.

‘ರಿಕ್ಕಿ’ ಸಿನಿಮಾ ನಿರೀಕ್ಷಿತ ಮಟ್ಟಕ್ಕೆ ತಲುಪದೇ ಇರಲು ಹಲವು ಕಾರಣಗಳಿವೆ. ಹಿಂದಿ ಸಿನಿಮಾಗಳ ಪ್ರೇಕ್ಷಕರಿಗಷ್ಟೇ ಗೊತ್ತಿರುವ ಸಿನಿಮಾ ಮಂದಿರಗಳಲ್ಲಿ ಈ ಚಿತ್ರ ಬಿಡುಗಡೆ ಆಗಿದೆ. ಅಲ್ಲದೇ ಸಾಮಾನ್ಯ ಪ್ರೇಕ್ಷಕನಿಗೆ ಅರ್ಥ ಆಗದೇ ಇರುವ ಕತೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಜೊತೆಗೆ ಸಿನಿಮಾ ಬಿಡುಗಡೆ ಆಗುತ್ತಿದೆ ಅನ್ನುವ ಮಾಹಿತಿ ಬಹುತೇಕರಿಗೆ ಗೊತ್ತಾಗಿಲ್ಲ. ಹೀಗಾಗಿ ‘ರಿಕ್ಕಿ’ಯ ಈ ಪರಿಸ್ಥಿತಿಗೆ ಯಾರನ್ನು ದೂರಬೇಕು ಅನ್ನುವುದು ಸ್ವತಃ ರಕ್ಷಿತ್‌ಗೂ ಗೊತ್ತಾಗುತ್ತಿಲ್ಲ.

ರಕ್ಷಿತ್ ಉತ್ತಮ ನಟ ಅನ್ನುವುದಕ್ಕಿಂತ ಅವರೊಬ್ಬ ಉತ್ತಮ ನಿರ್ದೇಶಕ. ಹೀಗಾಗಿ ನಟನೆಗಿಂತ ನಿರ್ದೇಶನದಲ್ಲೇ ಮುಂದುವರೆಯಲಿ ಅನ್ನುವುದು ಬಹುತೇಕರ ಅಭಿಪ್ರಾಯ. ಇದು ರಕ್ಷಿತ್‌ಗೂ ಗೊತ್ತಾದಂತೆ ಕಾಣುತ್ತಿದೆ. ಹೀಗಾಗಿ ರಕ್ಷಿತ್ ಮತ್ತೆ ನಿರ್ದೇಶನದತ್ತ ಮುಖ ಮಾಡಿದ್ದಾರೆ. ಸುದೀಪ್ ಚಿತ್ರಕ್ಕೆ ಆಕ್ಷನ್ ಕಟ್ ಹೇಳಲು ತಯಾರಿ ಮಾಡಿಕೊಳ್ಳುತ್ತಿದ್ದಾರೆ.

ಪವರ್‌ಸ್ಟಾರ್ ವಿರಾಟ್



ಕನ್ನಡ ಸಿನಿಮಾ ರಂಗದ ಪವರ್‌ಸ್ಟಾರ್ ಎಂದರೆ ಪುನೀತ್ ರಾಜ್‌ಕುಮಾರ್. ಅವರ ಅಭಿಮಾನಿಗಳು ತಮ್ಮ ನೆಚ್ಚಿನ ನಟನನ್ನು ಕರೆಯುವುದೇ ಹಾಗೆ. ಆದರೆ ‘ವಿರಾಟ್’ ಸಿನಿಮಾದ ನಂತರ ಈ ಪಟ್ಟ ದರ್ಶನ್ ಪಾಲಾಗುವ ಅಪಾಯವಿದೆ. ಕಾರಣ ‘ವಿರಾಟ್’ ಸಿನಿಮಾದಲ್ಲಿ ದರ್ಶನ್ ಪವರ್‌ಸ್ಟಾರ್ ಆಗಿ ಮಿಂಚಿದ್ದಾರೆ. ಅಂದರೆ, ವಿದ್ಯುತ್ ಸಮಸ್ಯೆಯನ್ನು ಹೋಗಲಾಡಿಸುವ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಹೀಗಾಗಿ ಸಿನಿಮಾ ಹಿಟ್ ಆದರೆ ದರ್ಶನ್ ಪವರ್‌ಸ್ಟಾರ್ ಆಗಲಿದ್ದಾರೆ. ಇದೇ ವಾರ ಬಿಡುಗಡೆ ಆಗುತ್ತಿರುವ ‘ವಿರಾಟ್’ ಸಿನಿಮಾ ಶುರುವಾಗಿ ನಾಲ್ಕು ವರ್ಷಗಳೇ ಕಳೆದಿವೆ. ಹಣಕಾಸಿನ ಮುಗ್ಗಟ್ಟಿನಿಂದಾಗಿ ಚಿತ್ರದ ಶೂಟಿಂಗ್ ಅರ್ಧಕ್ಕೆ ನಿಂತಿತ್ತು. ಕಲ್ಯಾಣ್ ಅನ್ನುವ ನಿರ್ಮಾಪಕರು ಈ ಚಿತ್ರವನ್ನು ಖರೀದಿಸಿ, ಸಿನಿಮಾ ಕಂಪ್ಲೀಟ್ ಮಾಡಿದ್ದಾರೆ. ಹಾಗಾಗಿ ಚಿತ್ರವು ಈಗ ಬಿಡುಗಡೆ ಆಗುತ್ತಿದೆ. ಇದು ಹೆಚ್.ವಾಸು ನಿರ್ದೇಶನದಲ್ಲಿ ಮೂಡಿ ಬಂದಿರುವ ಸಿನಿಮಾ. ಮೂವರು ನಾಯಕಿಯರು ಸಿನಿಮಾದಲ್ಲಿದ್ದಾರೆ. ಸುಹಾಸಿನಿ ಸೇರಿದಂತೆ ಹೆಸರಾಂತ ನಟನಟಿಯರು ತಾರಾಗಣದಲ್ಲಿದ್ದಾರೆ. ಸಿನಿಮಾದ ವಿಶೇಷತೆ ಅಂದರೆ ಸುಹಾಸಿನಿ ಈ ಚಿತ್ರದಲ್ಲಿ ಜಿಲ್ಲಾಧಿಕಾರಿಯಾಗಿ ನಟಿಸಿದ್ದಾರೆ.

ಕಲರ್‌ಫುಲ್ ಪಾವನಾ

‘ಗೊಂಬೆಗಳ ಲವ್’ ಸಿನಿಮಾದ ಮೂಲಕ ಸ್ಯಾಂಡಲ್‌ವುಡ್‌ಗೆ ಪರಿಚಯ ಆದ ಪಾವನಾ ಆನಂತರ ಹಲವು ಸಿನಿಮಾಗಳಲ್ಲಿ ಕಾಣಿಸಿಕೊಂಡರು. ಆದರೆ ಅವರಿಗೆ ಹೇಳಿಕೊಳ್ಳುವಂತಹ ಬ್ರೇಕ್ ಸಿಗಲಿಲ್ಲ. ಆದರೂ ಅವರು ಹೊಸ ರೀತಿಯ ಪಾತ್ರಕ್ಕಾಗಿ ತಡಕಾಡುತ್ತಲೇ ಇದ್ದರು. ಈಗ ಹೊಸ ಸಿನಿಮಾದಲ್ಲಿ ಅವರಿಗೆ ಬ್ರೇಕ್ ಸಿಗುವ ಪಾತ್ರ ಸಿಕ್ಕಿದೆಯಂತೆ. ಅದಕ್ಕಾಗಿ ಅವರು ಸಾಕಷ್ಟು ತಯಾರಿ ಮಾಡಿಕೊಂಡು ಕ್ಯಾಮರಾ ಮುಂದೆ ನಿಲ್ಲುತ್ತಿದ್ದಾರಂತೆ.

ಸಾಗರ್ ನಿರ್ದೇಶನದಲ್ಲಿ ಮೂಡಿಬರುತ್ತಿರುವ ‘ಕಲರ್‌ಫುಲ್’ ಚಿತ್ರದಲ್ಲಿ ಪಾವನಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಪ್ರೇಮಕತೆಯನ್ನು ಆಧರಿಸಿದ ಚಿತ್ರ ಇದಾಗಿದ್ದರೂ ಪಾವನಾಗೆ ವಿಭಿನ್ನ ಪಾತ್ರ ಸಿಕ್ಕಿದೆಯಂತೆ.

“‘ಜಟ್ಟ’, ‘ಗೊಂಬೆಗಳ ಲವ್’ ನಂತರ ಹಲವು ಚಿತ್ರಗಳಲ್ಲಿ ನಟಿಸಿದೆ. ಸಿನಿಮಾರಂಗದಲ್ಲಿ ನೆಲೆಯೂರುವಂಥ ಪಾತ್ರಗಳಿಗಾಗಿ ಕಾಯುತ್ತಿದ್ದೆ. ಈಗ ಆ ಆಸೆಯನ್ನು ಪೂರೈಸುವ ಪಾತ್ರ ಸಿಕ್ಕಿದೆ. ಹೀಗಾಗಿ ಮತ್ತಷ್ಟು ತೂಕ ಕಡಿಮೆ ಮಾಡಿಕೊಂಡು, ಆ ಪಾತ್ರಕ್ಕಾಗಿ ತಾಲೀಮು ಮಾಡಿಕೊಂಡಿದ್ದೇನೆ. ನಾಯಕ ಹೊಸಬನಾದರೂ, ಇಬ್ಬರಿಗೂ ಈ ಸಿನಿಮಾ ಹೆಸರು ತಂದುಕೊಡಲಿದೆ” ಅನ್ನುವುದು ಪಾವನಾ ಮಾತು.





ಸಿದ್ಧ ಸೂತ್ರಕ್ಕೆ ಜೋತು ಬಿದ್ದ ಭಟ್

ನಿರ್ದೇಶಕ ಯೋಗರಾಜ್ ಭಟ್ ಮತ್ತೆ ಸಿದ್ಧ ಮಾದರಿಯ ಕತೆಯೊಂದ[illegible] ಸಿನಿಮಾ ಮಾಡುತ್ತಿದ್ದಾರೆ. ಹೀಗಾಗಿ ಅವರ ಅಭಿಮಾನಿಗಳು ಮ[illegible] ಬೇಸರಗೊಂಡಿದ್ದಾರೆ. ಅವರ ‘ಮಣಿ’ ಸಿನಿಮಾದಿಂದ ಮೊನ್ನೆಯ[illegible] ಬಿಡುಗಡೆಯಾದ ‘ವಾಸ್ತು ಪ್ರಕಾರ’ ಸಿನಿಮಾದವರೆಗೂ ಒಂದೇ ಮಾದರಿಯ[illegible] ಚಿತ್ರ ಮಾಡಿದ್ದಾರೆ ಭಟ್. ಇನ್ನಷ್ಟೇ ಮುಹೂರ್ತ ಆಗಬೇಕಿರುವ ‘ನ[illegible] ಹೆಸರೇ ಅನುರಾಗಿ’ ಸಿನಿಮಾ ಕೂಡ ಭಟ್ಟರ ಮಾದರಿಯಲ್ಲೇ ಮೂ[illegible] ಬರುತ್ತಿದೆ. ‘ಮಣಿ’ ಚಿತ್ರದಿಂದ ‘ನನ್ನ ಹೆಸರೇ ಅನುರಾಗಿ’ ಸಿನಿಮಾ[illegible] ಕತೆಯನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ, ಯೋಗರಾಜ್ ಭಟ್‌ರ ಸಿನಿಮ[illegible] ಮಾದರಿ ಅರ್ಥವಾಗುತ್ತದೆ. ಎಲ್ಲಾ ಸಿನಿಮಾದಲ್ಲೂ ನಾಯಕ ಉಡಾ[illegible] ಗುಣದವನು. ಮನೆ ಬಿಟ್ಟು ಬರುತ್ತಾನೆ. ಬೇಜವಾಬ್ದಾರಿ ನಾಯಕ. ಅವನ[illegible] ಬರೋಬ್ಬರಿ ಮೂರ್‍ನಾಲ್ಕು ನಾಯಕಿಯರು ಗಂಟು ಬೀಳುತ್ತಾರೆ. ಅದ[illegible] ಹುಡುಗಿಯರಿಗೆ ಬೈಯುವ ಸಂಭಾಷಣೆ. ಬಹುತೇಕ ಸಿನಿಮಾದ ಕತೆಯು[illegible] ಹಾಗೇ ಇದೆ. ಸದ್ಯ ಸೆಟ್ಟೇರಬೇಕಿರುವ ಸಿನಿಮಾದ ಕತೆಯೂ ಹಾಗೇ ಇ[illegible] ಅಲ್ಲದೇ ಮೂವರು ನಾಯಕಿಯರೂ ಇದ್ದಾರೆ.

ಇದೇ ಮೊದಲ ಬಾರಿಗೆ ಯೋಗರಾಜ್ ಭಟ್‌ರು ಈ ಚಿತ್ರದ ಮೂಲ[illegible] ಹೊಸ ನಾಯಕನನ್ನು ಸಿನಿಮಾರಂಗಕ್ಕೆ ಪರಿಚಯಿಸುತ್ತಿದ್ದಾರೆ. ಪ್ರಜ್ಞಾ, ವೈಶಾ[illegible] ದೀಪಕ್, ನಿಖಿತಾ ನಾರಾಯಣ್ ನಾಯಕಿಯರಾಗಿ ಅಭಿನಯಿಸುತ್ತಿದ್ದಾರೆ.

ಬೆಂಗಳೂರಿನಲ್ಲಿ ಸಿನಿಮೋತ್ಸವ

ಜನವರಿ 28ರಿಂದ ಫೆ.4 ರವರೆಗೆ ಬೆಂಗಳೂರು ಮತ್ತು ಮೈಸೂರಿನ[illegible] ಏಕಕಾಲಕ್ಕೆ ಎಂಟನೇ ಬೆಂಗಳೂರು ಅಂತಾರಾಷ್ಟ್ರೀಯ ಸಿನಿಮೋತ್ಸವ ನಡೆಯುತ್ತಿ[illegible] ಇಲ್ಲಿ ಜಗತ್ತಿನ ಪ್ರಮುಖ ಸಿನಿಮಾಗಳಲ್ಲದೇ, ಮೂರು ಕಾಂಪಿಟೇಷನ[illegible] ವಿಭಾಗದಲ್ಲಿ ಚಿತ್ರಗಳು ಪ್ರದರ್ಶನ ಆಗಲಿವೆ. ಅಲ್ಲದೇ ಹೆಸರಾಂತ ನಿರ್ದೇಶಕ[illegible] ನಟರ ಅತ್ಯುತ್ತಮ ಚಿತ್ರಗಳನ್ನು ಆಯ್ಕೆ ಮಾಡಲಾಗಿದ್ದು, ಈ ಬಾರಿ ಹೊಸದಾ[illegible] ಡಾಕ್ಯುಮೆಂಟರಿ, ಬಯೋಪಿಕ್ ಸಿನಿಮಾ ವಿಭಾಗವನ್ನೂ ಸೇರಿಸಿದ್ದಾ[illegible] ಆಯೋಜಕರು. ಫ್ರೀಡಮ್ ಆಫ್ ಸ್ಪೀಚ್ ಅಂಡ್ ಎಕ್ಸಪ್ರೆಸನ್ ಎಂ[illegible] ಥೀಮ್‌ನಲ್ಲೂ ಚಿತ್ರಗಳು ಪ್ರದರ್ಶನಗೊಳ್ಳಲಿವೆ.

ಸಿನಿಮೋತ್ಸವದಲ್ಲಿ ಪ್ರದರ್ಶನ ಆಗುತ್ತಿರುವ ಸಿನಿಮಾಗಳ ಬಹುತೇ[illegible] ನಿರ್ದೇಶಕರು ಭಾಗವಹಿಸಲಿದ್ದು, ಜಪಾನ್, ಪಾಕಿಸ್ತಾನ, ಶ್ರೀಲಂಕಾ, ಬಾಂಗ್ಲಾದೇ[illegible]



ಹೀಗೆ ಅನೇಕ ದೇಶಗಳ ಸಿನಿಮಾ ಮೇಕರ್ಸ್ ಸಂವಾದದಲ್ಲಿ ಪಾಲ್ಗೊಳ್ಳಲಿದ್ದಾರೆ. ಒಂದೇ ಕಡೆ ಸಿನಿಮಾಗಳ ಪ್ರದರ್ಶನವಾದರೆ ಎಲ್ಲರಿಗೂ ಅನುಕೂಲ ಆಗಲಿ[illegible] ಅನ್ನುವ ಉದ್ದೇಶದಿಂದ ಬೆಂಗಳೂರಿನ ಓರಿಯನ್ ಮಾಲ್‌ನಲ್ಲೇ ಹದಿನೈದಕ್ಕೂ ಹೆಚ್ಚು ಸ್ಕ್ರೀನ್‌ಗಳಲ್ಲಿ ಚಿತ್ರಗಳು ಪ್ರದರ್ಶನ ಆಗುತ್ತಿವೆ. ಪ್ರಥಮ ಬಾರಿ[illegible] ಬಯೋಪಿಕ್ ಡಾಕ್ಯುಮೆಂಟರಿಗಳನ್ನು ಪ್ರದರ್ಶನ ಮಾಡುತ್ತಿದ್ದು, ಗಿರೀಶ[illegible] ಕಾಸರವಳ್ಳಿ, ಅಡೂರು ಗೋಪಾಲ್‌ಕೃಷ್ಣನ್ ಸೇರಿದಂತೆ ಹಲವು ನಿರ್ದೇಶಕ[illegible] ಬಯೋಪಿಕ್ ಚಿತ್ರಗಳು ಸಿನಿಮೋತ್ಸವದಲ್ಲಿ ಇರುವುದು ಮತ್ತೊಂದು ವಿಶೇಷ[illegible]

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427,
Fax : 26604536, E-mail :lankesh70@rediffmail.com